REGISTERED NO. M. 1393.

ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ।
ಶಸ್ತ್ರಸ್ತ್ರದ್ವದವಿಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ಮೋನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ರೀಕಂಠಕಂಠೀರವಃ ॥

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಕರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ | ಮಂಗಳೂರು, ೧೯೩೭ನೇ ಇಸವಿ ಜನವರಿ ತಾರೀಕು ೧೯ನೇ ಮಂಗಳವಾರ | ಸಂಚಿಕೆ ೮೩.
VOL. XVIII | MANGALORE, TUESDAY, JANUARY 19, 1937. | NO. 83

ಅಮೃತಾಂಜನ

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವಿನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

AMRUTANJAN DEPOT BOMBAY. MADRAS.

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS,
Madras Branch Secretaries.

1936
OUR VALUATION YEAR

Take a **BOMBAY LIFE** Policy now, and share in the profits



Branches at:	P. B. 337 Mount Rd. Madras.	Visveswarapuram Circle Bangalore City.	Soumyalayam Puthiyara Calicut.	Car Street Mangalore.	Udipi S. India.	Charni Rd. Bombay No. 4.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕ್ ಟೌನ್, ಮದರಾಸು

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ಕುಮಾರ ಬಿಲ್ಡಿಂಗ್ಸ್", ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 3,19,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90%ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮುಕ್ಕೆಯ ಹೆಸರಿನಲ್ಲಿ ೫೦೦೦ ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮಾ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

1936ನೇ ನವಂಬರ ತಿಂಗಳಲ್ಲಿ 10 ಮರಣಗಳು ರಿಪೋರ್ಟಾಗಿರುವದರಿಂದ ಮ್ಯೂಚುವಲ್ ಬೆನೆಫಿಟ್ ಸ್ಕೀಮಿನ ಎಲ್ಲಾ ಮೆಂಬರರೂ ಎಂದಿನಂತೆ ಒಂದು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನೂ ವಾರ್ಷಿಕ ಫೀ ರೂ 1/—ನ್ನೂ ಕಳುಹಿಸಬೇಕಾಗಿ ಅರಿಕೆ ಮತ್ತು ಅವರು ಇಷ್ಟಪಟ್ಟಲ್ಲಿ ತಮ್ಮ ಸರ್ಟಿಫಿಕೇಟುಗಳನ್ನು ಜೀವವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ

ತಿರುಪತಿ ಬಲಿಜಾ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟರುಗಳು.

ಐದನೆಯ ವರ್ಷಾರಂಭ
ಜನವರಿ ೧೯೩೭

ನಕ್ಕು ನಗಿಸಿರಿ!
ಅಳಿಸಿ ನಗಿಸಿರಿ!

ನಗುವ-ನಂದ

ಹಾಸ್ಯರಸಭರಿತ ಸಚಿತ್ರ ಮಾಸಪತ್ರಿಕೆ

ನಗೆಯ ನೆಲೆಯೇ ಆನಂದದ ಬೀಡು! ಇಂದು ನಕ್ಕ ನಗೆಯು ಮುಂದಿನ ರೋಗಕ್ಕೆ ಮದ್ದು. ನಗೆಯ ತಿರುಳನ್ನರಿತವನು ಸರ್ವಜನಪ್ರಿಯನು. ಜನಮನರಂಜನೆಯ ಲೇಖನ, ಕಥೆ ಕವಿತೆ, ವ್ಯಂಗ್ಯ ಚಿತ್ರಗಳಿಂದ ರಂಜಿಸುವ 'ನಗುವ-ನಂದ'ನು ನಿಮ್ಮನ್ನು ಆನಂದಗೊಳಿಸುವುದಲ್ಲದೆ ನಿಮ್ಮ ಗೃಹದಲ್ಲಿ ನಗೆಯ ಲಹರಿಯನ್ನೇ ಹರಿಸುವನು.

ವಾರ್ಷಿಕ ಚಂದಾ:
ಒಂದು ರೂಪಾಯಿ.

ಬಿಡಿ ಪ್ರತಿ:
ಒಂದಾಣೆ.

ಸೋಲ್ ಏಜೆಂಟರು:
ಸುಬೋಧ ಸಾಹಿತ್ಯ ಭಂಡಾರ, ಬೆಂಗಳೂರು ನಗರ.

MODERN PRINTING AT MODERATE RATES!

CONSULT

The Saraswathi Printing Works, Limited,

CANTONMENT, MANGALORE.

ಪ್ರತಿ ಮಂಗಳವಾರವೂ ಶುಕ್ರವಾರವೂ ಪ್ರಕಟವಾಗುವ

'ಕಂಠೀರವ' ಪತ್ರಿಕೆಯನ್ನು ಓದಿರಿ.

ಮಂಗಳವಾರ ಸಂಚಿಕೆ ೧ಕ್ಕೆ ರೂ. ೦—೧—೦. **ಶುಕ್ರವಾರ ಸಂಚಿಕೆ ೧ಕ್ಕೆ ರೂ. ೦—೦—೩**

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ ಖ್ಯಾತಿ ಹೊಂದಿದ ನಮ "ಕಾಫಿ ಕಲ್ಲರ್" ಸೀರೆಗಳನ್ನೇ ಉಪ ಯೋಗಿಸಿರಿ!

ಕಡಿಮೆ ಬೆಲೆಗೆ-ತರತರದ ಬಣ್ಣದ-ನಮೂನೆವಾರು ಅಂಚಿನ-ಸೀರೆಗಳು!

ಒಮ್ಮೆ ಬಂದು ನಮ್ಮ ಅಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಹೈ ಬ್ರದರ್ಸ—ಉಡುಪಿ.

ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್ಸ್ ಏಜಂಟರು: **—ಸೂಜಿರ್ಕಾರ್ ಬ್ರದರ್ಸ್—ಮಂಗಳೂರು.**

ಕೂದಲು ರಂಗು ಬಿಡಿ.

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವದು ನಿಲ್ಲುತ್ತದೆ. ಬೇರಿನಿಂದಲೇ, ಬಿಳಿ ಕೂದಲು ಕಪ್ಪಾಗಿ ಬೆಳೆದು, 60 ವರ್ಷದ ವರೆಗೂ ಹಾಗೇ ಉಳಿಯುತ್ತದೆ. ಹಾಗಾಗದಿದ್ದರೆ, ಎರಡಷ್ಟು ಬೆಲೆಯನ್ನು ಹಿಂದಿರುಗಿಸುವೆವೆಂದು ಗ್ಯಾರೆಂಟಿ. ಕೆಲವು ಬಿಳಿ ಕೂದಲುಗಳಿದ್ದರೆ, ರೂ. 3ರ ಬಾಟಲಿಗೂ, ಹೆಚ್ಚು ಬಿಳಿ ಕೂದಲಿದ್ದರೆ ರೂ. 5ರ ಬಾಟಲಿಗೂ ಅರ್ಧ ಭಾಗಕ್ಕೂ ಹೆಚ್ಚಾಗಿ ಅಥವಾ ಪೂರಾ ಭಾಗದಲ್ಲಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೂ ಆರ್ಡರ್ ಮಾಡಿ.

BAL KALA STORES,
12, 28-7. **P. O. Kansi Simri (Darbhanga.)**

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ,

ಮಂಗಳೂರು.

(ESTD. 1931.)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಮಾಸ್ಟರ್ ಎಚ್. ನಾರಾಯಣ ರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್ ಮತ್ತು ಉಭಯಸಂಗೀತವಿದ್ಯಾವಿಶಾರದ.

ಪಿಟೀಲು, ವೀಣಾ, ಕೊಳಲು ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಜೀತುಗಳ ಗ್ರಾಮೋಫೋನ್‌ಗಳಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ, (S.M.C.)

ಬಾಲಾರ್ಕಮಧು

(ರಿಜಿಸ್ಟರ್ಡ್)

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ಕೂಡಿಕೆ ಹೆಚ್ಚುವುದು. ಪುಡಿ ಧೂರವಿದೆ.

ಬೆಲೆ ೦—೧೨—೦. ಟಿ. ಖ. ೦—೯—೦.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ. ದಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ—

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, (ಮೈಸೂರು ಸೀಮೆ).

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶರೀರಕ ಯೋಗ್ಯತೆಯು ರಮ್ಯವಾದ ಅನುಭವವಾಗಿದೆ ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
GOVT. SOAP FACTORY,
BANGALORE.

ಶಿಶುಸಂಬಂಧವಾದ

ಯಕೃತ್ತು ಮತ್ತು ಪ್ಲೀಹದೋಷಗಳಿಗೆ

ಶಿಶುಸಂಬಂಧವಾದ ಯಕೃತ್ತು ಮತ್ತು ಪ್ಲೀಹದೋಷಗಳು ದೇಹದಲ್ಲಿ ಅಪರೂಪವಾಗಿ ಬರುವ ಜ್ವರದಿಂದಲೂ ಆಗಾಗ್ಗೆ ಮಲಬದ್ಧತೆಯಿಂದಲೂ ಆರಂಭವಾಗಿ, ಇದು ಗಣನೆಗೆ ಬಾರದೆ ಕ್ರಮೇಣ ಜ್ವರ, ಹೊಟ್ಟೆ ಬೆಳೆಯುವಿಕೆ, ವಾಂತಿ, ಲಕ್ಷಿಸಕಕ್ಕ ಮಲಬದ್ಧತೆ ಅಥವಾ ಅನೇಕ ವೇಳೆ ಮಲವಿಸರ್ಜನೆಯುಂಟಾಗುತ್ತದೆ. ಶಿಶುವು ತನ್ನ ರುಚಿಯನ್ನೂ, ಉಲ್ಲಾಸವನ್ನೂ ಕಳಕೊಳ್ಳುತ್ತದೆ ಮತ್ತು ಕರ್ಕಶ ಸ್ವಭಾವಿಯೂ, ಕೃಶವೂ ಆಗುತ್ತಾ ಬರುತ್ತದೆ. ಮೋರೆಯು ಸಪ್ಪನಾಗಿ ಮೂತ್ರವು ಬಣ್ಣವನ್ನು ಹೊಂದಿ ಅದನ್ನು ಅಲ್ಲಿಯೇ ಆರಲು ಬಿಟ್ಟರೆ ಬಿಳಿ ಮಂಡಲವನ್ನು ಬಿಡುತ್ತದೆ. ಮಲವು ಬಹಳವಾಗಿಯೂ, ದೀರ್ಘವಾಗಿಯೂ, ಕೆಸರಿನಂತೆಯೂ ಆಗಿ ಪಚ್ಚೆಯಾ ಬಿಳಿ ವರ್ಣವುಳ್ಳುದಾಗಿ ದುರ್ವಾಸನೆಯನ್ನು ಕೊಡುತ್ತದೆ.

ಯಕೃತ್ತು ಬಹಳ ನೋವನ್ನುಂಟುಮಾಡುತ್ತದೆ, ಜ್ವರವು ಏರುತ್ತದೆ ಮತ್ತು ಅರಸಿನ ಮುಂಡಿಗೆಯು ಆರಂಭವಾಗುವದು; ಅನಂತರ ವೃದ್ಧಿಯಾಗಿ, ಚರ್ಮ, ಕಣ್ಣುಗಳು ಮತ್ತು ಮೂತ್ರ ಕಡುಹಳದಿ ಬಣ್ಣವನ್ನು ಹೊಂದುತ್ತವೆ. ಕಾಲುಗಳು, ಕೈಗಳು ಮತ್ತು ಕೆಲವು ಸಲ ಮುಖ ಕೂಡ ಬಾತುಕೊಳ್ಳುತ್ತವೆ. ಹೊಟ್ಟೆಯ ಮೇಲಣ ನರಗಳು ಕಾಣುವಂತೆ ಹೊರಕ್ಕೆ ಬರುತ್ತವೆ. ರೋಗಿಯು ಸರಿಯಾದ ಔಷಧೋಪಚಾರವನ್ನು ಪಡೆಯದಿದ್ದಲ್ಲಿ ಮೂರ್ಚ್ಛಾಸ್ಥಿತಿಯಲ್ಲಿ ಮರಣವನ್ನು ಹೊಂದಬಹುದು.

ಅನೇಕ ವೈದ್ಯಕೀಯ ಜನರು ಈ ರೋಗವನ್ನು ಯಾವ ಔಷಧವೂ ಅಂಕೆಗೆ ತರುವದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ರುಜುವಾತುಗಳು ಸಿದ್ಧಾಂತಿಸುವವೇನೆಂದರೆ ಈ ಭಯಂಕರ **ಯಕೃತ್ತು ಮತ್ತು ಪ್ಲೀಹದೋಷಗಳು** ಗುಣಕಾರಿಯಾಗುವ ಔಷಧೋಪಚಾರವೆಂದರೆ **ಜಮ್ಮಿ ವೆಂಕಟರಮಣಯ್ಯನವರ ಲಿವರ್ ಕ್ಯೂರ್.**

ಪತ್ರಕಗಳಿಗೂ ವಿಶೇಷ ಮಾಹಿತಿಗೂ ಬರೆಯಿರಿ:—

ಡಾಕ್ಟರ್ ಜಮ್ಮಿ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್
ಮೈಲಾಪುರ್, ಮದ್ರಾಸು

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಪ್ರಥಮ ಮೌಲ್ಯವೇತನದಲ್ಲಿಯೇ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗಿದೆ.

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ವಿಜಂಟಿರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

OVER ONE & A QUARTER MILLION

We commence the New Year with an increase of

OVER ONE & A QUARTER MILLION RUPEES

in our resources.

The Total Working Funds of the Syndicate have risen by more than Rs. 1,250,000/— in the year 1936.

● ●

WE OFFER THANKS

Our Directors offer hearty thanks to the numerous clients and to the Public as well, for their ever increasing patronage and wish one and all

A VERY HAPPY
AND
PROSPEROUS NEW YEAR.

The Canara Industrial & Banking Syndicate, Ltd.

Head Office: UDIPI.

1890ನೇ ಇಸವಿಯಿಂದಲೂ ಪ್ರಖ್ಯಾತಿಯಲ್ಲಿರುವ ಅಲ್ಲದೆ ಎಷ್ಟೋ ಅಖಿಲ ಭಾರತ ಆಯುರ್ವೇದ ಸಮ್ಮೇಳನಗಳಲ್ಲಿ ಅನೇಕಾನೇಕ ಬಂಗಾರದ ಪದಕಗಳನ್ನು ಪಡೆದಿರುವ

ಗುಜರಾತ್ ಫಾರ್ಮಸಿ, ಅಹಮದಾಬಾದ್ ಇವರ

ಬ್ರಾಹ್ಮೀ ತೈಲ ಸುವಾಸನಾಯುಕ್ತವಾಗಿದ್ದು ಅನಿದ್ರೆ, ಆಯಾಸ, ತಲೆನೋವು, ತಲೆತಿರುಗುವುದು, ಮೆದುಳಿನ ಬಲಹೀನತೆ, ಜ್ಞಾಪಕಶಕ್ತಿ ಚೆನ್ನಾಗಿಲ್ಲದಿರುವಿಕೆ, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವುದು ಮುಂತಾದ ದೋಷಗಳನ್ನು ಹೋಗಲಾಡಿಸುವುದು.

ಜೀವನ್ ಚ್ಯವನಪ್ರಾಶವು ಯಾವ ತರದ ಬಲಹೀನತೆಗೂ ಅಮೃತದಂತೆ ಗುಣದಾಯಕವಾದ ರಸಾಯನ. ಎಲುಬುಚರ್ಮಗಳೆರಡೆ ಉಳಿದಿದ್ದರೂ ರಕ್ತಮಾಂಸಾದಿ ಧಾತುಗಳನ್ನು ತುಂಬಿಸಿ ದೇಹದಾರ್ಢ್ಯವನ್ನು ಇದರಂತೆ ಕೊಡುವ ಇನ್ನೊಂದು ಔಷಧಿಯಿಲ್ಲ. ಮಕ್ಕಳಿಗಾದರೆ **"ಬಾಲ ಜೀವನ್"**, ಮುದುಕರಿಗಾಪರೆ **"ವೃದ್ಧ ಜೀವನ್"** ಎಂಬ ವಯಸ್ಸಿಗೆ ಅನುಗುಣವಾಗಿ ತಯಾರಿಸಿದ ರಸಾಯನಗಳನ್ನು ಕೇಳಿರಿ.

ಇತರ ಎಲ್ಲಾ ಶಾಸ್ತ್ರೋಕ್ತ ಔಷಧಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ಸಿಗುವವು.

ಹೆಚ್ಚಿನ ಮಾಹಿತಿಗೆ ವಿಳಾಸ: ಡಾ। ಎ. ವೆಂಕಪ್ಪಯ್ಯ, ಬಿ. ಎ., ಆಯುರ್ವೇದ ಭಿಷಕ್,
ಬೋಳಾರ. ಮಂಗಳೂರು.

ಈ ವಾರದ ಕಥೆ:—

ಹೊಸ ಸಂಸಾರ.

(ಲೇಖಕ:—ಶ್ರೀ. ಎಂ. ಟಿ. ವಲ್ಲಭ್ಯೆಯಂಗಾರ್)

೧.

ಆ ಮನೆಯ ದಕ್ಷಿಣಕ್ಕೆ ಒಂದು ತೋಟ. ಎಲ್ಲಿ ನೋಡಿದರೂ ಮಲ್ಲಿಗೆಯ ಬಳ್ಳಿಗಳೆ! ಎಲ್ಲಿ ನೋಡಿದರೂ ಗುಲಾಬಿಗಳೆ! ಎಷ್ಟು ತರಹೆ ಗುಲಾಬಿ, ಕೆಂಪು, ಬಿಳುಪು, ಹಳದಿ, ಊದಾಬಣ್ಣದವು. ಬಣ್ಣವೆಷ್ಟಿದ್ದರೂ ಮುಳ್ಳಿಗೇನೂ ಕಡಿಮೆ ಇಲ್ಲ. ತೋಟಕ್ಕೆ ಮಧ್ಯದಲ್ಲಿ ಒಂದು ನೀರಿನ ಗುಂಡಿ. ಗುಂಡಿಯ ಮೇಲ್ಭಾಗಕ್ಕೆ ಕಮಾನಾಕಾರವಾಗಿ ಕಟ್ಟಿದ ಲತಾಗೃಹ. ಆ ಮನೆಯ ಮಧ್ಯದಲ್ಲಿ ತೂಗಾಡುತ್ತಿರುವ ಒಂದು ಗಿಣಿಯ ಪಂಜರ. ಅದಕ್ಕೆ ನಾಲ್ಕು ಕಡೆಗಳಲ್ಲಿಯೂ ದ್ರಾಕ್ಷಿ ಬಳ್ಳಿಗಳು ಹರಡಿವೆ. ಶಾಂತ ಸ್ಥಳ ಅದು. ಒಂದು ಘಳಿಗೆ ಅಲ್ಲಿದ್ದರೆ ಸಾಕು ಮನೋವೇದನೆ ಕಡಿಮೆಯಾಗುವುದೆಂದು ಅನ್ನಿಸಿದೆ.

ಆ ಮನೆಯು ಉಮಾಕಾಂತನಿಗೆ ಹೊಸದು. ಮನೆಯ ಯಜಮಾನ ರಾಮುಕಾಂತ. ಆತನಲ್ಲದೆ ಮತ್ತಾರೂ ಪರಿಚಯವಿಲ್ಲ. ರಾಮುಕಾಂತನ ಬಲಾತ್ಕಾರದಿಂದ ಆತನ ಮನೆಯಲ್ಲಿ ಹೇಗಾದರೂ ಆಗಲೆಂದು ಇರತೊಡಗಿದನು. ಮೈಲು ಗಾಡಿಯನ್ನು ಇಳಿದು ಆಗ ತಾನೆ ಬಂದನು. ರಾಮುಕಾಂತನು ತುಂಬ ಆದರಣೆಯಿಂದ ಕರೆದುಕೊಂಡು ಬಂದು ನೀರಿನ ಗುಂಡಿಯ ಪಕ್ಕದಲ್ಲಿರುವ ಬೆತ್ತದ ಕುರ್ಚಿಯೊಂದರಲ್ಲಿ ಕುಳ್ಳಿರಿಸಿದನು. ಕೂಡಲೆ ಒಳಕ್ಕೆ ಹೋದನು. ಕಿಲಕಿಲನೆ ನಗುತ್ತಾ ನಾಲ್ವರು ಮಕ್ಕಳೂ ಆಡುತ್ತಾ, ಹಾಡುತ್ತಾ ಆತನ ಸವಿೂಪದಲ್ಲಿ ಓಡಿ ಹೋದರು. ಎಷ್ಟು ಚೆನ್ನಾಗಿದ್ದಾರೆಂದು ಉಮಾಕಾಂತನು ಅಂದುಕೊಂಡನು.

ಅನಂತರ ರಾಮುಕಾಂತನೂ, ಇಬ್ಬರು ಸ್ತ್ರೀಯರೂ ಬಂದರು. ಅವರಲ್ಲಿ ಒಬ್ಬಳ ವಯಸ್ಸು ವಿೂರಿದೆ. ಎರಡನೆಯವಳು ಪ್ರೌಢೆ. ಯುವಕಳು. ಅವರೊಡನೆ ಒಬ್ಬ ಆಳು ಬೆಳ್ಳಿಗಿರುವ ಖಾದಿಯನ್ನು ಧರಿಸಿ, ತಟ್ಟೆಯಲ್ಲಿ ಪಿಂಗಾಣಿ ಪಾತ್ರೆಗಳನ್ನು ಅಲ್ಲಿ ಇಟ್ಟು ಹೊರಟುಹೋದನು.

ರಾಮುಕಾಂತನು ಹೆಂಡತಿಯನ್ನು ನೋಡಿ, 'ಕಮಲಾ! ನಿನ್ನೆ ನಾನು ಹೇಳಿದವನು ಈತನೆ. ಎದುರಿಗೆ ಹೇಳಕೂಡದು. ಇಂತಹ ಸತ್ಪುರುಷನು ನನಗೆ ಸಿಕ್ಕಲಿಲ್ಲ. ವಿದ್ಯೆ, ನಡತೆ, ಐಶ್ವರ್ಯ, ಸೌಂದರ್ಯ ಎಲ್ಲವೂ ಒಂದು ಕೆಡೆ ಮೂರ್ತೀಭವಿಸಿದಂತಿದೆ. ಸಂಘದ ವ್ಯವಹಾರದಲ್ಲಿಯೂ, ದೇಶೋಪಯೋಗ್ಯವಾದ ಕಾರ್ಯಗಳಲ್ಲಿಯೂ ಈತನು ತೋರಿಸುತ್ತಿರುವ ತ್ಯಾಗವೂ, ಸಾಧುತ್ವವೂ ಅನಿರ್ವಚನೀಯವು' ಎಂದು ಹೇಳಲು, ಉಮಾಕಾಂತನು ನಾಚಿಕೆಹೊಂದಿ, 'ಹಾಗೆ ಹೇಳುವುದು ನ್ಯಾಯವಲ್ಲ' ಎಂದನು.

ರಾಮುಕಾಂತನು ಯುವತಿಯನ್ನು ನೋಡಿ, 'ಮಾಲಿನೀ! ಟೀಗೆ ನೀರು ಹಾಕಮ್ಮ!' ಎಂದು ಮುಗುಳುನಗೆಯೊಡನೆ ಹೇಳಿದನು. ಆ ಯುವತಿಯು ಸುವಾಸನೆಯಾಗಿರುವ ಟೀನೀರನ್ನು ಸ್ವದೇಶಿ ಪಿಂಗಾಣಿ ಪಾತ್ರೆಯಲ್ಲಿ ಹಾಕಿ, ಉಮಾಕಾಂತನಿಗೆ ಮೊದಲು ಕೊಟ್ಟಳು. ಕೊಡುವಾಗ ಆಕೆಯ ಮುಖವು ಕೆಂಪಾಯಿತು. ಆತನು ಅತಿ ಗೌರವದಿಂದ ಆ ಪಾತ್ರೆಯನ್ನು ತೆಗೆದುಕೊಂಡನು. ಯುವತಿಯ ಮುಖವನ್ನು ಹಗಲೆಲ್ಲಾ ನೋಡಕೂಡದೆಂದು ಆತನ ಅಭಿಮತ. ಆದರೆ ಆ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕಾದ, ಸೌಂದರ್ಯವೂ, ವೋಹವೂ ಆಕೆಯಲ್ಲಿರುವುದೆಂದು ಯಾರೋ ಅವನಿಗೆ ಹೇಳಿದಂತೆ ಬೋಧೆಯಾಯಿತು. ಯಜಮಾನನನ್ನು ನೋಡಿ 'ಈ ಟೀಯು ಎಷ್ಟು ರುಚಿಯಾಗಿದೆ!' ಎಂದನು. ಕಮಲೆಯು 'ನಮ್ಮ ಮಾಲಿನಿಯು ಮಾಡಿದರೆ ಇಲ್ಲದಿರುವ ರುಚಿ ಕೂಡ ಇರುವುದು' ಎಂದಳು. ಉಮಾಕಾಂತನು 'ಅದು ಹೇಗೆ?' ಎಂದನು.

ಕಮಲೆ:—'ಚೆನ್ನಾಗಿದೆ. ಶಾಂತಿನಿಕೇತನದಲ್ಲಿ ಒಂದು ವರುಷವಿದ್ದು ಬಂಗಾಳಿಯವರೊಡನೆ ಸಹಾಧ್ಯಾಯಿಯಾಗಿ ಸಂಗೀತಾಭ್ಯಾಸ ಮಾಡಿದ ಮೇಲಾದರೂ ಟೀಯನ್ನು ಚೆನ್ನಾಗಿ ಮಾಡಲಾರಳೆ?' ಎಂದು ನಗುತ್ತಾ ಹೇಳಿದಳು.

ಮಾಲಿನಿ:—'ಹೌದು' ಎಂದು ಮೆಲ್ಲಗೆ ಹೇಳಿ ತಲೆ ಬಗ್ಗಿಸಿದಳು. ಉಮಾಕಾಂತನು ತಿರುಗನೆಯಿಂದ ಆಕೆಯ ವಚನಾಮೃತವನ್ನು ಸವಿದು, 'ಎಲ್ಲಿ ನೋಡಿದರೂ ಸುಂದರಿಯರಾದ ಯುವತಿಯರಿರುವಾಗ ನನಗೇಕೆ ಈ ಏಕಾಂಗಿಜೀವನ!' ಎಂದು ಅಂದುಕೊಂಡು, ಪರಸ್ತ್ರೀಯರ ಮುಂದೆ ಅಂಥ ಭಾವನೆಯಿರುವುದು ಪಾಪವೆಂದು ಮನಸ್ಸಿನಲ್ಲಿಯೇ ಪಶ್ಚಾತ್ತಾಪಹೊಂದಿದನು.

ಕಮಲೆ:—ನಮ್ಮವರು ನಿಮ್ಮ ವಿಷಯ ಹೇಳಿದ್ದರೂ, ಕರೆಯಿಸಿ ನಿಮ್ಮನ್ನು ನೋಡಬೇಕೆಂದು ಅಭಿಲಾಷೆ ಹುಟ್ಟಿತು. ಇಲ್ಲಿಯೆ ಮೊಕ್ಕಾಂ ಮಾಡಬೇಕೆಂದು ಬಲವಂತ ಮಾಡಿದ್ದಕ್ಕೆ ನೂ ಅಂದುಕೊಳ್ಳಬೇಡಿ.

ಉಮಾ:—ಎಂತಹ ಮಾತು! ಇಲ್ಲಿಗೆ ಬಂದು ಈ ತೋಟದ ಮಧ್ಯೇ ಈ ಹೂಗಳ ನಡುವೆ, ಈ ಶಾಂತಿವದದಲ್ಲಿರಿದ್ದರಿಂದ ನನ್ನ ಚಿಂತೆಯು ಅಣಗಿಹೋಯಿತು.

ಕಮು:—ಏನೋ ಕಾಣೆ! ವಿಶ್ರಾಂತಿಗೋಸ್ಕರ ನಾನು ಕಷ್ಟಪಟ್ಟು ಬೆಳೆಯಿಸಿದೆನು. ಈ ತೋಟದಲ್ಲಿ ಅಪರೂಪವಾದ ಗುಲಾಬಿ ಗಿಡವನ್ನು ತಂದು ಹಾಕಿದ್ದೇನೆ. ಬೆಳೆದಿದೆ.

ಉಮಾ:—ಈ ನೀರುಗುಂಡಿ ಮಗ್ಗುಲಲ್ಲಿ ಪಂಜರವಿದೆ. ಪಂಜರದ ಗಿಣಿಯು ಎಷ್ಟೋ ಸೊಬಗನ್ನು ಕೊಡುತ್ತಿರುವುದು.

ಕಮು:—ಎಂಥ ಗಿಣಿ ಹೇಳಿ! ಪಂಜರದ ಬಾಗಿಲನ್ನು ತೆಗೆಯುವರೆ? ಯಾವಾಗ ಹಾರಿಹೋದೇನು? ಎಂದು ನೋಡುತ್ತಿರುವುದು.

ಕಮಲೆಯು ಈ ಮಾತನ್ನು ಹೇಳಿದಾಗ ಗಿಣಿಯು ಸ್ಫುಟವಾಗಿ ಉಚ್ಚರಿಸುವಂತೆ ಒಂದು ಸಾರಿ ಕೂಗಿತು.

ಕಮು:—ನೀವು ಮೊನ್ನೆ ಕಾಶ್ಮೀರ ದೇಶಕ್ಕೆ ಹೋಗಿದ್ದಿರೆಂದು ಕೇಳಿದೆ.

ಉಮಾ:—ಹೌದು. ಅಮೃತಬಜಾರು ಪತ್ರಿಕೆಯ ಪ್ರತಿನಿಧಿಯಾಗಿ ಹೋಗಿದ್ದೆ. ರಾಜಕೀಯ ವಿಚಾರ ಆರು ವಿಷಯ ಅಲ್ಲಿಂದ ಬರೆದೆ.

ಕಮು:—ಕಾಶ್ಮೀರ ದೇಶವು ಸ್ವರ್ಗತುಲ್ಯವಾಗಿರುವುದೆನ್ನುತ್ತಾರೆ.

ಉಮಾ:—ಸ್ವರ್ಗತುಲ್ಯವೆಂದರೆ ಲಕ್ಷಣವಾಗಿರುವುದು. ಪ್ರಕೃತಿಕಾಂತೆಯ ಅಂಗಸೌಷ್ಠವವು ಪರಿಪೂರ್ಣತ್ವ ಹೊಂದಿದೆ.

ಮಾಲಿನಿ:—ಅಪ್ಪನು ನನ್ನನ್ನು ಅಲ್ಲಿಗೆ ಕಳುಹಿಸುವನೆ?

ಕಮು:—ಕಳುಹಿಸದೆ ಏನು?

ರಾಮು:—ನಾನೊಬ್ಬನೆ ಹೊರಡುವೆನೆ?

ಉಮಾ:—ಮುಂದಿನ ತಿಂಗಳಲ್ಲಿ ಪುನಃ ಹೋಗಿ ಬರಬೇಕಾಗಿದೆ. ಅಲ್ಲಿ ಪೊಲಿಟಿಕಲ್ ಸೆಕ್ರೆಟರಿಯು ಬಹಳ ದಯಾಳು. ಅವರ ಅತಿಥಿಗಳಾಗಿ ನಾವೆಲ್ಲ ಹೊರಡೋಣ.

ಈ ರೀತಿಯಾಗಿ ಅನೇಕ ಸಂಗತಿಗಳು—ನಾಗರಿಕತೆಯ ವಿಚಾರದಲ್ಲಿ ಬಹಳ ಹೊತ್ತು ಮಾತಾಡಿದರು.

೨.

'ಯುವಕರು, ಸುಂದರರಾಗಿಯೂ, ಶೀಲವಂತರಾಗಿಯೂ, ತಿಳುವಳಿಕೆಯುಳ್ಳವರಾಗಿಯೂ ಎಷ್ಟು ಮಂದಿ ಇರುವುದಿಲ್ಲ! ನನಗೆ ಅಂತಹ ಕ್ರೂರನೇ ದೊರಕಬೇಕೆ? ಮದುವೆಯ ಸಮಯದಲ್ಲಿ ಇಂದ್ರನೆಂದೂ ಚಂದ್ರನೆಂದೂ ಹೊಗಳುವರು. ಸಕಲಕ್ಕೂ ಸಾಮಾನ್ಯನಾದ ಯುವಕನ ಸಹವಾಸವು ಆನಂದಕ್ಕೆ ಬದಲು ನೋವನ್ನುಂಟುಮಾಡಿದೆ. ಯಾವ ಹುಡುಗಿಯು ಈತನಿಗೆ ಪ್ರೇಮ ಸ್ವರೂಪಳಾಗಿ ಸ್ವರ್ಗಾನುಭವವನ್ನು ಮಾಡುತ್ತಿರುವಳೊ—ಎಂತಹ ಸಾಧುತ್ವವು, ಎಂತಹ ಮರ್ಯಾದೆ;—ನಾಗರಿಕತೆ—ತಿಳಿವಳಿಕೆ! ಆತನು ಕ್ರೂರನಾದರೂ ಆಗಲಿ. ನನ್ನ ತಂದೆಗೆ ಅಷ್ಟೇಕೆ ಹಟ! ಶತ್ರುಗಳು ಒಂದು ವೇಳೆ ಬಂಧುಬಳಗಗಳಾಗಿ ಹುಟ್ಟಬಹುದು. ಗಂಡನು ಬೇಡವೆಂದಾಗ ಮಗಳನ್ನು ತಂದೆಯು ಕಾಪಾಡದಿದ್ದರೆ ಆಕೆಯ ಗತಿಯೇನು? ರಾಮುಕಾಂತನು ನನ್ನ ಮೇಲೆ ಕರುಣವಿಟ್ಟು ಕಾಪಾಡದಿದ್ದರೆ ನಾನೇನಾಗುತ್ತಿದ್ದೆನೊ? ಹೆತ್ತ ಮಗುವಿಗೂ, ನನಗೂ ಎಷ್ಟು ಮಾತ್ರವೂ ಭೇದ ತೋರದಂತೆ ಯಾವಾಗಲೋ ಬಾಲ್ಯದಲ್ಲಿ ನನ್ನ ತಾಯಿಯು ಸ್ನೇಹಿತಳೆಂದು, ಕಮಲೆಯು ನನ್ನನ್ನು ಇಲ್ಲಿಗೆ ಕರೆದುಕೊಂಡು ಆದರಣೆ ಮಾಡುತ್ತಿರುವುದು ಅತಿಶಯವಲ್ಲವೆ!' ಎಂದು ಏನೇನೋ ಯೋಚಿಸುತ್ತಾ ಬಾಲಭಾಸ್ಕರನ ಎಳೇ ಕಿರಣದಲ್ಲಿರುವ ಕರುಣಾವಾರ್ದವಕ್ಕೆ ಆನಂದಿಸುತ್ತಾ ಮಾಲಿನಿಯು ಕುಳಿತುಕೊಂಡಿದ್ದಳು.

ಅಷ್ಟರೊಳಗೆ ಉಮಾಕಾಂತನು ಕಣ್ಣಿಗೆ ಕನ್ನಡಕ ಹಾಕಿಕೊಂಡು, ಮತ್ತೊಂದು ಕಡೆಯಿಂದ ಮಾಲಿನಿಯ ಎದುರಿಗೆ ನಿಂತನು. ಆಕೆಯು ತಟಾರನೆ ಎದ್ದು 'ಅಪ್ಪನು ಕಾಫಿಯನ್ನು ನಿಧಾನವಾಗಿ ತೆಗೆದುಕೊಳ್ಳುವನು. ನೀವು ಮುಂದಾಗಿ ತೆಗೆದುಕೊಳ್ಳಿ. ತರುವೆನು.' 'ಈಗ ಬೇಡ'ವೆಂದು ಹೇಳಿದರೂ, ಅದನ್ನು ಕಿವಿಗೆ ಹಾಕಿಕೊಳ್ಳದೆ, ಭಂಗನೆ ಹಾರಿದಳು. ದ್ರಾಕ್ಷೆಯ ಬಳ್ಳಿಗಳಿರುವ ಗುಲಾಬಿಯು ಗಿಡಕ್ಕೆ ಸೀರೆಯ ಸೆರಗು ಸಿಕ್ಕಿಕೊಂಡಿತು. ಮೆತ್ತಗೆ ತೆಗೆದುಕೊಂಡು ಮನೆಗೆ ಹೋದಳು.

ಉಮಾಕಾಂತನ ಕಣ್ಣುಗಳು ಈಗ ಸಂಪೂರ್ಣ ವಿನಿಯೋಗಿಸತೊಡಗಿದುವು. ಆತನ ಭಾವವು ಸ್ತ್ರೀವಿಮುಖತೆಯಿಂದ ವಿಮುಖವಾಗತೊಡಗಿತು. ಕೆಲಸಕ್ಕೆ ಬಾರದ ಹೆಂಗುಸನ್ನು ಮದುವೆಯಾದ್ದರಿಂದಲಲ್ಲವೆ ನನಗೆ ಈ ಹತ್ತು ವರುಷಗಳಿಂದಲೂ ರಸಹೀನವಾದ ಜೀವನ! ಏನೋ ಒಂದು ವಿಧದಲ್ಲಿ ಉಂಟಾದ ದುರಂತವಾದ ಅನುಭವದಿಂದ ಸ್ತ್ರೀಜಾತಿಯನ್ನು ದ್ವೇಷಿಸುವುದು ಸಮಂಜಸವಾಗಿಲ್ಲ. ಮಾಲಿನಿಯ ಸಂದರ್ಶನದಿಂದ ಪುನರ್ಜೀವನವು ಉಂಟಾಗಲಿಲ್ಲವೆ? ಸ್ತ್ರೀಸಂಗವಿಲ್ಲದೆ ಮಾಡುವ ಜೀವನವು ಅಂಧಕಾರಮಯ. ಸದ್ಗುಣಶೀಲರಾದ ಅತ್ತೆಮಾವಂದಿರೂ, ಇಂತಹ ಹೆಂಡತಿಯೂ . . . . . ಮದುವೆ' ಎಂದು ಆತನ ಮನಸ್ಸಿನಲ್ಲಿ ತರಂಗತರಂಗವಾಗಿ ಆಲೋಚನೆ ಬರತೊಡಗಿತು. ಅಷ್ಟರೊಳಗೆ ಆಕೆಯು ಬಂದಳು. ಆತನು ನಿಜವಾಗಿಯೂ ಯುವತಿಯರೊಡನೆ ಮಾತನಾಡಲು ಹಿಂಜರಿಯುತ್ತಿದ್ದನು. ಹಿಂಜರಿಯುವುದೇನು,—ಅನುಮಾನ,—ಸುಮ್ಮನಿರುವುದು. ಆದರೂ ಅವರಲ್ಲಿ ಯಾವ ವಿಧವಾದ ದೋಷವೂ ಇಲ್ಲವೆಂದು ಆತನ ಈಗಿನ ಊಹೆ. ಅಲ್ಲದೆ ಈ ಮಧ್ಯೇ ಕೆಲವು ಸಂಘಗಳಲ್ಲಿ ಕಾರ್ಯಕಾರಣಗಳಿಂದ ಅನೇಕ ಮಂದಿ ಹೆಂಗುಸರೊಡನೆ ಪರಿಚಯವಾಗಿದ್ದುದರಿಂದ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಅವಕಾಶ ತೋರಲಿಲ್ಲ. ಮಾಲಿನಿಯ ಸಂಗತಿಯು ಹಾಗಲ್ಲವೆಂದೂ ತಿಳಿದುಕೊಂಡನು. ಆಕೆಯು ತಂದ ಕಾಫಿಯೊಂದಿಗೆ, ಆಕೆಯ ರೂಪ, ವಿಲಾಸ, ಸಂಪತ್ತನ್ನು ನೋಡುತ್ತಾ, ಒಂದೇ ಗುಟುಕಿಗೆ, ಆಕೆಯ ಕಡೆ ನೋಡುತ್ತಾ ಕುಡಿದುಬಿಟ್ಟನು. ನೋಡುತ್ತಿರಲು ಆಕೆಯ ಎಡಗೈ ಹೆಬ್ಬೆರಳು ಬರಿಹಾಕಿದಂತಿತ್ತು. ಕಾರಣವೇನೆಂದು ಕೇಳಲಾಗಿ, ಆಕೆಯು 'ಶಾಂತಿನಿಕೇತನದಲ್ಲಿ ವೀಣೆಯನ್ನು ಕಲಿತೆನು. ಗುರುದೇವನಿಗೆ ನನ್ನಲ್ಲಿ ತುಂಬ ಪ್ರೀತಿ' ಎಂದಳು. ಉಮಾಕಾಂತನ ಊಹಾಪ್ರಪಂಚದಲ್ಲಿ ಸೃಷ್ಟಿಯು ಪೂರ್ಣತೆಯನ್ನು ಪಡೆಯಿತು.

೩.

ಆಕೆಯು ತನ್ನ ಹಳೇ ಕಥೆಯನ್ನು ಹೇಳಿದರೆ ಪ್ರೇಮುಕ್ಕೆಲ್ಲಿ ಭಂಗಬರುವುದೆಂದು ಹೆದರಿದಳು. ಏನೊ ಪ್ರಾಣವೋಷಣೆಯಾದರೂ ಆಗಬಹುದಲ್ಲವೆ? ಮಾಲಿನಿಯ ನಡೆವಳಿಯನ್ನೂ, ಪಂಡಿತರ ವೈಖರಿಯನ್ನೂ ನೋಡಿದರೆ, ಮದುವೆ ಪ್ರಯತ್ನದಿಂದ ತನ್ನನ್ನು ಕರೆಯಿಸಿರಬಹುದೆಂದು ಊಹಿಸಿದನು. ಹಾಗಿಲ್ಲದಿದ್ದರೆ ತನಗೇಕೆ ಇಷ್ಟು ಉತ್ಸಾಹ? . . . . . ಹೆಂಡತಿಯು ಬದುಕಿದ್ದ ಮಾತ್ರಕ್ಕೆನೆ, ಆಕೆಯೊಡನೆ ಮದುವೆಯಾದ ಮೂರು

(೬ನೇ ಪುಟ ನೋಡಿ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್"
(ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER REGD. TRADE MARK

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಜಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ವುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್,
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। 2½.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। 4½. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 5
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೂಡಾ ಕೊಡುತ್ತದೆ.
H. S. RAMA RAO, *Manager.*




ಹರಳೆಣ್ಣೆ ಕೊಡನೆ
CASTOPHENE
COMPOUND
CASTOR OIL
CHOCOLATES
A delicious
Chocolate Laxative.
ಕೆಸ್ಟೊಫೇನಿನೊಡನೆ
ಕೆಸ್ಟೊಫೇನ್
ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು. ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ.
CASTOPHENE
CASTOR OIL CHOCOLATES

ಪ್ರಕಟಣೆ.

ಮಂಗಳೂರಿನ ಯಾವತ್ತೂ ಸಾರ್ವಜನಿಕ ಮಂದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

'ಝೂಂಡೂ ಫಾರ್ಮೆಸಿಯ ಖಾತರಿಯಾದ ಆಯುರ್ವೇದೀಯ ಸಿದ್ಧೌಷಧಗಳನ್ನು ಸ್ಥಳೀಯ ಏಜೆಂಟರಾದ ಮೆಸರ್ಸ್. 'ಪಹಾ ಎಂಡ್ ಕೋ, ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು' ಇವರಿಂದ ಮಾತ್ರವೇ ಪಡೆಯಬಹುದು. ಒಂದು ವೇಳೆ ನಮ್ಮಿಂದ ಒಪ್ಪಲಾದ ಏಜೆಂಟರ ಹೊರತು, ಬೇರೆ ಯಾವ ವ್ಯಾಪಾರಿಗಳಿಂದಲಾದರೂ ಇವನ್ನು ಪಡೆವಲ್ಲಿ ಆ ಕುರಿತು ಈ ಕಂಪೆನಿಯು ಯಾವ ಜವಾಬುದಾರಿಯನ್ನೂ ವಹಿಸುವುದಿಲ್ಲ; ಹಾಗೂ ಆ ಔಷಧಗಳ ಖಾತರಿಯ ಬಗ್ಗೆ ಯಾವ ಗ್ಯಾರಂಟಿಯನ್ನೂ ಕೊಡುವುದಿಲ್ಲ.

ಮದ್ರಾಸ್ ಆಧಿಪತ್ಯದ ಸೋಲ್ ಡಿಸ್ಟ್ರಿಬ್ಯೂಟರ್ಸ್
ದಾಮೋದರ್ ಎಂಡ್ ಕೊ.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದ

ರಿಜಿಸ್ಟರ್ಡ್

ಡಾ. ವಾಮನ್ ಗೋಪಾಲರ
ನರ್ಸರಿಲ್ಲಾ

ಟ್ರೇಡ್ ಮಾರ್ಕ್.

100 ವರ್ಷಗಳ ಅನುಭವದಿಂದ ಹಿಲ್ಲಿಯಗಳ್ಳೆ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿ
ಡಾ। ಗೌತಮರಾವ್ ಕೇಶವರಾವ್‌ರವರ ಜೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.
ಡಾ। ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾ

THE GENERAL INSURANCE BANK OF INDIA LIMITED,
MANGALORE.
ESTD. 1933.

BENEFIT AMOUNT PAID EXCEEDS RS. 20,950/— AS ON 30TH JUNE 1936. RESERVE FUND EXCEEDS RS. 7,360/

WE HAVE THREE SCHEMES FOR YOU

LIFE **MARRIAGE** **BIRTH**

ADMISSION FEE RS. 5/8/- ONLY.
(By Instalments if required)
MONTHLY PREMIUM RUPEE ONE ONLY.

Chairman:— M. R. Ry. Philip J. Chandran, Avgl., B. A., Retired Dt. Registrar and Assistant Registrar of Joint Stock Companies, S. K., Mangalore.

WANTED SPECIAL AGENTS AND REPRESENTATIVES ON LIBERAL TERMS.

For Full Prospectus and Agency Terms please apply to:—
THE GENERAL INSURANCE BANK OF INDIA LIMITED,
H. O. MANGALORE, S. K.

Mangalore, 1—11—1936.

P. K. MENON,
Secretary.

(೪ನೇ ಪುಟದಿಂದ)

ದಿನ ಇದ್ದುದು. ಅನಂತರ ಹತ್ತು ವರುಷಗಳ ವರೆಗೆ ಸಂಪರ್ಕ ವಿಲ್ಲದೆ, ಸಂದರ್ಶನವಿಲ್ಲದೆ, ಆ ಹೆಂಡತಿಯ ರೂಪನ್ನೆ ತಾನು ಮರೆತುಹೋಗಿರುವಾಗ, ತನ್ನ ಸಹಪಾಠಿಗಳೆಲ್ಲರೂ ಯುವತಿಯರ ಭೋಗಭಾಗ್ಯದಲ್ಲಿರುವಾಗ, ತಾನೇಕೆ ಮಾಲಿನಿಯನ್ನು ಮದುವೆಯಾಗಕೂಡದು? ಎಂದು ಆತುರ ಆತನಿಗೆ ಆಕಸ್ಮಾತ್ತಾಗಿ ತೋಚಿತು. ಅಂಥ ಸಂಗತಿಯು ಈಗ ಏಕೆಂದು ಪುನಃ ಚರ್ಚಿಸಿಕೊಂಡನು. ಅಷ್ಟರಲ್ಲಿಯೆ ಮಾಲಿನಿಯು ಚಂದ್ರಬಿಂಬದಂತೆ, ಬಾಗಿಲನ್ನು ಮುಚ್ಚಿಕೊಂಡು ಬಂದಳು. ಉಮಾಕಾಂತನು ತಟ್ಟನೆ ಎದ್ದು ನಿಂತುಕೊಂಡನು. ಮುಖವು ಕೆಂಪೇರಿತು. ಆಕೆಯು ಮುಗುಳ್ನಗೆ ನಕ್ಕಳು. 'ಏನಿದು? ಅಷ್ಟು ಗಾಬರಿ!' ಎಂದು ಕೇಳುವುದರೊಳಗೆ 'ನಿನ್ನನ್ನು ನೋಡಿ' ಎಂದಾತನು ಹೇಳಿದನು.

ಉಮಾ:—ಆದರೆ ನಿಮ್ಮ ತಂದೆಯವರಿಲ್ಲವೊ?

ಮಾಲಿನಿ:—ಏನೋ ಕೆಲಸಕ್ಕಾಗಿ ಪೇಟೆಗೆ ಹೋಗಿದ್ದಾರೆ.

ಉಮಾ:—ಕಮಲಮ್ಮನೋರೊ?

ಮಾಲಿನಿ:—ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಉಮಾ:—'ಒಂಟಿಯಾಗಿ ಬಂದೆಯಲ್ಲಾ! ಕ್ಷಮಿಸು. ಏಕವಚನಪ್ರಯೋಗ.' ಮಾಲಿನಿಯು ಫಕ್ಕನೆ ನಕ್ಕಳು. ಉಮಾಕಾಂತನು ಕೂಡಲೆ ಮುಂದಡಿ ಇಟ್ಟು ಆಕೆಯನ್ನು ಬಾಚಿ ತಬ್ಬಿಕೊಂಡು ಮುದ್ದಿಟ್ಟನು. ಮಾಲಿನಿಯು ಮರುಮಾತನಾಡದೆ, ಕೆನ್ನೆಯನ್ನು ಒರಸಿಕೊಂಡು, ಬಾಗಿಲನ್ನು ತೆಗೆದುಕೊಂಡು ಒಳಕ್ಕೆ ಹೋದಳು.

ಆಕೆಯು ಹೋದಾಗ ಎರಡನೇ ಕೋಣೆಯಲ್ಲಿದ್ದ ರಾಮು ಕಾಂತನೂ, ಕಮಲೆಯೂ ಬರುವುದು ಒಂದೇ ಆಯಿತು. ಉಮಾಕಾಂತನ ಮುಖದ ಮೇಲೆ ಲಜ್ಜಾಮೇಘವು ಕವಿಯಿತು. ಮಾತನಾಡನು. ಮುಖವೆತ್ತನು.

ಹತ್ತು ವರುಷಗಳಿಂದಲೂ ಹತ್ತು ಜನರಲ್ಲಿ ಒಳ್ಳೆಯವನೆನಿಸಿಕೊಂಡಿದ್ದ ಪವಿತ್ರ ಜೀವನವು ಒಂದು ಘಳಿಗೆಯಲ್ಲಿ ಆಕಸ್ಮಿತವಾಗಿ ಒಂದು ಸಾರಿ ಬಾಚಿ ತಬ್ಬಿಕೊಂಡಿದ್ದರಿಂದ ಜಜ್ಜಲ್ಪಟ್ಟು, ಒಂದು ಮುತ್ತಿನ ಶಾಖದಲ್ಲಿ ಭಸ್ಮವಾಗಿ ಹೋಯಿತು.

ರಾಮುಕಾಂತನು ಕಿರುನಗೆಯಿಂದ 'ಏನು ಸ್ವಾಮಿ! ತುಂಬ ಯೋಚನೆ ಮಾಡುವಂತಿದೆ!' ಎಂದು ಕೇಳಿದನು. ಆದರೆ ತಾನು ಮಾಡಿದ ಅಭಾವಚೇಷ್ಟೆಯನ್ನು ಕಾಂತರು ನೋಡಿದ್ದಾರೆಯೆ? ಇಲ್ಲವೆ? ತಪ್ಪನ್ನು ಒಪ್ಪಿಕೊಂಡರೆ ತಪ್ಪೇನು? ನೋಡದಿದ್ದರೆ ತಪ್ಪನ್ನೇಕೆ ಒಪ್ಪಿಕೊಳ್ಳಬೇಕು? ಎಂದು ತರ್ಕವಿತರ್ಕಗಳನ್ನು ಮಾಡಿಕೊಳ್ಳುತ್ತಾ ಉಮಾಕಾಂತನ ಮನಸ್ಸು ಆಂದೋಲನ ಮಾಡಿತು.

ಉಮಾ:—ಏನೂ ಇಲ್ಲ. ಚಿಂತೆಗೆ ಕಾರಣವೇನು? ನಿಮ್ಮ ಆತಿಥ್ಯಗೌರವಾದರಣೆಗಳಿಂದ ಉಂಟಾದ ಆನಂದದಿಂದ ಮಾತನಾಡಲು ಜಡತ್ವ ಬಂದಿದೆ. ಪುನಃ ನಿಮಗೆ ಈ ಆತಿಥ್ಯವನ್ನು ಹೇಗೆ ಮಾಡಲೆಂದು ಯೋಚಿಸುತಿದ್ದೇನೆ.

ರಾಮು:—ನಾನು ಮಾಡಿದ ಆತಿಥ್ಯದಲ್ಲಿ ವಿಶೇಷವೇನಿದೆ? ನನಗೆ ಕೆಲಸಗಳ ಗಲಾಟೆ ಹೆಚ್ಚು. ನಮ್ಮ ಕಮಲೆಗೆ ಮನೆಯ ಕೆಲಸ ಹೇಳತೀರದು. ನೀವು ಒಂಟಿಯಾಗಿರುವಿರೆಂದು ಮಾಲಿನಿಯನ್ನು ನಿಮ್ಮ ಬಳಿಯಲ್ಲಿಯೆ ಇರು ಎಂದು ಹೇಳಿದರೆ, ಆಕೆಯೂ ನಿಮ್ಮ ಬಳಿಗೆ ಬಂದಂತೆಯೇ ಕಾಣುವುದಿಲ್ಲ!

ಉಮಾ:—ಯುವತಿಯರು ಒಂಟಿಯಾಗಿ ಯುವಕರ ಬಳಿಗೆ ಬಂದು ಮಾತನಾಡುವುದು ಒಳ್ಳೆಯದೆ!

ರಾಮು:—ಒಂದು ವೇಳೆ ಆಕೆ ಬಂದರೆ?

ಉಮಾ:—ನಾನು ಮಾತನಾಡೆನು. ಕೈ ಮುಗಿದು ಹೊರಟುಹೋಗೆಂದು ಬೇಡಿಕೊಳ್ಳುವೆನು.

ರಾಮುಕಾಂತನೂ, ಕಮಲೆಯೂ ಒಂದು ಸಾರಿ ಗಟ್ಟಿಯಾಗಿ ನಕ್ಕರು. ಉಮಾಕಾಂತನು ತನ್ನನ್ನು ಇವರು ಹಿಡಿದುಕೊಂಡಂತೆ ಕಲ್ಪಿಸಿದನು. ಕಣ್ಣರೆಪ್ಪೆ ಹಾಕದೆ 'ನಾನು ಸ್ವಲ್ಪದರಲ್ಲಿ ಸತ್ತೆ. ಇನ್ನೇಕೆ ನನ್ನನ್ನು ಕೊಲ್ಲುವಿರಿ? ನಾನು ಅಪರಾಧಿ. ನಿಮ್ಮಗೆ ಶರಣಾಗತ. ನನ್ನನ್ನು ಕ್ಷಮಿಸಿ. ಇಲ್ಲದಿದ್ದರೆ ಪ್ರಾಣತ್ಯಾಗವೇ ನನ್ನ ಮಾನಕ್ಕೆ ಶರಣಾಗಬೇಕು.'

ರಾಮು:—ಮಾಲಿನೀ! ಮಾಲಿನೀ!!

ಮಾಲಿನಿಯು ತಲೆಬಗ್ಗಿಸಿಕೊಂಡು ಬಂದು ಸುಮ್ಮನೆ ನಿಂತಳು.

ಕಮು:—ತಪ್ಪು ಯಾರಿಂದ ಉಂಟಾಯಿತು? ನಿಮಗೆ ಇಷ್ಟು ಕ್ರೌರ್ಯವೇಕೆ?

ರಾಮು:—ಮಾಲಿನೀ! ನಿಜವಾಗಿ ಹೇಳು.

ಮಾಲಿನಿಯು ಸುಮ್ಮನಿದ್ದಳು.

ರಾಮು:—ನೀವು ಯಾವಾಗಲಾದರೂ ಈ ಹುಡುಗಿಯನ್ನು ನೋಡಿದ್ದಿರಾ?

ನಿನ್ನೆ ಸಾಯಂಕಾಲವೆ ಮೊದಲನೇ ಸಾರಿ; ಈ ಪ್ರಾತಃಕಾಲ ಎರಡನೆಯ ಸಾರಿ.

ಉಮಾಕಾಂತನು ತಲೆಬಗ್ಗಿಸಿಕೊಂಡು ಸುಮ್ಮನಿದ್ದನು.

ರಾಮು:—ಅಯ್ಯಾ! ನೀವು ದೇಶಭಕ್ತರೆಂದೂ, ಶೀಲವಂತರೆಂದೂ, ನೀವು ಕಾಲಿಟ್ಟ ಮನೆಯು ಪಾವನವಾಗುವುದೆಂದೂ ಭ್ರಮೆಯಿಂದ ತಪ್ಪದೆ ನಮ್ಮ ಮನೆಯಲ್ಲಿಯೆ ಮೊಕ್ಕಾಂ ಮಾಡಬೇಕೆಂದು ..... ನಾನು .....

ಕಮು:—(ರಾಮುಕಾಂತನ ಮಾತಿಗೆ ಅಡ್ಡಲಾಗಿ) ಸಾಕು! ಸಾಕು!! ಈ ಕಪಟನಾಟಕವನ್ನು ಸಾಕುಮಾಡಿ. ಅವರ ಮನಸ್ಸನ್ನು ನೋಯಿಸಬೇಡಿ. ಆತನು ಯಾರೆಂಬುದು ನಿಮಗೆ ತಿಳಿಯದು. ಮಾಲಿನೀ! ಈಕೆಯ ಹೆಸರನ್ನು ನಿಮಗೆ ಸರಿಯಾಗಿ ಹೇಳಲಿಲ್ಲ.

ಮಾಲಿನಿಯು ಮುಖವೆತ್ತಿ ನೋಡಿದಳು. ಉಮಾಕಾಂತನು ಸಹ ..... ಪರಸ್ಪರ ದೃಷ್ಟಿಯಿಂದ ಪ್ರತಿಬಿಂಬಿತವಾದ ಮುಖವನ್ನು ನೋಡಿಕೊಂಡರು.

'ಹದಿಮೂರು ವರುಷ ಪ್ರಾಯದಲ್ಲಿ ದೀನವಿಲ್ಲದ ಕೋಣೆಯಲ್ಲಿ ನೋಡಿ ಅನಂತರ ಮುಖ ನೋಡುವುದಿಲ್ಲವೆಂದು ವ್ರತ ಹಿಡಿದು, ದುರ್ಭಾಗ್ಯರಾದ ಅವರ ಮಾತನ್ನು ಕೇಳಿ, ಕೆಲಸಕ್ಕೆ ಬಾರದವಳೆಂದು ಆ ದಿನ ನೀನು ಕಳುಹಿಸಿಕೊಟ್ಟ ಆ ರಾಜೇಶ್ವರಿಯೆ ಈಕೆ. ನೀನು ಅತಿ ಕ್ರೂರನೆಂತಲೂ ಹತ್ತು ಸಾರಿ ದೂರು ತ್ತಾ 'ಪುರುಷನು ಕೃತಘ್ನ' ಎಂಬ ಪದ್ಯವನ್ನು ಬರೆದು ಅದರಲ್ಲಿ ಉದಾಹರಿಸಿದ ನಿನ್ನ ಗಂಡನೇ ಈತನು. ನಿಮ್ಮ ಪರಸ್ಪರಭಿನ್ನಾಭಿಪ್ರಾಯಗಳು ಈಗ ದೂರವಾಯಿತಲ್ಲವೆ? ನಿಮ್ಮಿಬ್ಬರನ್ನೂ ಸೇರಿಸುವುದಕ್ಕೆ ಒಂದು ವರುಷದಿಂದ ಪ್ರಯತ್ನಪಟ್ಟೆ. ಕಾಲ ಕರ್ಮವು ಪರಿಪಕ್ವಕ್ಕೆ ಬಂದು ನಿನ್ನೆ ಫಲವಾಯಿತು. ಕಮಲೆಯು ಹೇಳಿದಂತೆ ಈ ಕಪಟನಾಟಕವನ್ನು ನಾನೇ ಮಾಡಿದೆ. ಅಗೋ! ನಿನ್ನ ಹೆಂಡತಿಯ ಸೋದರ ಮಾವನೂ, ಅಣ್ಣತಮ್ಮಂದಿರೂ ಆ ಕೊಠಡಿಯಲ್ಲಿದ್ದಾರೆ. ನನ್ನನ್ನು ನೀವಿಬ್ಬರೂ ಕ್ಷಮಿಸಿ.' 'ಮಾಲಿನೀ', 'ಉಮಾಕಾಂತ'ರಿಬ್ಬರೂ ನಿಶ್ಚೇಷ್ಟಿತರಾದರು. ಕಣ್ಣೀರು ತುಂಬಿಕೊಂಡು ಒಬ್ಬರನ್ನೊಬ್ಬರು ನೋಡುತ್ತಾ ನಿಂತುಕೊಂಡರು.

ಕನ್ನಡಿಗರೇ!

ಬೊಂಬಾಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲು

(MADRAS BRAHMINS' LODGE.)

(ಸ್ಥಾಪನೆ:—1912.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರಿಯರ್ ರೋಡ್, ಫೋರ್ಟ್, ಬೊಂಬೈ.

ತಾರಿನ ಪತ್ತೆ:—"ಕಾಣೆವಾರ್" ಟೆಲಿಫೋನ್:—21386

ಇದು ನಮ್ಮ 'ಸಿಲ್ವರ್ ಜುಬಿಲಿ' ವರ್ಷ! ಅಂದ ಬಳಿ[illegible]ಚ್ಚಿನ ಪ್ರಶಂಸೆಗೆಡೆಯಿಲ್ಲ. ಸುಗ್ರಾಸ ಭೋಜನ, [illegible] ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಶುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ಕುಡಿಯಿರಿ ನಿಮ್ಮ ದಾಹವನ್ನು ನಿವಾರಿಸಿಕೊಳ್ಳಿ

ಕಣಿನ್ ದೇವನ್ ಟೀಯಿಂದ.

ಟ್ರೇಡ್ ಮಾರ್ಕ್

ಒತ್ತಾಯಪಡಿಸಿರಿ

ಕಣಿನ್ ದೇವನ್ ಟೀ

ಸಿಗುವಂತೆ

ನೀವು ಯಂದೂ

ಪಶ್ಚಾತ್ತಾಪ ಪಡಲಾರಿರಿ

SOLE S. K. AGENTS:

THE KERALA TEA SYNDICATE,

PONANI - MALABAR.

ಕಿವುಡರಿಗೆ

"ಡೆಫ್‌ಕಿಲ್ಲರ್" ಕಿವುಡತನವನ್ನೂ, ಕಿವಿಗೆ ಸಂಬಂಧಿಸಿದ ಇತರ ಎಲ್ಲ ರೋಗಗಳನ್ನೂ ಶಾಶ್ವತವಾಗಿ ಗುಣಪಡಿಸುವ ಹೊಸದೊಂದು ಅತ್ಯಾಶ್ಚರ್ಯಕರವಾದ ಔಷಧ. ಕಿವುಡತನವು ಎಷ್ಟೇ ಹಳೆಯದಾಗಿರಲಿ, ಅದು ಯಾವ ಸಂದೇಹವೂ ಇಲ್ಲದೆ, ಯಾವತ್ಕಾಲಕ್ಕೂ ಗುಣವಾಗುವುದು ಮತ್ತೂ ಕಿವುಡರು ಸಂಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಕೇಳಲು ಆರಂಭಿಸುವರು. ಕಿವುಡತನವು ಸ್ವಲ್ಪವಾಗಿರಲಿ, ಪಾರ್ಶ್ವದ್ದಾಗಿರಲಿ, ಸಂಪೂರ್ಣವಾಗಿರಲಿ, ಅದು ಕಠಿಣವಾದ ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ, ಮುದುಡಿಹೋದ ನರಗಳಿಂದ ಅಥವಾ ಗಂಟಲಿನ, ಮೂಗಿನ ಇಲ್ಲವೆ ಒಳಗಿನ ಅವಯವಗಳ ತೊಂದರೆಗಳಿಂದಲೇ ಉಂಟಾಗಿರಲಿ—ಏನೂ ಚಿಂತ್ಯವಿಲ್ಲ. ಕಿವಿ ಸೋರುವುದು ಕೂಡ ಇದರಿಂದ ನಿಲ್ಲುವುದಲ್ಲದೆ, ಸ್ಪಷ್ಟವಾಗಿ ಕೇಳುವ ಶ್ರವಣಶಕ್ತಿಯು ಶಾಶ್ವತವಾಗಿ ಹಿಂದಿರುಗುವುದು. ಈ ದಿವ್ಯೌಷಧದಿಂದ ಸಾವಿರಾರು ಮಂದಿ ಕಿವುಡರು ಯಶಸ್ವಿಯಾಗಿ ಗುಣಹೊಂದಿದ್ದಾರೆ. **ಬೆಲೆ ರೂ. 5. ಪೋಸ್ಟೇಜ್ ಆಣೆ 7.**

MAHAMBS TRADING COMPANY OF ASIA, P. O. Box 2186, Indian Depot, Bombay.

ಸಾಹುಕಾರರಿಗೆ ಮುಖ್ಯವಾದ ಒಳ್ಳೆಯ ವರ್ತಮಾನ.

ನಾವು ಕರಾಚಿ ಜೀನಸು, ಕಬ್ಬಿಣದ ಸಾಮಾನು, ಗಾಜಿನ ಸಾಮಾನು, ಇಂಗ್ಲಿಷ್ ಮತ್ತು ಪೇಟೆಂಟ್ ಔಷಧಗಳು ಇವೇ ಮೊದಲಾದ ಪ್ರತಿಯೊಂದು ಬಗೆಯ ಸರಕುಗಳನ್ನೂ ವಿತರಣಾದ ಕಮಿಶನ್ ದರದಲ್ಲಿ ಒದಗಿಸುವ ಕೆಲಸವನ್ನು ಕೈಕೊಳ್ಳುತ್ತೇವೆ. ಒಮ್ಮೆ ಪರೀಕ್ಷಿಸಿದಲ್ಲಿ ಯಾವಾಗಲೂ ತರಿಸುವಂತಾಗುವುದು.

ವಿವರ ಪತ್ರಕ್ಕಾಗಿ ಇಂದೇ ಕೇಳಿರಿ.

THE KING OF DYES

Special Royal Hair Dye

1935ನೇ ಇಸ್ವಿಯ ಎ. ಐ. ಐ. ಪ್ರದರ್ಶನದಲ್ಲಿ ಬಂಗಾರದ ಬಹುಮಾನ ಪದಕವು ದೊರಕಿದೆ.

ನಿಮ್ಮ ಕೂದಲು ತನ್ನ ಸ್ವಾಭಾವಿಕ ಬಣ್ಣವನ್ನು ತಳೆಯುತ್ತದೆ ಮತ್ತೂ ಹೊಳಪಿನ ಮೃದುತ್ವವನ್ನು ಪಡೆಯುತ್ತದೆ– ಈ ನಿಮ್ಮ ಗುಟ್ಟನ್ನು ಯಾರೂ ತಿಳಿಯರು. ಇಂದೇ ಒಂದು ಬಾಟಲಿಯನ್ನು ತರಿಸಿ– ಅದರಷ್ಟು ಒಳ್ಳೆದು ಇಂಡಿಯದಲ್ಲಿ ಇನ್ನೊಂದಿಲ್ಲ.

1 ಪೆಟ್ಟಿಗೆಗೆ ರೂ. 1–2. 6 ಪೆಟ್ಟಿಗೆಗಳಿಗೆ ರೂ. 5–0.
3 ಪೆಟ್ಟಿಗೆಗಳಿಗೆ ,, 2–12. 12 ಪೆಟ ್ಟಿಗೆಗಳಿಗೆ ರೂ. 9–0.
ಪೋಸ್ಟೇಜಿನ ಸಹಿತ ಬೆಲೆ ಇಂಡಿಯಕ್ಕೆ ಮಾತ್ರ.

ಇಂಡಿಯಕ್ಕೆ ಸೋಲ್ ಡಿಸ್ಟ್ರಿಬ್ಯೂಟರ್ಸ್:–

THE MAQBOOL AGENCY,
Bombay 3. Tel: "AGENCY."

DIAMONDS! DIAMONDS!
BEST BRILLIANCY!

K. R. K. SHET,
Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್‌ಸ್ಟ್ರೈಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.



ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.

The United India Life Assurance Co., Ltd.,

Head Office: MADRAS. { ESTABLISHED: 1906. } Branch for Karnatak: UDIPI.

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:–

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

A Modern Way

A CURRENT Account saves you time and steps. The Bank keeps for you an excellent receipt—your paid cheque. And your cheque book gives you the whole story of just where every pie goes. It is a complete record on which to build your budget. Consider the advantages of this modern way to handle money and start a Current Account with any one of the offices of this Bank.

The Travancore National Bank, Ltd.

INCORPORATED IN TRAVANCORE 1912.
Head Office: ALLEPPEY.

Paid up Capital & Reserves ...	Rs.	13,71,000
Deposits	Rs.	1,49,00,000
Total Resources	Rs.	1,84,00,000

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ **ದ್ರಾಕ್ಷಾಮೃತ** ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೇಳೋಣ, ಬಾಯಿಕ್ಕೆ ಸಾಪು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ಸಪ್ಪನಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಿನಲ್ಲಿ ಅಡ್ಡಿ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿದೀತು.

ಪ್ರಮಾಣ:– ನಸಿಕಿಸಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ. ೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು–ವಿಜಾರಕರ ಬ್ರದರ್ಸ್, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ, ಉಡ್ಪಿ—ಪೈ ಥಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ. ಕಾರ್ಕಳ—ವ್ಹಿ. ವ್ಹಿ. ಶೆಣೈ. ಕುಂದಾಪುರ–ಕೆ. ಆರ್. ಭಡಜೀ. ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

Spleen & Liver Enlargement. **ಛತ್ರಬಂದು** (ರಿಜಿಸ್ಟರ್ಡ್)

ಮಕ್ಕಳ ಮರಣವನ್ನು ತಪ್ಪಿಸುವುದು. ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಅಜೀರ್ಣ, ಭೇದಿ, ಮಲಬದ್ಧತೆ, ಹಸುರು ನರಗಳು, ಕಾಮಾಲೆ, ಮೈ ಕೈ ಬಾವು, ಕ್ಷೀಣತ್ವಗಳಲ್ಲಿ ಒಂದೇ ವಾರದಲ್ಲಿ ಅತ್ಯಾಶ್ಚರ್ಯಕರವಾದ ಗುಣ ಕೊಡುವುದು. ವರ್ಷಗಟ್ಟಲೆ ಔಷಧವನ್ನು ಕುಡಿಸಿ ವ್ಯಥೆಪಡಬೇಡಿರಿ.

ಪ್ರಧಾನ ವೈದ್ಯರು:—ಡಾ। ಎ. ಎಸ್. ಶ್ರೀನಿವಾಸ ರಾವ್, ಯಂ. ವಿ. ಸ್ಯಾಸಾದಿಕ ಔಷಧಾಲಯ, ಶಿವಮೊಗ್ಗ. ಸಿಟಿ ಜನರಲ್ ಮೆಡಿಕಲ್ ಏಜನ್ಸಿ, ಬೆಂಗಳೂರು.

ಕಳೆದ ವಾರ

'ಹಳೆಯ ಯಜಮಾನರ ಪಾದವೇ ಗತಿ'

ಹೌದೆಂದು ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರ ಭವಿಷ್ಯವಾಣಿ. 'ಕಾಂಗ್ರೆಸಿನವರ ಕೌನ್ಸಿಲ್–ಎಸೆಂಬ್ಲಿಗಳ ಪ್ರವೇಶವು, ಎದುರಾಳಿಗಳ ಎದುರಾಟದಿಂದ, ರಕ್ಷಾಕವಚಗಳ ದೆಸೆಯಿಂದ ಅಸಾರ್ಥಕವೆನ್ನಿಸಿ, ಈಗ ಸಭಾಮಂದಿರಗಳನ್ನು ಪ್ರವೇಶಿಸಬೇಕೆಂದು ಅಬ್ಬರಿಸುತ್ತಿರುವವರೇ ಆಗ, ದೀನವಾಣಿಯಿಂದ ಸಾಕಪ್ಪಾ ಸಭಾಮಂದಿರಗಳೆಂದೂ ಕೂಗತೊಡಗುವಾಗ, ಅಥವಾ ಅವರೇ ಕೋಪದಿಂದ, ಈ ಸಭಾಮಂದಿರಗಳು ಕಾಂಗ್ರೆಸಿನವರಿಗಲ್ಲವೆಂದೂ ಸಿಡಿಮಿಡಿಗೊಳ್ಳುವಾಗ, ಆಗ ಗಾಂಧಿಯವರೇ ಪುನಃ ರಾಜಕೀಯ ಕ್ಷೇತ್ರಕ್ಕೆ ಕಾಲಿಡುವರು'—ಹೀಗೆಂದು ಡಾಕ್ಟರರು ಮುಂದಿನ ಮಾತು ನುಡಿದಿದ್ದಾರೆ. ಬಹುಶಃ ಇವರ ಈ ಭವಿಷದ್ವಾಣಿಯು ನಿಜವಾಗಲೂ ಬಹುದು. ಇಂದಿನ ಸಂದರ್ಭಗಳನ್ನು ಪರಿಶೀಲಿಸಿದಲ್ಲಿ, ಅದು ಸತ್ಯವಾಗುವ ಸಂದರ್ಭಗಳೂ ಹಲವು ಕಂಡುಬರುತ್ತಿವೆ. ಹಿಂದೊಮ್ಮೆ, ಸ್ವರಾಜ್ಯಪಾರ್ಟಿಯವರು, ತೀರಾ ಅಸಹ್ಯದಿಂದ, ನ್ಯಾಯವಿಧಾಯಕ ಮಂದಿರಗಳನ್ನು ಬಿಟ್ಟು ಹೊರಟಂತೆ, ಇವರೂ ಆಗ ಅಲ್ಲಿಂದ ಹೊರ ಹೊರಡಲು ಆತಂಕವೇನಿದೆ ಎಂದು ಭಾವಿಸುತ್ತೀರಿ? ಹಿಂದೆ ನಡೆದುದನ್ನೇ, ಇಂದಿನ ಚರಿತ್ರೆಯೂ ನಮಗೆ ಪುನಃ ನೆನಪಿಗೆ ತಂದುಕೊಡಬಹುದಾಗಿದೆ. ಇದಕ್ಕೆ ಇನ್ನೂ ಒಂದು ಪ್ರಬಲ ಕಾರಣವುಂಟು. ಅಂದಿನ ಸ್ವರಾಜ್ಯಪಾರ್ಟಿಯವರು ಅಧಿಕಾರಸ್ವೀಕಾರವನ್ನು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಕಾಂಗ್ರೆಸಿನವರಾದರೋ ಅದನ್ನು ಏತಕ್ಕೆ ಸ್ವೀಕರಿಸಬಾರದೆಂದೇ ಇನ್ನೂ ಆಲೋಚಿಸುತ್ತಲೇ ಇದ್ದಾರೆ. ಅಂದರೆ ಆ ಸ್ವರಾಜ್ಯ ಪಾರ್ಟಿಯವರಿಗಿಂತಲೂ ಇವರ ಆಲೋಚನೆ ಮತ್ತೂ ಒಂದು ಹೆಜ್ಜೆ ಮುಂದೆ! ಆದಕಾರಣ ಈ ಹೆಜ್ಜೆ ಜಾರಿ, ಹಿಂದಿನಂತೆಯೇ ಅಲ್ಲೇ ಪ್ರಪಾತವಾದೀತೆಂದು ಡಾಕ್ಟರರ ಅಭಿಪ್ರಾಯ. ಇದರ ಪರಿ ಏನೆಂದು ಮುಂದೆ ನೋಡೋಣ.

× × × × ×

ಸ್ಪೈನಿನ ಸರಕಾರಕ್ಕೆ ಒದಗಿರುವ ಕಷ್ಟಕ್ಲೇಶಗಳ ಪರಂಪರೆ

ಎಲ್ಲರಿಗೂ ತಿಳಿದುದೇ. ಅದು ತನ್ನ ಜೀವನ-ಮರಣಕ್ಕಾಗಿ ವೀರಾವೇಶದಿಂದ ಇನ್ನೂ ಕಾದಾಡುತ್ತಲೇ ಇದೆ. ಆದರೆ, ಇದರಲ್ಲೊಂದು ವಿಶೇಷ. ಅದು ಇಷ್ಟು ಗಂಡಾಂತರದಲ್ಲಿದ್ದರೂ, ತನ್ನ ಕಷ್ಟಪರಿಹಾರಕ್ಕಾಗಿ, ಜಿನೇವದ ಜನಾಂಗಸಂಘದ ನೈತಿಕವಾದ ಅಥವಾ ಇತರ ಬಗೆಯ ಯಾವ ಸಹಾಯವನ್ನೂ ಆ ಸಂಘದಿಂದ ಹಾರೈಸಿಲ್ಲ. ಮತ್ತೇನೆಂದರೆ, ಸ್ಪೈನಿಗೆ ಅಧಿಕಾರವಿರುವ ಸಮುದ್ರಗಳಲ್ಲಿ, ಜರ್ಮನ್ ಹಡಗುಗಳು ನಡೆಯಿಸುತ್ತಿರುವ ಅನ್ಯಾಯಗಳ ಕುರಿತು, ಸ್ಪೈನ್ ಸರಕಾರವು, ಜನಾಂಗ ಸಂಘಕ್ಕೆ ತನ್ನ ನಿಷೇಧಾತ್ಮಕವಾದ ಒಂದು ಪತ್ರವನ್ನು ಮಾತ್ರ ಕಳುಹಿಸಿದೆ. ಇದರ ತಾತ್ಪರ್ಯವೇನೆಂದರೆ—ಈ ಸಂಗತಿ ಜನಾಂಗಸಂಘಕ್ಕೆ ತಿಳಿದಿರಲಿ ಎಂಬುದಷ್ಟೆ; ಸಂಘವೇನಾದರೂ ಕಾರ್ಯಕ್ರಮಗಳನ್ನು ಜರುಗಿಸಬೇಕು ಎಂದಲ್ಲ. ಇದರಿಂದ ಏನು ತೋರುವುದು? ದೇವಸ್ಥಾನದ ಕಟ್ಟಡವಿದೆ; ದೇವರಿಲ್ಲ; ದೇವರ ಪ್ರತಿಮೆ ಇದ್ದರೂ ಸಾನ್ನಿಧ್ಯವಿಲ್ಲ. ಜನಾಂಗಸಂಘವೇನೋ ಉಂಟು. ಆದರೆ ಅದರಲ್ಲಿ ಜೀವಕಳೆ ಇಲ್ಲ; ಪ್ರಭಾವವೆಲ್ಲ ಅಭಾವವಾಗಿದೆ; ಅದು ಪ್ರಪಂಚದ ರಾಷ್ಟ್ರಗಳಲ್ಲಿ ನಡೆಯುತ್ತಿರುವುದೇನೆಂದು ಆ ವಾರ್ತೆಗಳನ್ನು ಸಂಗ್ರಹಿಸುವ ಒಂದು ಕಾರ್ಯಾಲಯ ಮಾತ್ರವಾಗಿದೆ! ಪ್ರಪಂಚದ ಶಾಂತಿಸ್ಥಾಪನೆಗಾಗಿ ಹೊರಟ ಒಂದು ಸಂಸ್ಥೆಯ ಸ್ಥಿತಿ ಇಷ್ಟಕ್ಕಿಳಿಯಬಹುದೇ? ಎಂತಹ ದುಷ್ಕಾಲ!

× × × × ×

ಬಂಗಾಳದ ಗವರ್ನರರು ತಮ್ಮದೊಂದು

ಭಾಷಣದಲ್ಲಿ ಶ್ರುತಪಡಿಸಿದ್ದಂತೆ, ಬಂಗಾಳದ ಯುವಕರ ಆಂತರಕ್ಷಣೆಗಾಗಿ ಆಗಲೇ ಒಂದು ಸಮಿತಿಯನ್ನೂ ಅಲ್ಲಿ ಸ್ಥಾಪಿಸಿದ್ದಾರೆ. ಸಮಿತಿಯ ಮುಂದಿನ ಯೋಜನೆಗಳೇನೋ ತಿಳಿಯದಾದರೂ, ಸಮಿತಿಯ ಸದಸ್ಯರು ಯೋಗ್ಯರೆಂಬುದು ತೃಪ್ತಿಕರವಾಗಿದೆ. ಇದರ ಚೆಯರ್‌ಮ್ಯಾನರಾಗಿ ಸರ್ ಮನ್ಮಥನಾಥ ಮುಖರ್ಜಿಯವರೂ, ಕಾರ್ಯದರ್ಶಿಗಳಾಗಿ ಖಾನ್ ಬಹದ್ದೂರ್ ತಸಾದುಕ್ ಅಹಮ್ಮದರವರೂ ನಿಯೋಜಿಸಲ್ಪಟ್ಟಿರುವುದು ಇನ್ನಷ್ಟು ಸಂತೋಷದ ಸುದ್ದಿಯಾಗಿದೆ. ಈ ಸಮಿತಿಯವರು, ಬಂಗಾಳದ ಯುವಕರ ಸ್ಥಿತಿಗತಿಗಳನ್ನು ವೃದ್ಧಿಗೊಳಿಸುವೆ ಹಾಗೆ ಯತ್ನಿಸುವೆ, ಶವುಗಳ ಮೇಲ್ವಿಚಾರ ವಹಿಸುವ ಅದೊಂದು ಸಂಸ್ಥೆಯನ್ನು ಸ್ಥಾಪಿಸಲುಳ್ಳ ಉದ್ದೇಶವನ್ನು ದೃಷ್ಟಿಯಲ್ಲಿರಿಸಿಕೊಂಡು, ಶಿಫಾರಸು ಬರೆಯಬೇಕಾಗಿದೆ. ಆ ಸಂಸ್ಥೆಯ ಸ್ವಭಾವವೆಂತದೆಂದು, ಈಗ ಏರ್ಪಟ್ಟಿರುವ ಈ ಸಂಸ್ಥೆ ಶಿಫಾರಸು ಬರೆಯದೆ, ಆ ಸಂಸ್ಥೆಯ ರಚನೆಯಾಗದೆ ಏನೊಂದನ್ನೂ ಹೇಳಬರುವುದಿಲ್ಲ. ಎಂದು ವೇಳೆ, ಈ ಸಂಸ್ಥೆಗಳ ಕಾರ್ಯಕಲಾಪಗಳು ಯಶಸ್ವಿಯಾದಲ್ಲಿ, ಇಂತಹ ಸಂಸ್ಥೆಗಳ ಸ್ಥಾಪನೆಯು ಭಾರತದಲ್ಲೆಲ್ಲೂ ಆಗುವಂತೆ ಮೇಲ್ಪಂಕ್ತಿ ಹಾಕಿ ಕೊಟ್ಟ ಆ ಅಪಾರಕೀರ್ತಿಯು ನಮ್ಮ ಬಂಗಾಳ ಗವರ್ನರರ ಪಾಲಿಗೇ ದೊರಕುವಂತಾಗುವುದು.

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

Estd: 1906

CANARA BANK

LIMITED.

ಕಾಂಗ್ರೆಸಿನ ಶಿಸ್ತನ್ನು ಇಷ್ಟೊಂದು ಬಿಗಿ ಮಾಡಿದರೂ,

ಬಿಹಾರು ಮತ್ತೂ ಮಧ್ಯಪ್ರಾಂತಗಳಲ್ಲಿ, ಚುನಾವಣೆಗಾಗಿ ನಿಂತಿರುವ ಉಮೇದುವಾರರಲ್ಲಿ ಹಲವರು, ಆ ಶಿಸ್ತನ್ನು ಪಾಲಿಸದೆ, ಅವಿಧೇಯರಾಗಿ ವರ್ತಿಸುತ್ತಿರುವರೆಂಬ ವಾರ್ತೆ ಕೇಳಬರುತ್ತಿದೆ. ಇದೇನೂ ಆಶ್ಚರ್ಯವಲ್ಲ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು, ಅನೇಕ ಸಂದರ್ಭಗಳಲ್ಲಿ, ತಮ್ಮ ಹಿಂದಿನ ವಿಶ್ವಾಸಪಾತ್ರರಾದ ಕಾಂಗ್ರೆಸ್ ಮಂದಿಯನ್ನು, ಆ ಯೋಗ್ಯರನ್ನು ಆರಿಸದೆ ದುಡ್ಡಿನ ಬಲವನ್ನೋ, ಪ್ರಾಬಲ್ಯದ ವ್ಯಾಪ್ತಿಯನ್ನೋ ಮುಖ್ಯವಾಗಿ ಎಣಿಕೆಗೆ ತೆಗೆದುಕೊಂಡು, ಅಂತಹ ಹೊಸ ನಾಲ್ಕಾಣೆಯವರನ್ನು 'ಅನುಕೂಲಸಿಂಧುಶಾಸ್ತ್ರ'ಕ್ಕೆ ಅನುಸಾರವಾಗಿ ಆರಿಸಿರುವುದರಿಂದಲೇ, ಈ ರೀತಿಯ ತೇಜೋಭಂಗವಾಗಲೂ ಒಂದು ಕಾರಣವೆಂದು ಧಾರಾಳವಾಗಿ ಹೇಳಬಹುದಾಗಿದೆ; ತಿಳಿಯಬಹುದಾಗಿದೆ. ಇಂದಿನ ದಿನಗಳಲ್ಲಿ, ಕಾಂಗ್ರೆಸ್ ಟಿಕೆಟಿನಿಂದ ಚುನಾವಣೆಯ ಕಾರ್ಯವು ಸುಲಭವಾಗುವುದೆಂದು ಉಮೇದುವಾರರು ತಿಳಿದಿರುವುದೂ, ಹಾಗೆಯೇ ಅನೇಕ ಮಂದಿ ಹೊಸಬರಿಗೆ ಆ ಟಿಕೆಟ್ ಸುಲಭದಲ್ಲಿ ದೊರೆಯುವಂತಾಗಿರುವುದೂ ಅದೂ 'ಅವಿಧೇಯತೆ'ಯ ಪ್ರೋತ್ಸಾಹಕ್ಕೆ ಇನ್ನೊಂದು ಕಾರಣವಾಗಿದೆ. ಇದು ಹೇಗಿದ್ದರೂ, ಈ ಅವಿಧೇಯತೆಯ ನಿದರ್ಶನಗಳಿಂದ ಜನರಲ್ಲಿ ಕಾಂಗ್ರೆಸಿನ ಮೇಲಿರಬಹುದಾದ ವಿಶ್ವಾಸದ ಕಟ್ಟು ಸಡಿಲವಾಗುತ್ತಿದೆ. ಎದುರಾಳಿಗಳ ಕಾರ್ಯ ಸುಲಭವಾಗುತ್ತಿದೆ. ಈ ಶೋಚನೀಯ ಪರಿಸ್ಥಿತಿಗೆ ಹೊರಗಿನವರು ಯಾರೂ ಕಾರಣರಲ್ಲ. ಒಳಜಗಳ, ಚಿಲ್ಲರೆ ವಿವಾದಗಳಿಗೆ ಮನಸ್ಸು ಕೊಟ್ಟು, ತಮ್ಮ ಪಂಥಕ್ಕಾಗಿ ಹೋರಾಡುವ ಅಂತಹ ಕಾಂಗ್ರೆಸಿನ ಮುಂದಾಳುಗಳೇ ಕಾಂಗ್ರೆಸಿನ ಈ ತೇಜೋಭಂಗಕ್ಕೆ ಜವಾಬುದಾರರೆಂದರೆ ಅತ್ಯುಕ್ತಿಯಲ್ಲ.

× × × × ×

ಪೋಲೀಸ್ ಶಾಖೆಯು, ಶಾಂತಿರಕ್ಷಣೆಗಾಗಿ

ಏರ್ಪಾಡಾದ ನಮ್ಮ ಪ್ರಭುತ್ವದ ಒಂದು ಪ್ರಾಮುಖ್ಯವಾದ ಅಂಗವಾಗಿದೆ. ದುಷ್ಟರನ್ನು ನಿಗ್ರಹಿಸಿ, ಶಿಷ್ಟಪಾಲನೆಯನ್ನು ಮಾಡುವ ಮಹತ್ತಾದ ಜವಾಬುದಾರಿಯು ಈ ಶಾಖೆಯ ಮೇಲುಂಟು. ಈ ಸಂಸ್ಥೆಯು ಎಷ್ಟು ನಿರ್ವಂಚನೆಯಿಂದ ಕೆಲಸ ಮಾಡುತ್ತದೋ ಅಷ್ಟೂ ಪ್ರಜೆಗಳಿಗೆ ಸುಖ; ಸರಕಾರಕ್ಕೆ ಕೀರ್ತಿ. ಈ ಕಾರಣದಿಂದಲೇ ಪೋಲೀಸ್ ಶಾಖೆಗೆ ಅಲ್ಲಲ್ಲಿ ಆಗಾಗ ಉಚ್ಚಾಧಿಕಾರಿಗಳು ಎಚ್ಚರಿಕೆಯ ಬುದ್ಧಿವಾದಗಳನ್ನು ಹೇಳುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಮುಖ್ಯವಾಗಿ, ಯಾವ ಕಾರಣದಿಂದಲೋ, ಯಾರೇನು ಕಂಡೋ 'ಪೋಲೀಸರು ಜನತೆಯೊಡನೆ ಈಗಿರುವುದಕ್ಕೂ ಉತ್ತಮವಾದ ಸಹಾನುಭೂತಿಯನ್ನು ಸಂಪಾದಿಸಬೇಕು; ಸಮೀಪಸಂಪರ್ಕವನ್ನು ಇಟ್ಟುಕೊಂಡಿರಬೇಕು' ಎಂಬ ಸಾಮಾನ್ಯವಾದ ಹಾಡಿನ ಸೊಲ್ಲೊಂದನ್ನು ನಾವು ಕೇಳುತ್ತಿದ್ದೇವೆ. ಹಾಗೆಯೇ ಜೋರ್‌ಹಟ್‌ನಲ್ಲಿ ಜರುಗಿದ ಅಸ್ಸಾಂ ಪೋಲಿಸ್ ಸಂಘದ ವಾರ್ಷಿಕ ಅಧಿವೇಶನದಲ್ಲಿಯಾದರೂ, ಅಧ್ಯಕ್ಷರಾದ ಮಿ. ಸೈಕಯಾರವರೂ ಇದೇ ಅರ್ಥವನ್ನೇ ಪುಷ್ಟೀಕರಿಸಿ ಮಾತಾಡಿದರು. 'ಹಳೇ ರೀತಿಯ ಪೋಲೀಸ್ ಅಧಿಕಾರಿಗಳಿಗೆ ಬೆದರಿ ನಡೆಯುವ ಕಾಲವು ಬೇಗನೇ ಮಾಯವಾಗಲಿದೆ' ಎಂದವರು ನುಡಿದರು. ಕಾಲವು ಹಾಗೆ ಬಂದರೆ, ಪೋಲೀಸರಿಗೂ, ಜನತೆಗೂ ಉತ್ತಮ ಸಂಬಂಧ ಬೆಳೆದರೆ ಎಲ್ಲರಿಗೂ ಸಂತೋಷವೇ. ನಿಜವಾಗಿಯೂ, ಈ 'ಹಳೇ ಸಂಪ್ರದಾಯದ ಪೋಲೀಸ್ ಅಧಿಕಾರಿ'ಗಳ ಭಯವು ತಪ್ಪುವ ಆ ದಿನವು ನಮ್ಮ ಭಾರತಕ್ಕೊಂದು ಶುಭಮುಹೂರ್ತವೇ. ಆದರೆ ಆ ಸುದಿನವು ಬರುವುದೆಂದು, ನಾವು ನೋಡುವುದೆಂದು ಎಂದು ಯಾರಾದರೂ ನಿರ್ಧರವಾಗಿ ಹೇಳಬಲ್ಲರೇ? ಪೋಲೀಸ್ ಉದ್ಯೋಗಿಗಳು ಆ ಹಳೆಯ ಮರ್ಜಿಯನ್ನು, ಪೂರ್ವದಿಂದ ಬಂದ ಆ ಪದ್ಧತಿಯ ಬಣ್ಣವನ್ನು ಮಾರ್ಪಡಿಸಿ, ಪ್ರಮಾಣಿಕ ಜನರಿಗೆ ತಾವು ಅವರ ರಕ್ಷಕ, ಸೇವಕರೆಂದು ಮನಗಾಣಿಸುವ ಶ್ರಮ ವಹಿಸುವ ವರೆಗೆ, ಈ ಸುದಿನವು ಬರುವುದೂ, ಪವಿತ್ರಧ್ಯೇಯವುಳ್ಳ ಈ ಉಪದೇಶಾಮೃತವು ಫಲಿಸುವುದೂ ಎರಡೂ ತುಂಬ ಕಷ್ಟವೆಂದು ನಮಗಂತೂ ತೋರುತ್ತದೆ. ಹೇಳಿ ನೋಡೋಣ! ಎಷ್ಟು ಮಂದಿ ಪೋಲೀಸ್ ಉದ್ಯೋಗಿಗಳು ತಾನೇ ಆ 'ಹಳೆಯ ಮರ್ಜಿ'ಯನ್ನು ಬದಲಾಯಿಸಲು ಒಪ್ಪುವರಂತೆ? ಸಿದ್ಧರಂತೆ?

× × × × ×

ಇಂಗ್ಲಿಷಿನಲ್ಲಿ 'ನಾನ್‌ಸೆನ್ಸ್' ಎಂದರೆ,—

ವೇಶಭಾಷೆಗಳಲ್ಲಿ 'ಅರ್ಥವಿಲ್ಲ'ವೆಂಬ ಅರ್ಥ ಕೊಡುತ್ತದೆ. ಆದರೆ ಅಷ್ಟು 'ಸಾಧು'ವಿನಂತಿರುವ ಈ ಶಬ್ದ, ಒಂದು ಸಭೆಯಲ್ಲಿ ಉಚ್ಚರಿಸಲ್ಪಟ್ಟದ್ದೇ ಆದರೆ, ಅದಕ್ಕಾಗಿ ಸಭೆಗಳಲ್ಲಿ ಅರ್ಥವಿಲ್ಲದಷ್ಟು ವಾಗ್ಯುದ್ಧವೇ ಆಗಬೇಕೇ? ಬೇಕಾಗಲೀ, ಬೇಡವಾಗಲೀ,—ಕಲ್ಕತ್ತೆಯ ಮುನಿಸಿಪಲ್ ಕಾರ್ಪರೇಶನಿನ ಆ ಒಂದು ವೋಟಿಂಗಿನಲ್ಲಿ 'ಈ ಶಬ್ದವನ್ನು, ತುಂಬಿದ ಸಭೆಯಲ್ಲಿ ಉಪಯೋಗಿಸುವುದು ಯೋಗ್ಯವೇ ಅಯೋಗ್ಯವೇ?' ಎಂದು ಬಹಳ ಹೊತ್ತು ವಾದ ನಡೆದೇ ಹೋಯಿತು. ಆ ವಾದದ ನಾದವೂ ಗಟ್ಟಿಯಾಗಿ ಕೇಳಬಂದಿತು! ಏನೋ ಒಂದು ಮಾತಿಗೆ, ಒಬ್ಬ ಕೌನ್ಸಿಲರ್ 'ನಾನ್‌ಸೆನ್ಸ್' ಎಂದುಬಿಟ್ಟರಂತೆ. ಅದೇ ಮೂಲವಾಗಿ ಅದು ಅಸಭ್ಯ ಶಬ್ದವೆಂದು ಇನ್ನೊಬ್ಬರೂ ಎದುರಂಗಡಿ ಹಾಕಿಬಿಟ್ಟರು! ಅಂತೂ 'ನಾನ್‌ಸೆನ್ಸ್' 'ನ್ಯುಯಿಸೆನ್ಸ್'ನ ರೂಪ ತಳೆದು, ವೋಟಿಂಗಿನಲ್ಲಿ ಚರ್ಚೆಯೇ ಚರ್ಚೆ; ಗಲಭೆಯೇ ಗಲಭೆ. ವಸ್ತುತಃ ಈ 'ನಾನ್‌ಸೆನ್ಸ್' ಶಬ್ದ, ಸಭೆಯಲ್ಲಿ ಉಪಯೋಗಿಸಲು ಯೋಗ್ಯವೋ, ಅಲ್ಲವೋ, ಕಾನೂನು ಪ್ರಕಾರ ಸಿಂಧುವೋ ಅಲ್ಲವೋ ಎಂದು ಯಾವ ಡಿಕ್ಷನೆರಿಯೂ, ಪೆನಲ್ ಕೋಡೂ ವ್ಯಕ್ತವಾಗಿ ತಿಳಿಸುವುದಿಲ್ಲವಾದರೂ, ಅದನ್ನು ಉಪಯೋಗಿಸುವಾಗ ಅನುಸರಿಸುವ ಆ 'ಧ್ವನಿ' ಬಿಗಡಾಯಿಸಿದಲ್ಲಿ ಮಾತ್ರ, ಅದರ ನಿಜಸ್ವರೂಪ, ನಿಜವಾದ ಅರ್ಥ ಕೆಟ್ಟು, ಇತರರ ಮನನೊಂದು ಇಂತಹ ಅವಾಂತರಗಳಿಗೆ ಕಾರಣವಾಗಬಹುದೆಂದು ನಮಗೆ ತೋರುತ್ತದೆ. ಅಥವಾ ಏನಾದರೂ ಕೆದಕಬೇಕೆಂದಿರುವ ಕೌನ್ಸಿಲರರಿಗೆ, ಪರಸ್ಪರ ಹೊಡೆದಾಡಿಕೊಳ್ಳಬೇಕೆಂಬ ಮೈಮನಸ್ಸಿರುವವರಿಗೆ, ಇಷ್ಟೇ ಸಿಕ್ಕಿದರೂ, ಈ 'ಕರ್ಣಾರ್ಜುನಕಾಳಗ'ಕ್ಕೆ ಯಥೇಷ್ಟ ಸಾಕಾಗುತ್ತದೆ ಅಲ್ಲವೇ?

× × × × ×

ನಮ್ಮ ಡಿ॥ ಬೋರ್ಡಿನ ಅಧಿವೇಶನವು

ಕಳೆದ ಬಾರಿ, ನಿರ್ದಿಷ್ಟ ಸಮಯದಲ್ಲಿ ನೆರೆಯಿತು; ಮುಕ್ಕಣದಲ್ಲಿಯೇ ಹಿರಿಯಿತು. ಇಂತಹ ಕ್ಷಣವಾತ್ರದ ವೋಟಿಂಗುಗಳು ನಮ್ಮಲ್ಲಿ ನಡೆದುದು ಅತ್ಯಪೂರ್ವ; ಆದುದರಿಂದ ನಮ್ಮ ಡಿ॥ ಬೋರ್ಡಿನ ಇತಿಹಾಸದಲ್ಲಿ ಇದೊಂದು ಮಹಾಯೋಗವೇ ಎನ್ನಬೇಕು. ಹೀಗೆ, 'ನೀರ ಮೇಲಿನ ಗುಳ್ಳೆ'ಯಂತೆ ಈ ವೋಟಿಂಗ್ ನೆರೆಯಲೂ ಹಿರಿಯಲೂ ಕಾರಣವು,—ಮೆಂಬರರುಗಳಿಗೆ ಸರಿಯಾಗಿ ೧೦ ದಿನಗಳ ನೋಟೀಸ್ ಇಲ್ಲದಿರುವುದೇ ಎಂದು ತಿಳಿದುಬರುತ್ತಿದೆ. ಇದು ನ್ಯಾಯವಾದ ಕಾರಣವೆನ್ನಲು ಅಡ್ಡಿ ಏನೂ ಇಲ್ಲ. ಆದರೆ ಈ ಸಂದರ್ಭದಲ್ಲಿ—ಈ ನ್ಯೂನತೆಗೆ ಜವಾಬುದಾರರು ಯಾರು, ಮೆಂಬರರಿಗೆ ನೋಟೀಸ್ ಸಾಲದೆಂಬುದು ತಿಳಿದಿರುತ್ತ ಅವರೀ ವೋಟಿಂಗಿಗೆ ಬಂದುದೇಕೆ, ಬಂದ ಮೇಲೆ, ತೆರಿಗೆದಾರರ ಪಾಪಪುಣ್ಯವನ್ನು ಯೋಚಿಸಿಯಾದರೂ, ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ಕಂಡಾದರೂ ವೋಟಿಂಗನ್ನು ಅಂದೇ ಮುಗಿಸುವ ಕೃಪೆ ಮಾಡಬಾರದಾಗಿದ್ದಿತೇ, ಹಿಂದೆ ಹೀಗೆ ನೋಟೀಸು ಸಾಲದ ವೋಟಿಂಗುಗಳು ಒಂದೆರಡಾದರೂ ಮೆಂಬರರ ಅನುಗ್ರಹದಿಂದ ನಡೆದುದಿಲ್ಲವೇ— ಎಂದು ಮುಂತಾಗಿ ಬರಬಹುದಾದ ಹಲವು ಕೆಲವು ಪ್ರಶ್ನೆಗಳಿಗೆ ಉತ್ತರ ಹೇಳಲು ನಾವು ಸಮರ್ಥರಲ್ಲವಾದರೂ, ಈಗಿನ ಬೋರ್ಡಿನಲ್ಲಿರುವ ಪಾರ್ಟಿಗಳ ಪಂಥದಿಂದ ಪರಿಸ್ಥಿತಿಯು ಇಷ್ಟಕ್ಕೆ ಬಂದು ನಿಂತಿದೆ ಎಂದು ವಿಷಾದಿಸಬೇಕಾಗಿದೆ. ಈ ಪಾರ್ಟಿಗಳ ಕಾದಾಟದಿಂದ ಖಾರ ಬೋರ್ಡಿನ ದುಡ್ಡಿಗೆ. ಒಂದು ವೋಟಿಂಗಿಗೆ ಬದಲು— ಎರಡು ವೋಟಿಂಗ್; ಸುಮಾರು ಮುನ್ನೂರು ರು ಪಾಯಿಗಳ ಭತ್ತೆ ಖರ್ಚಿನ ಬದಲು ದುಬಾರಿ ಭತ್ತೆಯ ಅನಾವ್ಯಯ. ಆದುದರಿಂದಲೇ ನಿಜವಾಗಿಯೂ ಇಲ್ಲಿ ಕೇಳಬೇಕಾಗಿದೆ—ಈ ದುರ್ವ್ಯಯಕ್ಕೆ ಜವಾಬುದಾರರು ಯಾರು? ಅಂತೂ ಕಲ್ಲಪ್ಪ-ಗುಂಡಪ್ಪನವರ ನಡುವೆ ಮೆಣಸಪ್ಪನ ಗತಿ ಹೀಗಾಯಿತಲ್ಲ! ದೇವರೇ!

ನೋಟೀಸು

ಮೊನ್ನೆ ಜರುಗಿದ ವಿಜಯನಗರ ಉತ್ಸವಗಳ ಕಾಲದಲ್ಲಿ ಹಂಪೆಯಲ್ಲಿ ತುಂಗಭದ್ರಾ ನದಿಯಲ್ಲಿ ದೋಣಿಯು ಮುಳುಗಿ ಮರಣಹೊಂದಿದವರಲ್ಲಿ ನಮ್ಮ ಕಂಪೆನಿಯ ವಿಮಾದಾರರಾದ ಶ್ರೀ. ಇ. ಎನ್. ವೆಂಕಟಾಚಲಯ್ಯ ಶೆಟ್ಟರು, ವರ್ತಕರು ಮತ್ತು ಬ್ಯಾಂಕರರು, ಮಂಚಲದೊರೆ, ಗುಬ್ಬಿ ತಾಲ್ಲೂಕು, ತುಮಕೂರು ಡಿಸ್ಟ್ರಿಕ್ಟ್, ಅವರೂ ಒಬ್ಬರೆಂದು ತಿಳಿದುಬರುತ್ತದೆ. ಅವರು ಈಗ ಆರು ತಿಂಗಳ ಹಿಂದೆ ನಮ್ಮ ಕಂಪೆನಿಯಲ್ಲಿ 1000/- ರೂ. ಗಳಿಗೆ ವಿಮೆಮಾಡಿರುತ್ತಾರೆ. ಕಂಪೆನಿಗೆ ಅವರ ವಿಮಾಹಣವನ್ನು ಶೀಘ್ರವಾಗಿ ಸಲ್ಲಿಸಬೇಕೆಂಬ ಇಚ್ಛೆಯಿರುವುದರಿಂದ, ಈ ವಿಷಯವಾಗಿ ಹೆಚ್ಚು ಮಾಹಿತಿಯನ್ನು ತಿಳಿದವರು ಕಂಪೆನಿಗೆ ಕೂಡಲೇ ದಯೆಯಿಟ್ಟು ತಿಳಿಸಿದರೆ ಉಪಕಾರವೆಂದು ಭಾವಿಸುತ್ತೇವೆ.

ಕಂಠೀರವ ಮತ್ತು ಕಂಪೆನಿ,
ಆಡಳಿತ ನಿರ್ವಾಹಕರು,
ದಿ ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಶ್ರೀ ನರಸಿಂಹರಾಜಾ ರೋಡ್, ಬೆಂಗಳೂರು ಸಿಟಿ.

JAYA LAXMI BANK, LT'D.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.

ಶಾಖೆಗಳು: ಪುತ್ತೂರು, ಕಾಸರಗೋಡು, ಬಿಕ್ಕಮಗಳೂರು, ಮತ್ತು ಮೂಡಿಗೆರೆ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO
ಸೆಕ್ರಟರಿ.

ಆರ್. ಮಾರ್ಟಿನ್ಸರ

ಆಸ್ತಮೊಡಾಯನ್

ಈ ಪಸ್ಮು ಔಷಧವು ಬಹಳ ಕಾಲದಿಂದ ಉಪ್ಪುವಿಸಿದ ಪದಾರ್ಥ ಅತೀ ಕಠಿಣಂಕರವಾದ ಕಫ, ಕೆಮ್ಮು, ಪಮ್ಮು, ನೆಗಡಿ, ಗಂಟಲುನೋವು ಎದೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶಮಾಡಿ ಗುಣುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಕಟ್ಟಿ ಮಾಡುತ್ತದೆ. ಈ ಔಷಧವ ಪೂರ್ತಿ ಗುಣಸಿಕ್ಕಬೇಕಾದರೆ ಒಂದೇ ಬಾಟ್ಲಿ ಮಾತ್ರ ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ತಿಳಿಸಿದ ಕಾಯಿಲೆಗಳು ಪುನಃ ಬೀಡಿಸುವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0 12 ಬಾಟ್ಲಿಗಳಿಗೆ ಕ್ರಯ ರೂ 13—8—0.

R. D. KATELY & Co.
319 Frere Road,
Opposite Fort Market, near Fountain,
BOMBAY.
ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

FOR YOUR DIAMONDS
ENQUIRE AT
SOWCAR
SRINIVAS RANGA PAI
SOWCAR MAHAL,
Car Street,
MANGALORE.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಸ್ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:—**ಆಯುರ್ವೇದಾಶ್ರಮ, ಹೋ. ಬೋಕ್ಸ್ 287, ಮದರಾಸು.**
ಸ್ಟೋಕಿಸ್ಟರು:— **ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.**

ಮುದ್ದಾದ ಈ ಮಗು ಇದ್ದುದು ಹೀಗೆ!

ನರಳುತ್ತಿದ್ದ ಮಗುವನ್ನು ಅಕಸ್ಮಾತ್ತಾಗಿ ಸುಂದರವಾಗಿ ಮಾರ್ಪಡಿಸಿದೆ.

ಈ ಸಾಬೂನು ವಿಷಹರವಾಗಿದೆ: ಚರ್ಮದಲ್ಲಿ ಕ್ರಿಮಿದೋಷ ಕಟ್ಟಿದ ಗುಳ್ಳೆ ಇದು ನಿರ್ಮೂಲಗೊಳಿಸುತ್ತದೆ. ತುರಿಕಜ್ಜಿಗಳನ್ನು, ವಿಷೂಪದ ಕಟ್ಟು ಮೊಡವೆಗಳನ್ನು, ಚರ್ಮದ ಇತರ ಪೀಡೆಗಳನ್ನೂ ಪರಿಹರಿಸುತ್ತದೆ.

ಚಾಲ್‌ಮುಗ್ರಾ ಎಣ್ಣೆಯಿಂದ ಕೂಡಿದೆ. ಅತಿ ಮೃದುವಾದ ಚರ್ಮದ ಮೇಲಾದರೂ ಇದನ್ನು ಉಪಯೋಗಿಸಬಹುದು.

ಚೀಫ್ ರಿಪ್ರೆಸೆಂಟೇಟಿವ್:—
ಆರ್. ಸಿ. ದಲಾಲ್,
ಕಲ್ಲಿಕೋಟೆ.

ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—**ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.**

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.
'ರಿಜಿಸ್ಟ್ರಾರ್ ಆಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.
ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—ಕೆ. ಶಂಕರನಾರಾಯಣ ಕಿಣಿ, ಡಿಸ್ಟ್ರಿಕ್ಟ್ ಆರ್ಗನೈಜರ್, ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶುರೆನ್ಸ್ ಸೊಸೈಟಿ, ಲಿಮಿಟೆಡ್, ಮಾರುತಿ ವೀಥಿಕಾ, ಉಡುಪಿ, (ದ. ಕ).

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್ ಬೋರ್ಡು ಆಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಸಿ/ಓ ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಆಫ್ ಮೈಸೂರು ಸಿಟಿ, ಮೈಸೂರು.

ಭಾರತೀಯ ಚಾ

ಉತ್ಪನ್ನ ಮತ್ತು ವ್ಯಾಪಾರ.

ಚಾದಲ್ಲಿ ಎರಡು ತರಗತಿಗಳಿವೆ. (೧) ಕರಿ ಚಾ ಮತ್ತು (೨) ಹಸುರು ಚಾ. ಉತ್ಪನ್ನದ ವಿಧಾನದಲ್ಲಿನ ವ್ಯತ್ಯಾಸವೇ ಚಾವಿನ ವರ್ಣ ಮತ್ತು ಗುಣವನ್ನು ನಿಶ್ಚಿಸುತ್ತದೆ. ಸಾಮಾನ್ಯವಾಗಿ ಹೇಳುವದಾದರೆ ಹಳಸಿದ ಚಾವೇ **ಕರಿ ಚಾ** ಮತ್ತು ಹಳಸದ ಚಾವೇ ಹಸುರು ಚಾ. ಚಾವನ್ನು ಬಹಳ ಜಾಗರೂಕತೆಯಿಂದ ಬೆಳೆಸಬೇಕು. ಅದನ್ನು ವ್ಯಾಪಾರಕ್ಕಾಗಿ ಯಶಸ್ವಿಯಾಗಿ ಉತ್ಪನ್ನ ಮಾಡಬೇಕಾದರೆ ಚತುರತೆಯಿಂದೊಡಗೂಡಿದ ತೋಟಗಾರಿಕೆ ಮತ್ತು ಕಾರ್ಖಾನೆಯ ಕೆಲಸ ಇವುಗಳನ್ನೊಳಗೊಂಡ ವಿಧಾನವು ಬೇಕಾಗಿರುತ್ತದೆ. ಚಾ ಪೊದೆಯು ಫಸಲು ಬಿಡುವ ತನಕ ತೋಟಗಾರನು ನಿಧಾನವಾಗಿ ಕಾಯಬೇಕಾಗಿರುತ್ತದೆ. ಗಿಡವು ಕೆಂಪಾದೊಡನೆ, ಅಂದರೆ ಚಿಗುರುಗಳನ್ನು ಬಿಟ್ಟೊಡನೆ ಕೊಯ್ಯುವ ಕಾರಂಭವಾಗುವುದು. ವ್ಯಾಪಾರಕ್ಕೆ ಬೇಕಾದ ಚಾವನ್ನು ಅತ್ಯಂತ ಮೃದುವಾದ ಮತ್ತು ಎಳೆ ಎಲೆಗಳಿಂದಲೇ ಪಡೆಯಬಹುದು. ಕೊಯ್ಯುವಿಕೆಯು ಸಾಮಾನ್ಯವಾಗಿ ಸೂಕ್ಷ್ಮದೃಷ್ಟಿಯುಳ್ಳ ಮತ್ತು ಚುರುಕಾದ ಬೆರಳುಗಳುಳ್ಳ ಹೆಂಗಸರಿಂದಲೇ ಆಗುವುದು. ಕೊಯ್ಯುವಿಕೆಗೆ ಸರಿಯಾದ ಎತ್ತರದಲ್ಲಿರುವಂತೆಯೂ ಮತ್ತು ಎಳೆ ಚಿಗುರುಗಳ ಸಮನಾದ ಬೆಳೆಯಾಗುವಂತೆಯೂ ಪೊದೆಯನ್ನು ಕುಡಿ ಕತ್ತರಿಸಬೇಕಾಗಿರುತ್ತದೆ. ಬೆಳೆಯ ತರಗತಿಯ ಪರಿಮಿತಿಯೂ ಬಹಳಮಾಡಿ ಕೊಯ್ಯುವಿಕೆಯ ವಿಧಾನದ ಮೇಲೆ ಹೊಂದಿಕೊಂಡಿರುತ್ತದೆ.

ಕೊಯ್ಯಲ್ಪಟ್ಟು, ಸಂಗ್ರಹಮಾಡಲ್ಪಟ್ಟ ಎಲೆಗಳು ಕಾರ್ಖಾನೆಗೆ ಒಯ್ಯಲ್ಪಡುತ್ತವೆ. ಅವು ಅಲ್ಲಿ ಮಾರ್ಕೆಟಿಗೆ ಕಳುಹಲು ಸಿದ್ಧವಾಗುವ ವೊದಲು ಒಣಗಿಸುವಿಕೆ, ಸುರುಳಿ ಮಾಡುವಿಕೆ, ಹಳಿಸುವಿಕೆ, ಹಾರಿಸುವಿಕೆ ಮತ್ತು ವಿಂಗಡಿಸುವಿಕೆ ಇತ್ಯಾದಿ ವಿವಿಧ ವಿಧಾನಗಳಿಗಾಗಬೇಕಾಗಿವೆ. ಈ ಪ್ರತಿಯೊಂದಕ್ಕೂ ಸಮಯವು ಬೇಕಾಗಿದ್ದು ಅದು ಹವಾಮಾನದ ವಿದ್ಯಮಾನಗಳಿಗನುಸಾರವಾಗಿ ಹೊಂದಿಕೊಂಡಿರುತ್ತದೆ. ಉದಾಹರಣೆಗಾಗಿ ಒಣಗಿಸಲು ೧೦ರಿಂದ ೪೦ ಘಂಟೆಗಳ ಕಾಲ ಬೇಕಾಗಬಹುದು.

ಪ್ರತಿಯೊಂದು ವಿಧಾನದಲ್ಲಿಯೂ ತಕ್ಕ ಸಮಯದೊಳಗಾಗಿ ಮಾಡಲ್ಪಟ್ಟ ಯೋಗ್ಯ ಉಪಚಾರಕ್ರಮವು, ತಯಾರಿಸಲ್ಪಟ್ಟ ಚಾವಿನ ತರಗತಿಯನ್ನು ನಿರ್ಣೈಸುತ್ತದೆ. ವಿಧಾನದ ಪ್ರತಿಯೊಂದು ಕ್ರಮವೂ ಚಾಕ್ಕೆ ಬಲವನ್ನೂ ಪುಷ್ಟಿಯನ್ನೂ ಮತ್ತು ವರ್ಣವನ್ನೂ ರುಚಿಯನ್ನೂ ಕೊಡುವುದರಲ್ಲಿ ಪ್ರಯೋಜನಕಾರಿಯಾಗುತ್ತದೆ. ಎಲೆಯು ಸುರುಳಿ ಮಾಡಲ್ಪಟ್ಟೊಡನೆ, ಚಾವಿನ ಉತ್ತೇಜಕ ಸತ್ವವನ್ನುಳ್ಳ ರಂಧ್ರಗಳು ಒಡೆಯುತ್ತವೆ, ಮತ್ತು ಹೀಗೆ ಸುರುಳಿ ಮಾಡುವದರಿಂದಾಗಿ ಬರುವ ರಸವು, ಹಾರಿಸುವಿಕೆಯ ವಿಧಾನದಲ್ಲಿ ಪುನಃ ಎಲೆಯ ಮೇಲೆ ಒಣಗಿಸಲ್ಪಟ್ಟಿದ್ದು, ಚಾವನ್ನು ಕಾಸುವ ಸಮಯದಲ್ಲಿ ಸುಲಭವಾಗಿ ಕರಗುತ್ತದೆ. ಉಕ್ಕುವಿಕೆಯ ವಿಧಾನವು ಬರೇ ಭಸ್ಮೀಕರಣವು ಮಾತ್ರವಾಗಿದ್ದು ಎಲೆಯು ಒಗರನ್ನು ಕಡಿವೆ ಮಾಡುತ್ತದೆ. ಅದನ್ನು ಮಿತವಾದ ಸಮಯದ ವರೆಗೆ ಮಾಡಬೇಕು, ಇಲ್ಲವಾದಲ್ಲಿ ಹೆಚ್ಚಿನ ಉಕ್ಕುವಿಕೆಯಿಂದ ಅದರ ರುಚಿಯು ಕೆಡುವುದು.

ಹಸುರು ಚಾವನ್ನು ಪಡೆಯಲು, ಎಲೆಯು ಹಸುರಾಗಿರುವಾಗಲೇ ಅವಿಗೆ ಹಾಕಲ್ಪಟ್ಟು ಒಣಗಿಸಲ್ಪಡುವ ವೊದಲು ನಿಧಾನವಾಗಿ ಸುರುಳಿ ಮಾಡಲ್ಪಡುತ್ತದೆ. ಭಾರತವು ಬಹಳ ಸ್ವಲ್ಪ ಹಸುರು ಚಾವನ್ನು ತಯಾರುಗೊಳಿಸುತ್ತದೆ. ಚೀನಾ ಮತ್ತು ಜಪಾನು ಪ್ರಪಂಚಕ್ಕೆ ಬೇಕಾಗಿರುವ ಹಸುರು ಚಾವಿನ ಬಹುಭಾಗವನ್ನು ಒದಗಿಸುತ್ತಿದ್ದು, ಇದೀಗ ಕ್ರಮೇಣ ಕಡಿವೆಯಾಗುತ್ತ ಬರುತ್ತಿದೆ. ಹಸುರು ಚಾವು ಕರಿ ಚಾಕ್ಕಿಂತಲೂ ಬಹಳ ಕಟುವಾಗಿಯೂ ಪ್ರಮಾಣದಲ್ಲಿಯೂ ಕಡಿವೆಯಾಗಿಯೂ ಇರುತ್ತದೆ. ಸಂಗ್ರಹಿಸಲ್ಪಟ್ಟ ಎಲೆಯು, ತಯಾರಿಯ ಎಲ್ಲಾ ವಿಧಾನಗಳನ್ನು ಅನುಭವಿಸುವದರೊಳಗಾಗಿ ಅದರ ಮೊದಲಿನ ತೂಕದ ಎರಡು-ಮೂರನೆ ಅಂಶದಿಂದ ಮುಕ್ಕಾಲು ಪಾಲಿನ ವರೆಗೆ ಕಳಕೊಳ್ಳುತ್ತದೆ.

ತರತರವಾಗಿ ವಿಂಗಡಿಸುವದೇ ಮುಂದಿನ ವಿಧಾನವಾಗಿದ್ದು, ಸುರುಳಿಮಾಡಲ್ಪಟ್ಟ ಮತ್ತು ಒಣಗಿಸಲ್ಪಟ್ಟ ಎಲೆಗಳು ಅವುಗಳ ಮಾದರಿ ಮತ್ತು ಆಕಾರಕ್ಕೆ ಸರಿಯಾಗಿ ವಿಂಗಡಿಸಲ್ಪಡುತ್ತವೆ. ಹೀಗೆ ವಿಂಗಡಿಸಲ್ಪಟ್ಟ ಚಾವು ಗಾಳಿ ತಾಗಿದರೆ ಕೆಡುವ ಕಾರಣ ಅದರಿಂದ ಕಾಪಾಡಲೋಸುಗ ಸೀಸ ಯಾ ಅಲ್ಯೂಮಿನಿಯಮಿನ ಒಳಭಾಗವುಳ್ಳ ಕಾಗದದಿಂದ ಕೂಡಿದ ಪೆಟ್ಟಿಗೆಗಳಲ್ಲಿ ಸಂಗ್ರಹೀತವಾಗುತ್ತದೆ.

ಆಧುನಿಕಯುಗದ ವಿಜ್ಞಾನಶೋಧೆಗಳ ಸದುಪಯೋಗವು ಮಾಡಲ್ಪಟ್ಟಿದ್ದು, ಅತ್ಯಂತ ಆಧುನಿಕವಾದ ಯಂತ್ರಗಳು ವ್ಯಾಪಾರಿ ಪ್ರಮಾಣದಲ್ಲಿ ಚಾವನ್ನು ತಯಾರಿಸಲು ಬೇಕಾಗುವ ವಿಧಾನಗಳಲ್ಲೆಲ್ಲಾ ಈಗ ಉಪಯೋಗಿಸಲ್ಪಡುತ್ತವೆ.

ಭಾರತದಲ್ಲಿನ ಬೆಳೆಯ ಬಹುಭಾಗವು ಕಲ್ಕತ್ತಾಕ್ಕೆ ಒಳದೇಶದ ವ್ಯಾಪಾರಕ್ಕಾಗಿ ಏಲಂ ಹಾಕಲೂ ವಿದೇಶದ ನಾನಾ ಭಾಗಗಳಿಗೂ ಮುಖ್ಯವಾಗಿ ಕೆನಾಡಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್, ಅಮೇರಿಕಾ, ಪರ್ಶಿಯಾ ಮತ್ತು ಲೇವಾಂಟಿನ್ ಬಂದರುಗಳಿಗೆ ಸಾಗಿಸಲ್ಪಡಲೂ ಬರುತ್ತದೆ.

ಭಾರತದ ಚಾ ವ್ಯಾಪಾರದ ಕೇಂದ್ರವಂತೂ ಲಂಡನಿನಲ್ಲಿದೆ ಹಾಗೂ ಅದು ಅಲ್ಲಿಯೇ ಉಳಿಯುವ ಹಾಗಿದೆ. ಅದು ಪ್ರಪಂಚದ ಚಾ ವ್ಯಾಪಾರದ ಕೇಂದ್ರವೂ ಆಗಿರುತ್ತದೆ. ಚಾ ತೋಟಗಳ ಮ್ಯಾನೇಜರುಗಳು ಚಾವನ್ನು ಭಾರತದ ಬಂದರುಗಳಿಗೆ ಕಳುಹಿಸುತ್ತಾರೆ; ಏಜೆಂಟರುಗಳು ಅಲ್ಲಿಂದ ಅದನ್ನು ಅನರ ಲಂಡನ್ ವ್ಯಾಪಾರಿ ಸಂಸ್ಥೆಗಳಿಗೆ ರವಾನಿಸುತ್ತಿದ್ದು, ಇಲ್ಲಿಂದ ಅದರ ವ್ಯಾಪಾರೀ ಕಾರ್ಯವು ನಡೆಯುತ್ತದೆ. ಚಾ, ಮುಖ್ಯವಾಗಿ, ಪ್ರತಿಷ್ಠಿತ ದಲ್ಲಾಳಿಗಳಿಂದ ಬಹಿರಂಗವಾದ ಏಲಮಿನಲ್ಲಿ ವಿಕ್ರಯಿಸಲ್ಪಡುತ್ತದೆ.

ಕುಡಿಯುವವರಿಗೆ ವಿಶ್ರವಿಲ್ಲದ ಚಾ ಈಗ ಸಿಗುವದು ಬರೇ ಸ್ವಲ್ಪ. ಆದುದರಿಂದ ಚಾ ವಿಕ್ರಯವು ರುಚಿ ಮತ್ತು ವಿಶ್ರಣ ಇವುಗಳಿಂದ ಬೇರೆಯಾಗಿರಲು ಸಾಧ್ಯವಿಲ್ಲದೆ, ಇವು ಒಂದೇ ತರಗತಿಯ ಚಾವನ್ನು ಬಹಳಮಾಡಿ ನಿಶ್ಚಿತ ಬೆಲೆಯಲ್ಲಿಯೇ ಒದಗಿಸಲು ಭರವಸವನ್ನೀಯುವಂಥವಾಗಿವೆ. ಚಾವಿನ ಮೌಲ್ಯವು ಬಹಳವಾಗಿ ಅದರ ರುಚಿಯ ಮೇಲೆ ಹೊಂದಿಕೊಂಡಿರುವದರಿಂದ, ಚಾ ವ್ಯಾಪಾರಿಯೂ, ಪ್ಲಾಂಟರನೂ ಈ ಇಬ್ಬರೂ, ಮಹಾಜನಗಳ ರುಚಿಯ ಭಾವವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಚಾ ಬೆಳೆಸುವವನಿಂದ ಅವನ್ನು ಉಪಯೋಗಿಸುವವನನ್ನು ಮುಟ್ಟುವ ತನಕ ಅದೊಂದು ದೀರ್ಘವಾದ ರೀತಿಯೇ ಸರಿ, ಆದರೆ ವ್ಯಾಪಾರದೊಳಗಣ ಈ ಸಂಕಲೆಯ ಎಲ್ಲಾ ಗೊಣಸುಗಳು, ಮಹಾಜನಗಳಿಗೆ ಅತ್ಯಲ್ಪ ಬೆಲೆಯಲ್ಲಿ ಉತ್ತಮ ತರಗತಿಯ ಚಾವನ್ನು ಒದಗಿಸಬೇಕೆಂಬ ಅದೊಂದೇ ಸಮಾನ ಧ್ಯೇಯದಿಂದಲೇ ಒಂದಾಗಿವೆ.

ಭಾರತೀಯ ಚಾವನ್ನು ಸೇವಿಸಿರಿ ಮತ್ತು ದೀರ್ಘಕಾಲ ಬಾಳಿರಿ


ಯೊನಿ ಶಕ್ತಿ ಅದೇ ನನ್ನ ಉನ್ನತಿಯ ಮೂಲಕಾರಣ
ಈ ಕಾಗದದಲ್ಲಿ ತುಂಬಾ ತಪ್ಪುಗಳಿವೆ. ಬೇಗನೇ ಇನ್ನೊಮ್ಮೆ ಟ್ರೈಮಿಮಾಡಿ.
ಅದನ್ನು ನಾನೆಂದಿಗೂ ಸರಿಪಡಿಸಲಾರೆ. ಯಾವಾಗಲೂ ನನಗೆ ವಿಪರೀತ ಆಯಾಸ.
ಹೋಗಿ ವೈದ್ಯರನ್ನೇಕೆ ನೋಡಬಾರದು?
ನರಗಳ ಅಬಲತೆಯು ನಿಮ್ಮನ್ನು ಬಾಧಿಸುವುದು ಅಂದರೆ ವೆಚ್ಚವಾದ ಶಕ್ತಿಯನ್ನು ನೀವು ಬೇಗನೇ ಪಡಿಯುವುದಿಲ್ಲ. ಹೊಲಿಕ್ಸ್ ಮಲಗುವಾಗ ಸೇವಿಸಿರಿ.
ಆರು ವಾರಗಳ ನಂತರ
ಶುಭವಾರ್ತೆ-ವ್ಯವಸ್ಥಾಪಕರು ನೀವು ಆವರ ಕಾರ್ಯದರ್ಶಿಗಳಾಗ ಬೇಕೆಂದು ಅವೇಕ್ಷಿಸುತ್ತಾರೆ.
CA XXX

ನಿಮಗೆ ಯಾವಾಗಲೂ ಆಯಾಸವೇ ಆಗಿದ್ದರೆ, ನೀವು ತಲೆಯೆತ್ತುವಂತಿಲ್ಲ

ನಿಮ್ಮ ಕೆಲಸವು ನಿಮಗೆ ಸಾಕಾಗಿ ನಿಮ್ಮ ಜೀವನವೇ ಭಾರವಾಗಿದ್ದರೆ, ಬೆಳಿಗ್ಗೆ ಏಳುತ್ತಲೆ ಆಯಾಸ, ದಿನವೆಲ್ಲ ನಿಶ್ಶಕ್ತಿ ಆಗಿದ್ದರೆ-ಬಹುಶಃ ನೀವು ಬಲಹೀನತೆಯಿಂದ ನರಳುತ್ತಿದ್ದೀರಿ; ಗಳಿಸುವುದಕ್ಕಿಂತ ಹೆಚ್ಚಾಗಿ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ.

ಮಲಗುವಾಗ ಒಂದು ಕಪ್ ಪೂರ್ತಿ ಹಾರ್ಲಿಕ್ಸ್‌ನ್ನು ಸೇವಿಸಿ. ಬಲಹೀನತೆಯನ್ನು ತಡೆಗಟ್ಟಿ—ಅದು ನಿಮಗೆ ಸುಖನಿದ್ದೆಯನ್ನು ಮಾತ್ರ ಕೊಡುವುದಲ್ಲದೆ, ನಿದ್ರಾಕಾಲದಲ್ಲಿ ಶಕ್ತಿಯನ್ನು ವೃದ್ಧಿಸುತ್ತದೆ. ಬೆಳಿಗ್ಗೆ ಎದ್ದೊಡನೆಯೆ, ಹರ್ಷ ಚೈತನ್ಯಗಳಿಂದ ಕೂಡಿ ಕೆಲಸಕ್ಕೋ—ಆಟಕ್ಕೋ ನೀವು ತಯಾರಿರುತ್ತೀರಿ.

ಹಸುವಿನ ರಸವತ್ತಾದ ಕೆನೆ, ಹಾಲಿನ ಒಳ್ಳೆಯ ಅಂಶ, ಗೋಧಿ, ಜವೇ ಗೋಧಿಗಳ ಪುಷ್ಟಿದಾಯಕವಾದ ಸತ್ವ ಸಾರ-ಇವುಗಳು ಹೊರ್ಲಿಕ್ಸ್‌ನಲ್ಲಿವೆ.
ಇದರಲ್ಲಿ ಪಿಪ್ಪಾಂಶವಿಲ್ಲ.

ಹೊರ್ಲಿಕ್ಸ್ ನರಗಳ ಅಬಲತೆಯನ್ನು ಹೋಗಲಾಡಿಸುವುದು.

STAMPS!!!

Rev. Father J. ROMANI, S. J. will send stamps for approval to Bona Fide collectors or stamps under reference. Apply to R. C. Chaplain Ahmedabad, Camp

8, 18—12

ವಿದೇಶ

ಬ್ರಿಟನಿನಿಂದ ವಿಮಾನಗಳನ್ನೂ, ಯುದ್ಧಸಾಮಗ್ರಿಗಳನ್ನೂ ಕೊಳ್ಳಲು ಉದ್ದೇಶಿಸಿರುವ ಈಜಿಪ್ಷಿನ ಆ ಜನರಕ್ಷಣೆಯ ನಿಧಿಗೆ, ಪಂತಿಗೆಯು ಈಗಾಗಲೇ ಸುಮಾರು ಹತ್ತು ಲಕ್ಷ ಪೌಂಡಿಗೂ ಹೆಚ್ಚಾಗಿ ವಸೂಲಾಗಿದ್ದು ಇನ್ನೂ ದುಡ್ಡು ಬಂದು ಬೀಳುತ್ತಲೇ ಇದೆ. ಯಾವತ್ತು ಅಧಿಕಾರಿಗಳೂ ಇದಕ್ಕೆ ತಮ್ಮ ಒಂದು ತಿಂಗಳ ಸಂಬಳವನ್ನು ಕೊಟ್ಟಿರುತ್ತಾರೆ. ಇದಕ್ಕೆ ವಂತಿಗೆ ಹಾಕದ ಆಲ್ಲಿನ ಪ್ರಜೆಯೊಬ್ಬನೂ ಇಲ್ಲ!

'ನಾವು ಜರ್ಮನಿಯ ಸಾಂಪತ್ತಿಕ ಪರಿಸ್ಥಿತಿಯನ್ನು ವೃದ್ಧಿಗೊಳಿಸುತ್ತಿದ್ದೇವೆ. ನಾವು ಜಗತ್ತನ್ನು, ಆ ಮೂಲಕ, ಸೇವಿಸುತ್ತಿದ್ದೇವೆ' ಹೀಗೆಂದು ಜರ್ಮನಿಯ ಹರ್ ಹಿಟ್ಲರರು ಹೊಸ ವರ್ಷದ ಶ್ರೇಯಸ್ಸನ್ನು ಕೋರಿದರು.

ಸ್ಪೈನಿನ ದಂಗೆಗಾರರು, ಆಯುಧಗಳಿಗಾಗಿ ಸ್ಪೈನಿನ ಬಳಿಯ ಸಮುದ್ರಗಳಲ್ಲಿ ಇತರ ರಾಷ್ಟ್ರಗಳ ಸ್ಟೀಮರುಗಳನ್ನು ಪರಿಶೋಧಿಸುವ ಈ ಶಾಸನವಿರುದ್ಧ ಕಾರ್ಯದ ಕುರಿತು ರಷ್ಯಾದ ಪತ್ರಿಕೆಗಳು ಪ್ರಬಲವಾಗಿ ಆಕ್ಷೇಪಿಸುತ್ತಿವೆ.

ಜರ್ಮನಿಯು ಇಪ್ಪರಲ್ಲಿಯೇ ಆಧುನಿಕ ಯುದ್ಧೋಪಕರಣಗಳಿಂದ ಕೂಡಿದ ೧೬ 'ಡಿಸ್ಟ್ರಾಯರು' ಗಳನ್ನು ತನ್ನ ಸಮುದ್ರದಲ್ಲಿ ತೇಲಬಿಟ್ಟಿದೆ.

ಬ್ರಿಟನಿನ ವರ್ತಕರ ಹಡಗುಗಳ ಮತ್ತೂ ವಿಮಾನು ಹಿಡಿಯುವ ನೌಕೆಗಳ 'ಮಾಸ್ಟರ್' ಎಂಬ ಬಿರುದನ್ನು ತಾವು ಧರಿಸುವ ಇಚ್ಛೆಯುಳ್ಳವರೆಂದು ನಮ್ಮ ಚಕ್ರವರ್ತಿಗಳು ಪ್ರಕಟಪಡಿಸಿರುವರು.

೧೯೩೭-ನೇ ಇಸ್ವಿಯಲ್ಲಿ ಅಮೆರಿಕದ ಸಾರ್ವಜನಿಕ ಆದಾಯವು ಬಹಳ ಮಟ್ಟಿಗೆ ಹೆಚ್ಚಬಹುದೆಂದು ಅಂದಾಜಾಗಿದೆ. ಅದು ಸುಮಾರು ೬,೦೦೦,೦೦೦,೦೦೦ ಡಾಲರುಗಳಷ್ಟಾಗಬಹುದಂತೆ. ಇಷ್ಟೊಂದು ಆದಾಯವು ೧೯೩೬ನೇ ಇಸ್ವಿಯ ಬಳಿಕ ಅಮೆರಿಕಕ್ಕೆ ದೊರಕಿದುದಿಲ್ಲ.

ಬ್ರಿಟಿಶ್ ಕೈಗಾರಿಕೆಗಳದೊಂದು ಸಂತೆ, ಲಂಡನಿನಲ್ಲಿಯೂ, ಬರ್ಮಿಂಗ್‌ಹ್ಯಾಂನಲ್ಲಿಯೂ ಇದೇ ತಾ. ೧೫ರಿಂದ ೨೬ರ ವರೆಗೆ ನಡೆಯಲಿದೆ. ಇಷ್ಟರ ತನಕ ಅಲ್ಲಿ ಇಷ್ಟು ವಿಶಾಲಪ್ರಮಾಣದ ಸಂತೆಯು ನಡೆದಿಲ್ಲ.

ಇದೇ ಬರುವ ಎಪ್ರಿಲಿನಲ್ಲಿ ಹಾರ್ಟ್‌ಫೋರ್ಡ್‌ಷೈರ್ ಪ್ರಾಂತದಲ್ಲಿ ಒಂದು ಈಸ್ಟರ್ ಶಾಲೆಯು ಆರಂಭವಾಗುವುದು. ಇಲ್ಲಿ ಇಂಡಿಯದ ನೂತನ ಪರಿಸ್ಥಿತಿಯನ್ನು ಬ್ರಿಟನಿನ ಯುವಕರಿಗೆ ತಿಳಿಸುವಂತೆ, ಲಾರ್ಡ್ ವಿಲ್ಲಿಂಗ್‌ಡನ್, ಸರ್ ಫಿರೋಜ್ ಖಾನ್ ನೂನ್ ಮೊದಲಾದವರು ಭಾಷಣ ಕೊಡಲಿರುವರು.

ಬ್ರಿಟನಿನಲ್ಲಿ ವ್ಯಾಪಿಸಿರುವ ಇನ್‌ಫ್ಲುಯೆಂಜಾ ಜ್ವರದಲ್ಲಿ ಆಫೀಸಿನ ಉದ್ಯೋಗಿಗಳೇ ಹೆಚ್ಚಾಗಿ ಆ ಜ್ವರಕ್ಕೆ ಬಲಿಬಿದ್ದವರೆಂದು ತಿಳಿದುಬರುತ್ತಿದೆ. ಸುಮಾರು ೭೬೮ ಮಂದಿ ಒಂದೇ ವಾರದಲ್ಲಿ ಸತ್ತರು.

ಬ್ರಿಟನಿನಲ್ಲಿ ವಿಷವಾಯುವಿನ ಮೊಖವಾಡಗಳು ಪುರವಾಸಿಗಳಿಗಾಗಿ ತೀವ್ರಗತಿಯಿಂದ ಸಿದ್ಧವಾಗುತ್ತಿವೆ;—ವಾರಕ್ಕೆ ೫ ಲಕ್ಷದಂತೆ. ಆಗತ್ಯವಿರುವಾಗ ಈ ಮೊಖವಾಡಗಳನ್ನು ನಾಗರಿಕರಿಗೆ ಸರಕಾರವು ಉಚಿತವಾಗಿ ಒದಗಿಸುವುದು.

೧೯೩೦ನೇ ಇಸ್ವಿಯಲ್ಲಿ ಪ್ರಕಟವಾಗಲಿರುವ ಒಂದು ಗ್ರಂಥದ ವಿಮರ್ಶೆಯು ಆಗಲೇ ಅಮೆರಿಕದ ಒಂದು ಪ್ರಮುಖ ಸಾಪ್ತಾಹಿಕ ಸಾಹಿತ್ಯಪತ್ರಿಕೆಯಲ್ಲಿ ಪ್ರಚುರಗೊಳಿಸಲ್ಪಟ್ಟಿದೆ.

ಅನ್ನಾ ಸ್ವಾಯೆಪ್ಫೊಲ್ ಎಂಬಾಕೆ ದಕ್ಷಿಣ ಆಫ್ರಿಕದ ಒಬ್ಬ ನಿಗ್ರೋ ಹೆಂಗಸು. ಈಕೆ ೨೬ ವರ್ಷಗಳ ಹಿಂದೆ ಪ್ರಜ್ಞೆ ತಪ್ಪಿ ಮಲಗಿದ್ದವಳೀಗ ಎಚ್ಚರಗೊಂಡಿದ್ದಾಳೆ. ಈಕೆ ೧೯ ವರ್ಷದವಳಾಗಿದ್ದಾಗ ಒಬ್ಬ ಯುವಕನನ್ನು ಮೋಹಿಸಿದ್ದಳೆಂದೂ, ಆಕೆಯ ಹೆತ್ತವರು ಆತನಿಗೆ ಈಕೆಯನ್ನು ಕೊಡಲೊಪ್ಪದುದರಿಂದ ಆತನು ಪ್ರಾಣಹತ್ಯೆ ಮಾಡಿಕೊಂಡನೆಂದೂ, ಈ ಶೋಕದಿಂದ ಸಂತಪ್ತಳಾದ ಆ ಯುವತಿ ಮೂರ್ಛೆಹೊಂದಿ ಇದುವರೆಗೆ ನಿದ್ರಿಸುತ್ತಿದ್ದಳೆಂದೂ ತಿಳಿದುಬರುತ್ತಿದೆ.

ಮಹಾರಾಣಿ ಮೇರಿಯವರು ಕಳೆದ ವರ್ಷದಲ್ಲಿ ಮಿಸೆಸ್ ಮೇರಿ ಸಿಂಪ್ಸನರನ್ನು ಕಂಡುದಾಗಲೀ, ಮಾತಾಡಿದುದಾಗಲೀ ಇಲ್ಲ. ಈ ಕುರಿತು ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾದುದು ಸುಳ್ಳು ಎಂದು ಆಫಿಶಿಯಲ್ ವರದಿಯೊಂದು ಹೊರಟಿದೆ.

ಡ್ಯೂಕ್ ಆಫ್ ವಿಂಡ್ಸರ್‌ರವರು ಅಮೆರಿಕದ ಪತ್ರಿಕೆಗಳಿಗೆ ಜಗತ್ತಿನ ವಿದ್ಯಮಾನಗಳ ವಿಚಾರದಲ್ಲಿ ಲೇಖನಗಳನ್ನು ಬರೆದು ಕಳುಹಿದರೆ, ಲೇಖವೊಂದಕ್ಕೆ ೨೫೦೦ ಪೌಂಡುಗಳಂತೆ ದೊರಕಬಹುದೆಂದು ತಿಳಿದು ಬರುತ್ತಿದೆ.

ಡಿ ವೇಲರಾರವರು ಲಂಡನಿನಲ್ಲಿ ಡೊಮಿನಿಯನ್ ಸೆಕ್ರಟರಿಗಳೊಡನೆ ಅಂಗ್ಲೋ-ಐರಿಷ್‌ರ ಪರಸ್ಪರ ವಿಚಾರದ ಕುರಿತು ಮಾತುಕತೆ ನಡೆಸಿದರು.

ನಮ್ಮ ಚಕ್ರವರ್ತಿಗಳು ಹೊಸ ನಾಣ್ಯಗಳ ಮಾದರಿಯನ್ನು ಒಪ್ಪಿಕೊಂಡಿರುವರು. ಈ ನಾಣ್ಯಗಳು ಕೊರನೇಶನ್ ಸಮಯದಲ್ಲಿ ಹೊರಬೀಳುವುವೆ.

ಸ್ಪೈನಿನಲ್ಲಿ ಯುದ್ಧವು ತೀವ್ರಗತಿಯಿಂದ ನಡೆಯುತ್ತಿದೆ. ದಂಗೆಗಾರರು ಎಸ್ಟೆಫೋನಜನನ್ನು ಕೈವಶ ಮಾಡಿಕೊಂಡಿರುವರಂತೆ.

ಆಸ್ಟ್ರಿಯದಲ್ಲಿ ಕಮ್ಯುನಿಸ್ಟರ ಚಳವಳಿವು ವಿಪರೀತವಾಗಿದ್ದು ಅವರಲ್ಲಿ ೨೬ ಮಂದಿ ಮುಖಂಡರ ಕೈದಾಗಿದೆ. ಇನ್ನೂ ಕೆಲವರ ಪತ್ತೆಗಿರಿಯಾಗಲಿದೆ.

ರೋಮಿನಲ್ಲಿ ಇನ್‌ಫ್ಲುಯೆಂಜಾ ಜ್ವರದಿಂದ ಅನೇಕ ಮಂದಿ ಮೃತರಾದರು.

ಪೋಪ್ ಸಾಹೇಬರಿಗೀಗ ಕಾಹಿಲೆ ಗುಣವಾಗುತ್ತಿದ್ದು, ಕೆಲವರೊಡನೆ ಸಂಭಾಷಣೆ ಬೆಳೆಸಿದ್ದಾರೆ.

ಮಲಗಾದಲ್ಲಿ ದಂಗೆಗಾರರು ಬಾಂಬಿನ ಮಳೆ ಸುರಿಸಿ ೩೦೦ ಮಂದಿ ಸತ್ತರು; ಗಾಯಗೊಂಡರು. ಹಲವು ಕಟ್ಟಡಗಳೂ, ಆಸ್ಪತ್ರೆಗಳೂ ನೆಲಸಮವಾದುವು.

ಅಮೆರಿಕದ ಮಿಚಿಗನ್ ನಗರದಲ್ಲಿ ಪೋಲೀಸರಿಗೂ ಮೋಟರಿನ ಮುಷ್ಕರಗಾರರಿಗೂ ಕೈಕೈಹತ್ತಿ ಹಲವರಿಗೆ ಗಾಯಗಳಾಗಿವೆ. ಈಗ ಆ ಮೋಟರ್ ಕಾರ್ಖಾನೆಗಳ ೧೭೦,೦೦೦ ಮಂದಿ ಕೆಲಸಗಾರರಿಗೆ ಕೆಲಸವಿಲ್ಲವಾಗಿದೆ.

ನೋಟೀಸು

ಮಂಗಳೂರು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

ಸ್ಮಾಲ್ ನಂಬ್ರ 810/1936.

ಬಾಬು ಪೂಜಾರಿ ..... ವಾದಿ.

ಮತ್ತು

ಅಬ್ದುಲ್ ಖಾದರ್ ಭಾನಿ, ಅಸದುಲ್ಲ ಸಾಹೇಬರ ಮಗ, ಮಂಗಳೂರು ಶಹರ ಕೊಡಿಯಾಲಬೈಲಿನಲ್ಲಿರುವವ } ಪ್ರತಿವಾದಿ.

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ:—

ಮೇಲ್ಕಂಡ ವಾದಿಯು ಪ್ರತಿವಾದಿಯಿಂದ ಬರತಕ್ಕ ಬಾಡಿಗೆ ರೂಪ್ಯಾ 91—10—9ನ್ನು ವಸೂಲು ಮಾಡುವರೆ ದಾಕಲು ಮಾಡಿದ ಮೇಲಿನ ನಂಬ್ರವು ತಾ. 21-1-1937ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಕೋರ್ಟು ಮುಂದೆ ಹಾಜರಾಗುವರೆ ಸದ್ರಿ ಪ್ರತಿವಾದಿಯು ತಪ್ಪಿದ್ದಲ್ಲಿ ಆತನ ಶಿವ್ಯಾ ಮೇಲಿನ ನಂಬ್ರವು ತೀರ್ಮಾನಿಸಲ್ಪಡುವದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ.

Mangalore, 18—1—37. } B. Vyasarayachar, *Advocate for plff.*

ಮುಸ್ಲಿಂ ಮತದಾರರಲ್ಲಿ

ಮಂಗಳೂರು, ಕಾರ್ಕಳ, ಉಡ್ಪಿ ಮತ್ತು ಕುಂದಾಪುರ ತಾಲೂಕುಗಳ ಮುಸಲ್ಮಾನ ವೋಟರರ ಅವಗಾಹನೆಗೆ—

ಬಿ. ಯಲ್. ಅಹಮ್ಮದ ಸಾಹೇಬ, ಬಂಟ್ವಾಳ ಮತ್ತು ಹಾಜಿ ಸಯ್ಯದ್ ಹುಸೇನ ಸಾಹೇಬ, ಕಾರ್ಕಳ, ಇವರು ಜ್ಯಾಹೀರು ಮಾಡಿಕೊಳ್ಳುವುದೇನೆಂದರೆ—

ನಾವಿಬ್ಬರೂ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿ ಮೆಂಬರಿಕೆಗೆ ನಮ್ಮ ತಾಲೂಕುಗಳಲ್ಲಿಯ ಸ್ಥಾನಕ್ಕೆ ನಿಲ್ಲಬೇಕಾಗಿ ಆಲೋಚನೆ ಮಾಡಿಕೊಂಡಿದ್ದರೂ ನಮ್ಮ ಜಾತಿಯ ಮಹನೀಯರ ಸಂಬೋಧನೆ ಮೇರೆಗೆ ನಮ್ಮ ಮುಸಲ್ಮಾನ ಸಮಾಜದ ಹಿತವನ್ನೂ ಬಯಸಿ ನಮ್ಮ ಸಮಾಜದೊಳಗೆ ಶಾಂತಿ ವ ಸಮಾಧಾನ ವ ಒಕ್ಕಟ್ಟು ಇರಗೊಡಿಸುವ ಉದ್ದಿಶ್ಯದಿಂದ ನಮ್ಮ ಪೈಕಿ 1ನೇಯವರಾದ ಬಿ. ಯಲ್. ಅಹಮ್ಮದ್ ಸಾಹೇಬರು ಸದ್ರಿ ಮೆಂಬರಿಕೆಗೆ ನಿಲ್ಲದೆ ಈ ಸಾರಿ ನಮ್ಮ ಪೈಕಿ 2ನೇಯವಂತಾದ ಹಾಜಿ ಸಯ್ಯದ್ ಹುಸೇನ್ ಸಾಹೇಬರು ಹೋಗಬೇಕಾಗಿ ನಿಶ್ಚೈಸಿರುತ್ತದೆ. ನಾವಿಬ್ಬರೂ ನಮ್ಮ ನಮ್ಮ ಮುಸಲ್ಮಾನ ಸಹಾಯಕರಿಗೆ ಕೊಟ್ಟ ಶ್ರಮಕ್ಕಾಗಿ ಕ್ಷಮಾಪಣೆ ಕೇಳುವುದಲ್ಲದೆ ಅವರು ಪ್ರೀತಿಯಿಂದ ನನಗೆ ಪ್ರತ್ಯ ಪ್ರತ್ಯೇಕವಾಗಿ ಕೊಟ್ಟಿರುವ ಉತ್ತೇಜನದ ಬೆಂಬಲಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

(Sd) B. L. Ahamed 16—1—37

(Sd) H. S. Hussain 16—1—37.

MAHATMA'S MIRACLE.

Dear Readers,

In the early parts of the last decade Sanyasi RATNAGIRI of KALLATI HILLS happened to prescribe this tonic which now goes by the name of 'MAHA-SAKTI-DATA'—the giver of great strength—to a faithful milkman who was serving for a number of years so that the old fellow might have a few more years of active life and renewed vitality. Accordingly the Yogi gave the milkman a few doses of the medicine with instructions to take it at periodical intervals, but the old man, out of ignorance or forgetfulness, gulped down the entire quantity at one stretch. The effect was marvellous. Within a short period the milkman felt he had a lease of fresh and rejuvenated life. Once more he took to the enjoyment of worldly pleasure.

When Khalifa Haji Hayat, a near relation of an Indian Prince, heard of this miracle, he approached the venerable Sanyasi with a request to let him have the prescription and on the Haji giving an undertaking that the secret of preparation would be released for the benefit of mankind, the Yogi initiated him into the intricacies of the preparation. In his turn the Haji handed down the prescription to Vaid Bhushan Thakur Dutt Sharma, the famous Ayurvedic Physician of Punjab. Sharmaji gave an extensive trial to the tonic and being thoroughly satisfied as to its lasting effects, published the prescription in Desh-Upakarak for the good of the general public. At the time he held out a challenge to the outside world to produce a similar tonic and although 15 years have passed away, no one has come forward to claim the prize of Rs. 1,000 offered by the Vaid Bhushan.

Through the generosity of Sharmaji, we secured the prescription and got it published in several newspapers and periodicals hitherto, both foreign and Indian. This tonic has been used by thousands so far and it has been acclaimed as a tonic without a peer.

The old and young of both sexes will benefit by the use of this tonic and its use can be begun in any season.

It is impossible to enumerate the ailments which this tonic can cure, but we should like to mention most of the major diseases to which the human frame is heir to, viz.

Impaired vitality and energy; intestinal, liver and stomach troubles; chronic constipation and disorders of the spleen; dullness or want of appetite; Jaundice, throat troubles, piles and asthma; impurities of blood thinnes, etc.; all functional disorders of the weak sex.

Following among others, are a few of unsolicited testimonials, which speak for themselves, and which are open to inspection:—

Vaid Raj Pandit Balkrish Sharma of Bhopal says: 'I prescribed Maha-sakti-Data for 170 patients and found it beneficial beyond expectation.'

Ayurvedacharya Syt. Chhotey Lal Jain, Editor, 'The Ratnakar' writes: 'I have not found a more effective and surer cure than this.'

Rameshar Dayal, Vaid of Gotana, records his opinion in 'Anubhutya Yogamala':

'This is really a unique and unfailing tonic. I have used it in the case of 330 patients, all of whom have been benefited!'

Mr. M. P. Malaviyaji, Editor, 'Manorama' has praised this tonic very highly in his journal.

The prescription is as under:—

1st Stage.—Grind pure Steel filings (20 tolas), pure white Arsenic (1 Tola), pure Camphor (1½ mashas) in juice of Geekwar. Enclose these in an earthenware pot and seal it properly. Surround the pot with 5 seers of cowdung cakes and allow them to burn until the pot gets cool completely.

2nd Stage.—Add Hartal Verki (1 tola) and pure Camphor (1 1½ mashas) and heat again as in stage 1.

3rd Stage.—Add purified Sulphur Amlasar (1 tola) and pure Camphor (1½ mashas) and repeat heating as above.

4th Stage.—Add Sankalit Mercury (purified) 1 tola and 1½ mashas pure Camphor and heat as before.

The addition of ingredients with the exception of Steel filings to be repeated in the same order 16 times and heated accordingly. On completion change the ashes from the old pot to a fresh one. After sealing it tightly bury it underground for a period of 4 months on expiration of which same should be taken out. The powder thus obtained to be kept in a clean glass phial and corked. Thus is the Elixia ready for use.

As the manufacture of this tonic by laymen would entail serious risks, we would suggest that the medicine be obtained from our laboratory which is fully equipped and manned by experts.

The full course of this tonic consists of 80 doses (4 chawals each), for a period of 40 days. The price per phial is Rs. 5-8-0 including postage in India and 7s. 6d. plus postage for Overseas.

For further particulars please send reply paid post card to:—

SHYAM BEHARI LAL, Vaidya Bhushan, SHYAM CHAKRA KARYALAYA, No. 629-B, CAWNPORE (U. P.)

2, 19-1

ಲಂಡನಿನಲ್ಲಿ ಹಲವು ವಸಾಹತುಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಕಾರನೇಶನ್ ಕಮಿಟಿಯು ನಮ್ಮ ಚಕ್ರವರ್ತಿಗಳ ಅನುಮೋದನೆಯಂತೆ ಸ್ಥಾಪಿಸಲ್ಪಟ್ಟಿದೆ. ಈ ಕಮಿಟಿಗೆ ಘನವನ್ನೈದಿದ ಡ್ಯೂಕ್ ಆಫ್ ಗ್ಲಸಸ್ಟರರವರೇ ಚೆಯರ್‌ಮ್ಯಾನರು.

ಒಂದು ಫಿನ್ನಿಶ್ ನಾವೆಯು ಸ್ಕಾಟ್‌ಲೆಂಡಿನ ಬಳಿ ಒಂದು ಬಂಡೆಗೆ ಬಡಿದು ೨ ಚೂರಾಗಿ ೨೦ ಮಂದಿ ಕಾಣೆಯಾಗಿದ್ದಾರೆ.

ನಮ್ಮ ಚಕ್ರವರ್ತಿಗಳ ಪಟ್ಟಾಭಿಷೇಕಮಹೋತ್ಸವದ ಕಾರ್ಯಕ್ರಮಗಳಾಗಲೇ ನಿರ್ಧಾರವಾಗಿವೆ. ಪ್ರಿನ್ಸ್ ಬರ್ನ್‌ಹಾರ್ಡ್‌ರವರೂ ಅವರ ಪತ್ನಿ ರಾಜಕುಮಾರಿ ಜೂಲಿಯಾನರವರೂ ಈ ಸಮಾರಂಭಕ್ಕೆ ಹಾಜರಿ ಹಾಕುವರು. ಪಟ್ಟಾಭಿಷೇಕಮಹೋತ್ಸವದ ವಿಶೇಷ ವೈಭವದ ಆ ಉಡುಗೆಗಳ ಮೇಲೆ ಕಸೂತಿ ಹಾಕುವುದಕ್ಕಾಗಿ, ೬೫ ಮಂದಿ ಪ್ರವೀಣ ಮಹಿಳೆಯರು, ೩ ತಿಂಗಳು ಕೆಲಸ ಮಾಡುವಂತೆ ನಿಯೋಜಿಸಲ್ಪಟ್ಟಿದ್ದಾರೆ.

ಅಬಿಸೀನಿಯಾ ದೇಶದ ಕೆಲವು ಭಾಗಗಳಲ್ಲಿ ಇನ್ನೂ ಗೊರಿಲ್ಲಾ ಯುದ್ಧವು ನಡೆಯುತ್ತಿದೆ ಎಂದು ಅಲ್ಲಿಂದ ಬಂದ ಒಬ್ಬ ಹಿಂದೀ ವ್ಯಾಪಾರಿಯು ತಿಳಿಸುತಾನೆ.

IMPERIAL BANK OF INDIA.
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ.

Reserves exceed Rs. 5 crores. ಕ್ಷೇಮನಿಧಿಯು ರೂ. 5 ಕೋಟಿ ಮಿಕ್ಕಿದೆ.

More than 200 branches and offices throughout India & Burma, a branch in Colombo and a branch in London.

Correspondents all over the world.

Every type of Banking business, both inland and foreign, transacted.
Advances on Government securities and gold at very fine rates.
For full particulars apply to the MANGALORE BRANCH.

ಭಂಗಾರದ ನಗಗಳ ಈಡಿನ ಮೇಲೆ ಬಹು ಕಡಿಮೆ ಬಡ್ಡಿಯಲ್ಲಿ ಸಾಲಗಳನ್ನು ಕೊಡಲಾಗುವುದು.

ಸಾಲದ ಮೊಬಲಗು ನೂರಕ್ಕೆ ಕಡಿಮೆಯಾದರೆ ವರ್ಷಕ್ಕೆ ಸೇಕಡಾ 7ರ ಬಡ್ಡಿ.

100ರಿಂದ 499ರ ವರೆಗೆ ಸೇಕಡಾ 6ರ ಬಡ್ಡಿ. 500 ಯಾ 500ಕ್ಕೆ ಮೇಲ್ಪಟ್ಟು ಸೇಕಡಾ 5ರ ಬಡ್ಡಿ.

ಆಮಂತ್ರಣವಿಲ್ಲದೆ ಹೋಗುವವನೂ, ಹೇಳದೆ ಕೇಳದೆ ಮಾತಾಡುವವನೂ, ತನ್ನ ನಂಬುಗೆಯನ್ನೇ ಕಾಪಾಡಿ ಕೊಳ್ಳಲಾರದವನಲ್ಲಿ ನಂಬಿಗೆಯಿಡುವವನೂ ಮರುಳನು. —ಸೂಕ್ತಿಮಾಲೆ.

XVIII] ಮಂಗಳೂರು, ತಾ. ೧೯—೧—೧೯೩೭ [ಶಕ ೧೮೫೮ ಧಾತು ಸಂ। ಪುಷ್ಯ ಶು। ೭ ಕುಜವಾರ

ಬಜೇಟಿನ ಭವಿತವ್ಯ

ಸುಮಾರು ಇನ್ನೊಂದು ತಿಂಗಳಲ್ಲಿ, ನಮ್ಮ ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಬಜೆಟಿನ ಚರ್ಚೆಗೆ ಆರಂಭವಾಗುವುದು. ಅಷ್ಟರಲ್ಲಿ ಯಾವ ಯಾವ ರಾಜಕೀಯ ಪಂಗಡಗಳು ಎಷ್ಟು ಮಟ್ಟಿಗೆ ಚುನಾವಣೆಯಲ್ಲಿ ಕೃತಾರ್ಥವಾಗಿ ಅಲ್ಲಿಗೆ ಪ್ರವೇಶಮಾಡುವುವೋ, ಜನಾಭಿಪ್ರಾಯವನ್ನು ಯಾವ ರೀತಿಯಲ್ಲಿ ಅಲ್ಲಿ ಮುಂದಿಟ್ಟು ಚರ್ಚಿಸುವುವೋ ಅದೀಗಲೇ ಹೇಳಕೂಡದು. ಕೌನ್ಸಿಲ್ ಆಫ್ ಸ್ಟೇಟಿನಲ್ಲಿ, ಕಳೆದ ಚುನಾವಣೆಯಲ್ಲಿ ಆರಿಸಲ್ಪಟ್ಟ ಸದಸ್ಯರೇ ಇರುವರಲ್ಲದೆ, ಅಸ್ಸಂಬ್ಲಿ ಹೌಸಿನಲ್ಲಿ ಎಷ್ಟೋ ಹೊಸ ಮುಖಗಳನ್ನೂ ನಾವು ನೋಡಬಹುದಾಗಿದೆ. ಮುಂದಿನ ಬಜೆಟಿನ ವಿಚಾರವು, ಈಗಾಗಲೇ ಇಂಡಿಯದ ಸ್ಟಾಕ್ ಎಕ್ಸ್ಚೇಂಜಿನವರ ಚರ್ಚೆಯ ವಿಷಯವಾಗಿದ್ದು, ನಮ್ಮ ರಾಜ್ಯಾದಾಯವು ಅಷ್ಟೊಂದು ಉತ್ತೇಜನಕಾರಿಯಾಗಿಲ್ಲ, ಅದು ನಿರೀಕ್ಷಿಸಿದಷ್ಟು ಮಟ್ಟಿಗೆ ಆಶಾಜನಕವಾಗಿಲ್ಲವೆಂಬ ಅಂಶವನ್ನು ಸೂಚಿಸುತ್ತದೆ.

ಕಸ್ಟಮ್ಸ್ ಬಾಬಿನ ಆದಾಯವು, ಮೊದಲಿನ ನಿರೀಕ್ಷಣೆಗೆ ಏರಿಲ್ಲವೆಂದು, ಈ ವರ್ಷದ ಆ ಅಂದಾಜನ್ನು ಅದೊಂದು ರೀತಿಯಾಗಿ ಗುಣಿಸಿರುವರೆಂದೂ ವ್ಯಕ್ತವಾಗುತ್ತಿದೆ. ಕಸ್ಟಮ್ಸ್ ಬಾಬಿನಲ್ಲಿ ಆದಾಯವು ಸುಮಾರು ೧॥ ಕೋಟಿಯಷ್ಟು ಕಡಿಮೆಯಾಗಿದೆ, ಇತರ ಶಾಖೆಗಳ ಆದಾಯವಾದರೂ ಅಷ್ಟೇನೂ ಏರಿಲ್ಲವೆಂದು ನಂಬಲು ಕಾರಣಗಳಿವೆ. ಆದಾಯತೆರಿಗೆಯ ಶಾಖೆಯಲ್ಲಿಯೂ ಆದಾಯವು ತಗ್ಗಬಹುದೆಂದು ಮಾತು ಹುಟ್ಟಿದೆ. ಇಂಡಿಯದ ವ್ಯಾಪಾರದ ವಿದ್ಯಮಾನಗಳೇನೋ ನಿಜವಾಗಿಯೂ ಸುಧಾರಿಸಿದೆಯಾದರೂ, ಅದರಿಂದ ಈ ಬಾರಿಯ ಬಜೇಟಿಗೇನೂ ಸಹಾಯವಾಗುವ ಸ್ಥಿತಿ ಇಲ್ಲವೆಂದು ಊಹಿಸಬರುವಂತಿದೆ. ವಸ್ತುತಃ ಕೈಗಾರಿಕೆಯ ಸಾಧನಗಳಿಗೆ ಗಿರಾಕಿಗಳು ಹೆಚ್ಚಿದ್ದರೂ, ಈ ಸ್ವದೇಶೀ ಕಾರ್ಖಾನೆಗಳ ಒಳಜಗಳ, ಮೇಲಾಟಗಳಿಂದ, ಬಹುಪಕ್ಷದ ಕಾರ್ಖಾನೆಗಳ ಏನ್ ಉತ್ಪತ್ತಿಯು ಕೃಪ್ತಿಕರವಾಗಿಲ್ಲವೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಡಬೇಕಾಗಿದೆ.

ಪ್ರಕೃತದ ಬಜೆಟಿನ ವರ್ಷದಲ್ಲಿ ಇಂಡಿಯವು ಹೊರದೇಶಗಳಿಗೆ ಕಳುಹಿಸಿದ ಸಾಮುಗ್ರಿಗಳು ಹೆಚ್ಚು; ತರಿಸಿದವುಗಳು ಕಡಿಮೆ. ಆದುದರಿಂದ ಇಂಡಿಯದ ವ್ಯಾಪಾರದ ಸ್ಥಿತಿಯು ನಮಗೇ ಅನುಕೂಲವಾಗಿದೆ ಎನ್ನಬಹುದು. ಅಮೆರಿಕದ ಇಂದಿನ ಸ್ಥಿತಿಗತಿಗಳೂ, ಯುರೋಪಿನ ಪ್ರಕೃತದ ಅನಿಶ್ಚಿತ ವಿದ್ಯಮಾನಗಳೂ ಹೀಗೆ ನಮ್ಮ ವ್ಯಾಪಾರವನ್ನು ಹೆಚ್ಚಿಸಲು ಕಾರಣವಾಯಿತೆಂದು ಬಲ್ಲವರಾಡುತ್ತಾರೆ. ಅಮೆರಿಕದಲ್ಲಿ ಎಡೆಬಿಡದೆ ೩ ವರ್ಷಗಳಿಂದ ಗೋಧಿಯ ಬೆಳೆ ಸರಿಯಾಗಿ ಬೆಳೆದಿಲ್ಲ; ಈ ಕಾರಣದಿಂದಲೂ, ಯುರೋಪಿನ ಅನಿಶ್ಚಿತವಾದ ರಾಜಕೀಯ ಪರಿಸ್ಥಿತಿಯಿಂದಲೂ ಕೆಲವು ಯುರೋಪೀಯ ರಾಷ್ಟ್ರಗಳು, ಗೋಧಿಯನ್ನು ನಮ್ಮಿಂದ ಯಥೇಷ್ಟವಾಗಿ ಕೊಂಡುಕೊಂಡು ಸಂಗ್ರಹಿಸಿಟ್ಟಿರುತ್ತವೆ. ಕಳೆದ ಏಳು ವರ್ಷಗಳಿಂದ, ಇಷ್ಟು ಗೋಧಿ ಇಲ್ಲಿಂದ ಎಂದೂ ಹೊರಗಿನ ದೇಶಗಳಿಗೆ ಕಳುಹಿಸಲ್ಪಟ್ಟಿರುವುದಿಲ್ಲ. ಹೀಗೆಯೇ ನ್ಯಾರು, ಅರಳೆ, ಅಕ್ಕಿ, ಕಬ್ಬಿಣ ಮೊದಲಾದ ಸಾಮುಗ್ರಿಗಳೂ ಹೊರದೇಶಗಳಿಗೆ ಧಾರಾಳವಾಗಿ ಸಾಗಿ ಹೋಗಿವೆ; ನಮ್ಮ ವ್ಯಾಪಾರವು ತಲೆ ಎತ್ತಿರುವುದೆಂಬ ಅಭಿಪ್ರಾಯವನ್ನು ಎಲ್ಲೆಲ್ಲೂ ಉಂಟುಮಾಡಿದೆ. ಇದರಲ್ಲಿ ಸ್ವಾರಸ್ಯವೇನೆಂದರೆ,—ಬ್ರಿಟನೇ ಆಗಲಿ, ಇತರ ದೇಶವೇ ಆಗಲಿ, ತಮ್ಮಲ್ಲಿನ ಕೈಗಾರಿಕೆಗಳ ಸಾಮುಗ್ರಿಗಳನ್ನು ಎಂದಿನಂತೆ ಇಂಡಿಯದಲ್ಲಿ ಮಾರಾಟ ಮಾಡಲು ಸಮರ್ಥವಾಗಿಲ್ಲವೆಂಬುದೇ. ಒಟ್ಟಿನಲ್ಲಿ, ನಮ್ಮ ವ್ಯಾಪಾರವು ಪರದೇಶಗಳಲ್ಲಿ ಹೆಚ್ಚಲು ಯುರೋಪಿನ ಅವ್ಯವಸ್ಥಿತ ಸ್ಥಿತಿಯೇ ಒಂದು ಪ್ರಾಮುಖ್ಯ ಕಾರಣವೆನ್ನಬೇಕಾಗಿದೆ. ಇದರಿಂದ ನಮ್ಮ ವ್ಯಾಪಾರದ ತೂಕಕ್ಕೆ ಸಹಾಯವಾಗುವುದಿದ್ದರೆ, ಸಹಜವಾಗಿಯೂ ಬಂಗಾರದ ವ್ಯಾಪಾರವು ಇಳಿಮುಖವಾಗಲೇ ಬೇಕು.

ಆದರೆ, ಹೀಗೆ ಬಂಗಾರವು ಹೊರದೇಶಗಳಿಗೆ ಸಾಗುವುದು ಕಡಿಮೆಯಾದರೂ, ಬೆಳ್ಳಿ ನಮ್ಮಲ್ಲಿಗೆ ಬಂದು ಬೀಳುವುದು ಹೆಚ್ಚಿದೆ. ಇದು ಕಡಿಮೆಯಾದ ಬಡ್ಡಿಯ ದರದಿಂದ ಉತ್ತೇಜನಗೊಂಡಿದೆ. ಇಷ್ಟು ಮಟ್ಟಿಗೆ ಏರಿದ ಬೆಲೆಯಲ್ಲಿ ಬಂಗಾರವನ್ನು ಕೊಂಡು ಪ್ರಯೋಜನವಿಲ್ಲ, ಅದಕ್ಕಿಂತ ಬೆಳ್ಳಿಯ ಬೆಲೆಯೇ ಈಗ ಉತ್ತೇಜನಕಾರಿಯಾಗಿದೆ ಎಂದು ಅನೇಕರು ತಿಳಿದುಕೊಂಡಿದ್ದಾರೆ. ಇನ್ನೊಂದು ಯುದ್ಧವಾದಲ್ಲಿ ಬಂಗಾರದ ಬೆಲೆ ಇಳಿದು, ಬೆಳ್ಳಿಯ ಬೆಲೆ ಹೆಚ್ಚಬಹುದೆಂದು ಹಲವು ಕೋಟ್ಯಾಧೀಶ್ವರರ ಊಹೆ. ಈ ಸಂದರ್ಭದಲ್ಲಿ, ಬಜೇಟಿನಲ್ಲಿ ಕಡಿಮೆ ಬೀಳಬಹುದಾದ ಅಂಶವನ್ನು ತುಂಬಿಕೊಳ್ಳಲು ಈ ಬೆಳ್ಳಿಯ ಮೇಲೆ ಇಂಡಿಯಾ ಸರಕಾರವು ಸುಂಕವನ್ನು ಏರಿಸಬಹುದೆಂದೂ ಒಂದು ಮಾತು ಹುಟ್ಟಿದೆ. ಆದರೆ, ಈ ಮಾತನ್ನು ಸಂಪೂರ್ಣವಾಗಿ ನಂಬಲು ಅವಕಾಶವಿಲ್ಲವೇಕೆಂದರೆ, ಇದರಿಂದ ಬೆಳ್ಳಿಯನ್ನು ಪೋಸದಿಂದ ಕೊಂಡೊಯ್ಯುವ ಈ ವ್ಯಾಪಾರವು ಹೆಚ್ಚಬಹುದೆಂಬುದು ಅಧಿಕಾರಿಗಳಿಗೆ ಗೊತ್ತೇ ಇದೆ. ಆದುದರಿಂದ ಈಗ ಕೊಂಡಿರುವ, ಹಾಗೂ ಕೊಳ್ಳಲಿರುವ ಬೆಳ್ಳಿಯ ವ್ಯಾಪಾರವು ಒಂದು ಜೂಜಿನಂತಿದೆ ಎಂಬುದು ತೀರಾ ಸುಳ್ಳು ಎನ್ನಲಾಗುವುದಿಲ್ಲ. ಒಂದು ವೇಳೆ, ಸುಂಕವು ಬೆಳ್ಳಿಯ ಮೇಲೇರಿದರೆ, ವಿದೇಶಗಳಿಂದ ಇಲ್ಲಿಗೆ ಬರುವ ಬೆಳ್ಳಿಯು ಕಡಿಮೆಯಾಗಿ, ಇಲ್ಲಿಂದಲೇ ಬೆಳ್ಳಿಯು ಪರದೇಶಗಳಿಗೆ ಓಡಲಿಕ್ಕೂ ಸಾಕು.

ವ್ಯಾಪಾರವು ಹೆಚ್ಚಿರುವುದರಿಂದ, ಹಣಕ್ಕೂ ವಿಶೇಷವಾದ ಕೇಳಿಕೆಗಳಿವೆ. ಆದರೆ ಅರ್ಥಶಾಸ್ತ್ರಜ್ಞರು ಬ್ರಿಟನಿನಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡಿನ ದರವನ್ನು ಸೇಕಡಾ ಮೂರಕ್ಕಿಂತಲೂ ಹೆಚ್ಚಿಸಬಾರದೆಂದು ಸೂಚನೆ ಕೊಟ್ಟಿದ್ದಾರೆ. ಮಾತ್ರವಲ್ಲ; ಇದು ಹೆಚ್ಚಾಗದಿರುವ ಹಾಗೆ, ಸಾರ್ವಜನಿಕ ಪ್ರಯೋಜನಾರ್ಥವಾದ ಕಾರ್ಯಗಳಿಗಾಗಿ ಉಪಯೋಗವಾಗುವ ಹಣದ ಮೊತ್ತವನ್ನು ಕಡಿಮೆ ಮಾಡಬೇಕೆಂದೂ ಹೇಳುತ್ತಿದ್ದಾರೆ. ಆದುದರಿಂದ ಬಜೆಟನ್ನು ಸರಿದೊಗಿಸುವ ಕಾರ್ಯವು ನಮ್ಮ ಫ್ಯಾನೆನ್ಸ್ ಮೆಂಬರರಿಗೆ ಅಷ್ಟೇನೂ ಸುಲಭವಾಗಿಲ್ಲ—ಇನ್ನವರ ಚಾತುರ್ಯದ, ಚಾಕಚಕ್ಯದ ಪರಿಣಾಮವೇನೋ ಮುಂದೆ ನೋಡಬಹುದಾಗಿದೆ.

ಮಂಗಳೂರು

ಕಳೆದ ತಾರೀಕು ೧೪ನೇ ಗುರುವಾರ ಸಾಯಂಕಾಲ ೫-೩೦ಕ್ಕೆ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ಪಂಡಿತ ಸಂಘದ ಆಶ್ರಯದಲ್ಲಿ ಕೇರಳದ ಮಹಾಕವಿಗಳೂ, ಕಲಾಮಂಡಲದ ಸಂಸ್ಥಾಪಕರೂ ಆದ ಶ್ರೀವಾನ್ ವಳ್ಳತ್ತೋಳ ಇವರು 'ಕಥಕ್ಕಳಿ'ಯ ವಿಷಯದಲ್ಲಿ ಅಮೋಘವಾದ ಭಾಷಣವನ್ನಿತ್ತರು. ಸಂಘದ ಅಧ್ಯಕ್ಷರಾದ ಶ್ರೀ. ನಿ. ಅನಂತೋಪಾಧ್ಯಾಯರು ಭಾಷಣದ ಸಾರವನ್ನು ಕನ್ನಡದಲ್ಲಿ ಹೇಳಿದರು.

ಶನಿವಾರ ಸಾಯಂಕಾಲಕ್ಕೆ ಗವರ್ನಮೆಂಟ್ ಹೈಯರ್ ಎಲಿಮೆಂಟರಿ ಟ್ರೈನಿಂಗ್ ಸ್ಕೂಲಿನಲ್ಲಿ ಸೈಂಟ್ ಅಗ್ನೆಸ್ ಕೊನ್ವೆಂಟಿನ ವಿಜ್ಞಾನಶಾಸ್ತ್ರಾಧ್ಯಾಪಕರಾದ ಶ್ರೀ. ಎಸ್. ರಾಮಕೃಷ್ಣಾಚಾರ್, ಬಿ. ಎ., ಎಲ್. ಟಿ. ಯವರು ರೇಡಿಯೋ ಮತ್ತು ಟೆಲಿಫೋನಿನ ವಿಷಯವಾಗಿ ಕನ್ನಡದಲ್ಲಿ ಒಂದು ಗಂಭೀರವಾವ ಭಾಷಣವಿತ್ತರು.

ಕೇರಳದ ಕಲಾಮಂಡಲಿಯವರು ಇಲ್ಲಿ ತಮ್ಮ ಕಥಕ್ಕಳಿಯ ಎರಡು ಉತ್ಕೃಷ್ಟ ಪ್ರಯೋಗಗಳನ್ನು ಆಡಿ ತೋರಿಸಿ ಹಿಂದಿರಳಿರುವರು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣಪ್ರದರ್ಶನವು ಬಹು ಯಶಸ್ವಿಯಾಗಿ ನೆರವೇರಿ ಕೊನೆಗಂಡಿತು. ಈ ಸಲ ಇದನ್ನು ನೋಡುವುದಕ್ಕೆ ಬಂದಿದ್ದ ಪ್ರೇಕ್ಷಕರ ಗುಂಪು ಹಿಂದಿನ ಪ್ರದರ್ಶನಗಳಿಂದಲೂ ಬಹಳ ಹೆಚ್ಚಾಗಿದ್ದಿತು. ಇಷ್ಟು ಮಟ್ಟಿಗೆ ಜನಾಶ್ರಯವು ದೊರೆಯಲು ಶಿಕ್ಷಣಪದಾರ್ಥಗಳ ಉತ್ಕೃಷ್ಟತೆಯೇ ಕಾರಣವಾಗಿದೆ. ಇದಕ್ಕೆಲ್ಲ ಆ ಸಮಿತಿಯವರ ಸಾಹಸವೂ, ಉಪಾಧ್ಯಾಯರ ಸಹಕಾರವೂ, ಮುಖ್ಯವಾಗಿ ನಮ್ಮ ಡಿ. ಇ. ಓ.ಗಳಾದ ಎಂ. ಕೃಷ್ಣಪ್ಪನವರ ಹಾಗೂ ಟ್ರೈನಿಂಗ್ ಶಾಲಾ ಹೆಡ್ಮಾಸ್ಟರ ಶ್ರೀ. ಗೋಪಾಲರಾಯರ ನಿರಂತರ ಶ್ರಮೋದ್ಯಮಗಳೂ ಮೂಲವಾಗಿದ್ದು ಇವರಿಗೆ ಅಭಿನಂದನಗಳು ಸಲ್ಲಬೇಕಾಗಿವೆ.

ಕುಂದಾಪುರ ಡಿವಿಜನಿಗೆ ಮಹಮ್ಮದೀಯರ ಪರವಾಗಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಉಮೇದ್ವಾರರಾಗಿ ಕಾರ್ಕಳದ ವಕೀಲರಾಗಿರುವ ಜನಾಬ್ ಹಾಜಿ ಸೈದ್ ಹುಸೇನ್ ಸಾಹೇಬ್, ಬೀ. ಏ., ಬಿ. ಎಲ್.ರವರೂ, ಬಂಟವಾಳದ ಜನಾಬ್ ಬಿ. ಎಲ್. ಅಹಮ್ಮದರವರೂ ಮುಂದೆ ಬಂದಿದ್ದರು. ಈಗ ಇವರೊಳಗೆ ರಾಜಿ ಪಂಚಾಯಿತಿಕೆ ನಡೆದು ಜನಾಬ್ ಅಹಮ್ಮದರವರ ಉಮೇದ್ವಾರಿಕೆಯನ್ನು ಜನಾಬ್ ಹಾಜಿ ಸೈದ್ ಹುಸೇನ್ ಸಾಹೇಬರ ಬಗ್ಗೆ ಹಿಂತೆಗಿಸಿರುವರೆಂಬ ಸಂಗತಿಯು ಬಹಳ ಸಂತೋಷಕರವಾಗಿರುತ್ತದೆ.

ವಿವೇಕೋದಯ ಯುವಕ ಸಂಘ, ನೀರೇಶ್ವಾಲ್ಯ, ಮಂಗಳೂರು, ಇದರ ಒಂದು ನಿಾಟಿಂಗು ಇದೇ ಕಳೆದ ತಾ. ೧೨—೧—೩೭ನೇ ಮಂಗಳವಾರ ರಾತ್ರಿ ೪ ಗಂಟೆ ೮-೩೦ರಲ್ಲು, ಶ್ರೀಮಾನ್ ಕಾರ್ನಾಡು ಸದಾಶಿವರಾಯರ ಅಕಾಲನಿಧನದ ಕುರಿತು ಜರಗಿತು. ಸಭೆಯಲ್ಲಿ ಪಾಸಾದ ಶರಾವುಗಳು ೧. ಕೈ. ವಾ. ಕಾರ್ನಾಡು ಸದಾಶಿವರಾಯರ ಸ್ಮರಣಾರ್ಥವಾಗಿ ಪ್ರತಿ ವರ್ಷ ಜರಗುವ ವಾರ್ಷಿಕೋತ್ಸವದ ಸಮಯ ಒಂದು ಪ್ರಭಾತ ಫೇರಿಯನ್ನು ಹೆಚ್ಚಿಗೆ ಆಚರಿಸತಕ್ಕದ್ದು; ೨. ದಿವಂಗತರ (ಕಾ. ಸದಾಶಿವರಾಯರ) ಒಂದು ಭಾವಚಿತ್ರ ಸಂಘದಲ್ಲಿ ಅನಾವರಣ ಮಾಡತಕ್ಕದ್ದು. ಕೈ. ವಾ. ಕಾರ್ನಾಡು ಸದಾಶಿವರಾಯರ ಭಾವಚಿತ್ರವನ್ನು ಶ್ರೀಮಾನ್ ಎನ್. ರಾಮಚಂದ್ರ ಬಂಗೇರರವರು ಸಂಘಕ್ಕೆ ದಾನ ಕೊಡುವೆನಾಗಿ ವಾಗ್ದಾನವನ್ನಿತ್ತಿರುವರು.

ಮಂಗಳೂರು ಮಲೆಯಾಳಿ ಯುವಜನ ಸಮಾಜದ ಒಂದು ವಿಶೇಷ ಸಭೆಯು ಕಳೆದ ತಾ. ೧೧—೧—೧೯೩೭ರಲ್ಲು ಮ. ಎಮ್. ಪಿ. ಕುಮಾರನವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಸಿದ್ಧ ಕೊಂಗ್ರೆಸ್ ಪ್ರವರ್ತಕರೂ, ತ್ಯಾಗಿಗಳೂ, ದೇಶಾಭಿಮಾನಿಗಳೂ, ಆದ ಶ್ರೀ. ಕಾರ್ನಾಡು ಸದಾಶಿವರಾಯರ ಅಕಾಲನಿಧನದ ಕುರಿತು ಈ ಸಭೆಯು ದುಃಖವನ್ನು ಸೂಚಿಸಿತು. ಅಧ್ಯಕ್ಷರು ಶ್ರೀ. ಸದಾಶಿವರಾಯರ ಪರಿಚಯವನ್ನು ಸಭೆಗೆ ಮಾಡಿಕೊಟ್ಟದ್ದಲ್ಲದೆ, ಅವರ ಗುಣಕಥನ, ಕಾರ್ಯಕಲಾಪ ಮುಂತಾದುವನ್ನು ತಮ್ಮ ಭಾಷಣದಿಂದ ತಿಳಿಸಿದರು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲೆಂದು, ಸಭೆಯೂ ಪ್ರಾರ್ಥಿಸಿತು; ಕೊನೆಗೆ ಕೊಂಗ್ರೆಸ್ಸು ಅಧ್ಯಕ್ಷರಾದ ಪಂ। ಜವಾಹರಲಾಲ ನೆಹರುಗಳವರು ಮಂಗಳೂರಿಗೆ ಚಿತ್ರೈಸಿದಾಗ ಒಂದು ಮಾನಪತ್ರವನ್ನು ಸಮರ್ಪಿಸಬೇಕೆಂದೂ ನಿರ್ಣಯಿಸಲಾಯಿತು.

ಇದೇ ಕಳೆದ ತಾ. ೧೭ನೇ ಆದಿತ್ಯವಾರ ಸಂಜೆ ೪-೩೦ಕ್ಕೆ ಇಲ್ಲಿನ ಬಾಂಧವಬಳಗದ ೯ನೆಯ ವಾರ್ಷಿಕೋತ್ಸವವು ಸುಬ್ರಾಯ ಪೈ ಮೆಮೋರಿಯಲ್ ಹಾಲಿನಲ್ಲಿ ಉತ್ಸಾಹಪೂರ್ವಕವಾಗಿ ಜರುಗಿತು. ಇಲ್ಲಿಯ ಗೌ॥ ಕಾಲೇಜಿನ ಕಿರಿಯ ಕರ್ಣಾಟಕ ಪಂಡಿತರಾದ ಶ್ರೀಮಾನ್ ಕೆ. ವಿ. ಕೃಷ್ಣ ಭಟ್, ವಿದ್ವಾನ್ ಇವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಎಂ. ಎನ್. ಕಾಮತ್, ಬಿ. ಶಂಕರ ಭಟ್, ಬಿ. ನಾರಾಯಣ ಭಟ್, ಮೊದಲಾದವರು ಸಮಯೋಚಿತವಾದ ಸರಸ ಭಾಷಣಗಳನ್ನು ಮಾಡಿದ ಬಳಿಕ ಅಧ್ಯಕ್ಷರು ತಮ್ಮ ಗಂಭೀರವಾಣಿಯು ಉದಾತ್ತ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿದರು. ಅಂದು ಫಲಾಹಾರಸತ್ಕಾರದ ಏರ್ಪಾಡೂ ಇದ್ದಿತು.

ಇದೇ ಕಳೆದ ತಾ. ೧೫ನೇ ರವಿವಾರ ಸಾಯಂ. ೫-೩೦ಕ್ಕೆ ಮಂಗಳೂರಿಂದ ಹೊರಟ ಶೆಟಲ್ ಬಂಡಿಯು ಮಂಗಲ್ಪಾಡಿ ಸ್ಟೇಶನ್ನು ದಾಟಿ ಕೊಂಚ ದೂರದಲ್ಲಿ ಓಡುತ್ತಿರುವಾಗ್ಗೆ, ಸಾಧಾರಣ ಅರ್ಧ ಫರ್ಲಾಂಗ್ ದೂರದ ತನ್ನ ಮನೆಯನ್ನು ಬಿಟ್ಟು ಹರಿದುಕೊಂಡು ಬಂದು ಕಂಬಿಗಳ ಬಳಿ ಕೂತಿದ್ದ, ಸುಮಾರು ೧॥ ವರ್ಷ ಪ್ರಾಯದ ಬ್ರಾಹ್ಮಣರ ಗಂಡುಮಗುವಿನ ತಲೆಯ ಮೇಲ್ಭಾಗದ ಚಿಪ್ಪೇ ಹಾರಿಹೋಯಿತು.

ಹಿಂದೂದೇಶ

ಸೋನಾಯಿಯಲ್ಲಿ ಪಂಡಿತ ಜಹ್ವರ್‌ಲಾಲರವರು ಕೊಟ್ಟ ಒಂದು ಭಾಷಣವನ್ನು, ಜಬಲ್ಪುರದ 'ಜೈನ್ ಗಜೇಟಿ'ನಲ್ಲಿ ಪ್ರಕಟಿಸಲು, ದಿಗಂಬರ ಮಹಾಸಭೆಯ ಜನರಲ್ ಸೆಕ್ರೆಟರಿಗಳು ಬಿಡಲಿಲ್ಲವಾಗಿ, ಆ ಪತ್ರಿಕೆಯ ಸಂಪಾಹಕರಾದ ಶ್ರೀ. ಸುಮರ್ ಚಂದ್ರ ಜೈನ ದಿವಾಕರರವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನೇ ಕೊಟ್ಟಿರುವರು.

ಥಾನ್‌ಬಾದಿನ ಪೋಲೀಸ್ ಅಸಿ॥ ಸಬ್ ಇನಸ್ಪೆಕ್ಟರರಾಗಿದ್ದ ಪಿ. ಘೋಷರವರು, ಅನಾದಿನಾಥ ಮುಖರ್ಜಿ ಎಂಬವನನ್ನು ಕಾನೂನಿಗೆ ವಿರೋಧವಾಗಿ ಕೈದು ಮಾಡಿ ಹಿಂಸಿಸಿದರೆಂದು ಘೋಷರಿಗೆ ೪ ತಿಂಗಳ ಕಠಿನ ಸಜೆಯೂ, ೨೫ ರುಪಾಯಿಗಳ ಜುಲ್ಮಾನೆಯೂ ವಿಧಿಸಲಾಗಿದೆ.

ಲಕ್ನೋವಿನ ಇಂಟರ್‌ಮೀಡಿಯೇಟ್ ಕಾಲೇಜಿನ ವಿದ್ಯಾರ್ಥಿಯಾದ ಮಹಮ್ಮದ್ ಇಬ್ರಾಹಿಂ ಎಂಬವನು ತನ್ನನ್ನು ಪ್ರಿನ್ಸಿಪಾಲರು ಹ್ಯಾಸ್ಕೂಲು ಪರೀಕ್ಷೆಗೆ ಕಳುಹಿಸಲಿಲ್ಲವೆಂದು ವಿಷ ತಿಂದು ಆತ್ಮಹತ್ಯೆ ಮಾಡಿಕೊಂಡನು.

ಬಿ. ಎನ್. ರೈಲ್ವೆಯವರ ಮುಷ್ಕರದಿಂದ ತಮಗೆ ಆಗಲೇ ೫೦ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿದೆ ಎಂದು ರಾಯ್ಪುರದ ವರ್ತಕಮಂಡಲವು ವೈಸರಾಯರಿಗೂ, ಮಧ್ಯಪ್ರಾಂತದ ಗವರ್ನರರಿಗೂ ತಂತಿ ಕಳುಹಿಸಿ ಅದರಲ್ಲಿ ಪ್ರಭುತ್ವದವರು ಈ ವಿವಾದವನ್ನು ಕೊನೆಗೊಳಿಸಬೇಕೆಂದು ಪ್ರಾರ್ಥಿಸಿದೆ.

ಪಾಟಿಯಾಲದಲ್ಲಿ ಶ್ರೀ ಭಾರತಭೂಷಣ ರತನ್ ಚಂದಜೀ ಎಂಬ ಜೈನ ಮುನಿ ಏಕಕಾಲದಲ್ಲಿ ನೂರು ಪ್ರಶ್ನೆಗಳಿಗೆ ಉತ್ತರ ಹೇಳುವ ಅದ್ಭುತ ಬುದ್ಧಿಶಕ್ತಿಯನ್ನು ಪ್ರದರ್ಶಿಸಿ ನೆರೆದವರನ್ನು ವಿಸ್ಮಯಗೊಳಿಸಿದನು.

ರಾಯ್ಪುರದ ಕಡೆಯಿಂದ ಬಂಗಾಳ ನ್ಯಾಯವಿಧಾಯಕ ಸಭೆಗೆ ಉಮೇದುವಾರನಾಗಿ ನಿಂತಿದ್ದ ಮೌಲ್ವೀ ಅಫ್ಜಲ್-ದ್ದೀನ್ ಖೊಂಡಕರ್ ಎಂಬಾತನು ಚುನಾವಣೆಯ ಪ್ರಚಾರಕಾರ್ಯಕ್ಕಾಗಿ ಸಂಚರಿಸುತ್ತಿದ್ದಾಗ ಯಾರೋ ಆತನನ್ನು ಗುಂಡು ಹೊಡೆದು ಕೊಂದಿದ್ದಾರೆ.

ತಿರುವಾಂಕೂರಿಗೆ ಯಥಾಸಮಯದಲ್ಲಿ ದಯೆಮಾಡಿಸಿದ ಮಹಾತ್ಮಾಜಿಯವರಿಗೆ ತ್ರಿವೆಂದ್ರಮಿನಲ್ಲಿಯೂ ಇತರ ಕಡೆಗಳಲ್ಲಿಯೂ ಸಂಭ್ರಮಪೂರ್ವಕವಾದ ಸ್ವಾಗತವು ನಡೆಯಿತು. ಅವರು ಅಸ್ಪೃಶ್ಯತೆಯ ಕುರಿತು ಭಾಷಣಗಳನ್ನೂ ಕೊಟ್ಟರು.

ಇಂಡಿಯದಲ್ಲೆಲ್ಲ ಅತ್ಯಂತ ಪವಿತ್ರ ಸ್ಮಶಾನವಾದ ಕಾಶಿಯ ಮಣಿಕರ್ಣಿಕಾ ಘಾಟಿನ ಪುನರ್ನಿರ್ಮಾಣಕ್ಕಾಗಿ ಅಸ್ತಿವಾರವು ಪಂಡಿತ ಮಾಳವ್ಯರಿಂದ ಹಾಕಲ್ಪಟ್ಟಿತು. ಈ ಸ್ಮಶಾನದ ಜೀರ್ಣೋದ್ಧಾರಕ್ಕಾಗಿ ಸುಮಾರು ೫೮ ಸಾವಿರ ರುಪಾಯಿಗಳು ಮಂಜೂರಾಗಿವೆ.

ಈಜಿಪ್ಟಿನ ಯುನಿವರ್ಸಿಟಿಯ ಡೆಪ್ಯುಟೇಶನಿನವರು ಆಲಿಘರಕ್ಕೆ ತಲುಪಿ ಅಲ್ಲಿನ ವಿಶ್ವವಿದ್ಯಾಲಯದವರಿಂದ ಸನ್ಮಾನಿಸಲ್ಪಟ್ಟರು.

ಅಸಾಮಿನ ಗವರ್ನರರ ಅದೊಂದು ಭಾಷಣದ ಮೇಲೆ ಟೀಕೆ ಮಾಡಿದ ಸಂಬಂಧ 'ದೇಕಾ ಅಸಾಮ್' ಎಂಬ ಒಂದು ಅಸಾಮಿಯಾ ವಾರಪತ್ರಿಕೆಯ ಸಂಪಾದಕರ ಮೇಲೆ, ಸೆಕ್ಯುರಿಟಿಯ ಪ್ರಕರಣವನ್ನು ಜಾರಿಮಾಡುವುದರಲ್ಲಿದ್ದಾರೆ.

ಲ್ಯಾಲಾಪುರದ ಕಾಂಗ್ರೆಸ್ ಅಧಿಕಾರಿಗಳು ಅಲ್ಲಿನ ಕಾಂಗ್ರೆಸ್ ಕಟ್ಟಡದ ಸಂಬಂಧವಾದ ತೆರಿಗೆಯನ್ನು ಸಲ್ಲಿಸದಿರುವುದರಿಂದ, ರೆವಿನ್ಯೂ ಅಧಿಕಾರಿಗಳು ೧೫ ಸಾವಿರ ರುಪಾಯಿಗಳ ಬೆಲೆ ಬಾಳುವ ಆ ಕಟ್ಟಡಗಳನ್ನು ಜಪ್ತಿಮಾಡುವ ಆಲೋಚನೆಯಲ್ಲಿರುವರು.

ಬಂಗಾಳದ ರಾಯಲ್ ಏಶ್ಯಾಟಿಕ್ ಸಂಘದವರಿಗೆ ಇಂಡಿಯಾ ಸರಕಾರವು ಸುಮಾರು ೧೨ ಸಾವಿರ ಹಸ್ತಪ್ರತಿಗಳನ್ನು—ಸಂಸ್ಕೃತದವುಗಳನ್ನು—ಎರವಾಗಿ ಕೊಡಲು ಒಪ್ಪಿರುತ್ತಾರೆ.

ಬಿ. ಎನ್. ರೈಲ್ವೆಯ ಮುಷ್ಕರದ ಸಂಬಂಧ ಇಂಡಿಯಾ ಸರಕಾರವು ಒಂದು ವಿಚಾರಣೆಯ ಸಮಿತಿಯನ್ನು ಸ್ಥಾಪಿಸುವ ಹಾಗಿಲ್ಲವೆಂದು ನಿರ್ಧಾರವಾಗಿದೆ.

ಇಂಡಿಯದಲ್ಲೆಲ್ಲ ಬಹು ದೊಡ್ಡದಾದ ಅಲ್ಲಹಾಬಾದಿನ ವಾರ್ಷಿಕ ಮಾಘ ಮೇಳದ ಕಾಲದಲ್ಲಿ ಇಂಡಿಯದ ನಾನಾ ಭಾಗಗಳಿಂದ ಬಂದ ೨ ಲಕ್ಷ ಯಾತ್ರಿಕರು ಗಂಗಾಸ್ನಾನ ಮಾಡಿದರು.

ಮಾನ್ಯ ಶ್ರೀ. ಶ್ರೀನಿವಾಸ ಶಾಸ್ತ್ರಿಗಳವರು ಮಲಯದಿಂದ ಕೊಲೊಂಬೊವಿಗೆ ಹಿಂದಿರುಗುವಾಗ ತಮ್ಮ ಸಂಚಾರದ ಕುರಿತು ಏನನ್ನೂ ಹೇಳಿಲ್ಲ. ಅವರೊಂದು ವರದಿ ಬರೆಯುತ್ತಿದ್ದಾರೆ ಆ ಕುರಿತು.

ನೋಕಾಲಿಯಲ್ಲಿ ಒಂದು ಚುನಾವಣೆಯ ವಿಾಟಿಂಗಿನಲ್ಲಿ ಇಬ್ಬರು ಉಮೇದುವಾರರ ಎರಡು ತಂಡಗಳೊಳಗೆ ಪರಸ್ಪರ ಕಲಹವಾಗಿ ಒಬ್ಬನು ಸತ್ತುದುದರಿಂದ, ಅಲ್ಲಿನ ಡಿ॥ ಮ್ಯಾಜಿಸ್ಟೇಟರು ೧೪ಳನೇ ಪ್ರಕರಣವನ್ನು ಅಲ್ಲಿ ಜಾರಿ ಮಾಡಿರುತ್ತಾರೆ.

ಡಾಕ್ಟರ್ ಅಂಬೇಡ್ಕಾರರವರು ತಮ್ಮ ಯುರೋಪಿನ ಪ್ರವಾಸ ಮುಗಿಸಿ ಬೊಂಬಯಿಗೆ ಮರಳಿದರು.

ಡಿಲ್ಲಿಯಲ್ಲಿ ನಮ್ಮ ಚಕ್ರವರ್ತಿಗಳ ಕಾರನೇಶನ್ ಮಹೋತ್ಸವಕ್ಕೆ ಇರ್ವಿನ್ ಸ್ಟೂಡಿಯವು ಮತ್ತೂ ಹಳೇ ಕೋಟೆಯನ್ನು ಆರಿಸಬಹುದೆಂದು ವಾರ್ತೆ.

ಸಿಂಧ್ ಪ್ರಾಂತದಲ್ಲಿಯೂ ಬಂಗಾಳದಲ್ಲಿಯೂ ಶೀತ ತರಂಗಗಳ ಹಾವಳಿಯಿಂದ ಕೆಲವರು ಮೃತರಾದರು. ಬೆಳೆಗಳ ಬೆಳವಣಿಗೆಗೂ ತುಂಬ ನಷ್ಟವಾಗಿದೆ.

ದ್ರೋಣಾಚಲವಿನಿಂದ ಸೆಕುಂದರಾಬಾದಿಗೆ ಬರುತ್ತಿದ್ದ ಒಂದು ಟ್ರೈನಿಗೆ ಒಂದು ಬಸ್ ಎದುರಿಗೆ ಸಿಕ್ಕಿ ಬಸ್ ಪುಡಿಯಾಯಿತು. ೧೨ ಮಂದಿ ಸತ್ತರು; ಎಂಟು ಮಂದಿಗೆ ಗಾಯಗಳಾಗಿವೆ.

ನಾಗಪುರದ ಮೊಡೆಲ್ ವಿಲ್ಲಿನವರು ತಮ್ಮ ಕಾರ್ಖಾನೆಯ ಬಾಗಿಲನ್ನು ಸದ್ಯ ಮುಚ್ಚಿರುವುದರಿಂದ ೩ ಸಾವಿರ ಮಂದಿ ಕೆಲಸಗಾರರ ಜೀವನನಿರ್ವಾಹವು ನಿಂತಿದೆ.

ಪಂಡಿತ ಜಹ್ವರಲಾಲರು ತಮ್ಮ ಚುನಾವಣೆಯ ಪ್ರಚಾರ ಕಾರ್ಯವನ್ನು ಪಂಜಾಬಿನಲ್ಲಿ ವಿಮಾನಸಂಚಾರದ ಮೂಲಕ ಮಾಡಿ ಪೂರೈಸುವವರಾಗಿದ್ದಾರೆ.

ಪಾಟ್ನಾದ ಸಾದರ್ ಸಬ್ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ ಪಾಟ್ನಾ ಹೈಕೋರ್ಟ್ ಬಾಂಬ್ ಮೊಕದ್ದಮೆಗೆ ಸಂಬಂಧಪಟ್ಟ ಒಬ್ಬ ಅಪರಾಧಿ, ಅಲ್ಲಿನ ಡಿ॥ ಪೋಲೀಸ್ ಸುಪರಿಂಟೆಂಡೆಂಟ್ ರಾಯ್ ಬಹದೂರ್ ಭೂಮಿಕರ ಮೇಲೆ ಕಲ್ಲೆಸೆಯಲೂ, ಅನಂತರ ಚೂರಿಯಿಂದ ಇರಿಯಲೂ ಯತ್ನಿಸಿದನೆಂದು ಪ್ರಕಟವಾಗಿದೆ.

ಕಲ್ಕತ್ತಾ ಕಾರ್ಪರೇಶನಿನ ಒಂದು ವಿಾಟಿಂಗಿನಲ್ಲಿ, ಒಂದು ನೇಮಕದ ಸಂಬಂಧ ಅಸಮಾಧಾನವು ತಲೆದೋರಿ, ಯೂರೋಪೀಯ ಮೆಂಬರುಗಳೂ, ನಾಮಿನೇಟೆಡ್ ಸದಸ್ಯರೂ ವಿಾಟಿಂಗಿನಿಂದ ಹೊರಗೆ ನಡೆದರು.

ಲಾಹೋರಿನಲ್ಲಿ ಒಂದು ಕಡೆ ಚುನಾವಣೆಯ ಸಭೆ ನಡೆಯುತ್ತಿದ್ದಾಗ ವಿರುದ್ಧಪಕ್ಷದ ಉಮೇದುವಾರರ ವಂಗಡಗಳಲ್ಲಿ ಲಡಾಯಿಯಾಗಿ ಉರಿಯುತ್ತಿದ್ದ ಕಲ್ಲಿದ್ದಲಿಂದ ಹೊಡೆದಾಡಿಕೊಂಡರು.

೧೯೩೭ನೆಯ ಇಸ್ವಿಯ ಭವಿಷ್ಯನನ್ನು ರಾಯ್ ಸಾಹೇಬ್ ಪಂಡಿತ ಕೈಲಾಸ್‌ಚಂದ್ರ ಜ್ಯೋತಿಷ್ಯಾರ್ಣವ ಇವರು ಹೀಗೆ ತಿಳಿಸುತ್ತಾರೆ:—ಆರೋಗ್ಯದ, ಬೆಳೆಗಳ, ಮನಶ್ಶಾಂತಿಯ ನಷ್ಟವು ಪ್ರಪಂಚದಲ್ಲೆಲ್ಲೂ ಕಂಡುಬರುತ್ತದೆ. ಸ್ಪೈನ್, ಅಬಿಸೀನಿಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ ಮೊದಲಾದ ಕಡೆಗಳಲ್ಲಿ ರೋಗಗಳೂ, ಕ್ಷಾಮಭಯವೂ ಹೆಚ್ಚುತ್ತದೆ. ಇಂಡಿಯದಲ್ಲಿ ಜಾತಿಗಳ ಐಕ್ಯದ ಸಮಸ್ಯೆ ಹಾಗೇ ನಿಲ್ಲುತ್ತದೆ. ಇಂಡಿಯದ ರಾಜಕೀಯ ಪರಿಸ್ಥಿತಿಯೂ ಸುಧಾರಿಸದು. ಇಂಡಿಯದ ರಾಜರು ಫೆಡರೇಶನಿಗೆ ಅನುಕೂಲವಾಗುವರು. ಇಂಡಿಯಾ ಸರಕಾರವು, ತನ್ನ ಗ್ರಾಮೋದ್ಧಾರಕಾರ್ಯದ ಯೋಜನೆಯಲ್ಲಿ ತಕ್ಕಷ್ಟು ಯಶಸ್ವಿಯಾಗುವುದು. ಡ್ಯೂಕ್ ಆಫ್ ವಿಂಡ್ಸರರ ಲಗ್ನಕ್ಕೆ ವಿಘ್ನಗಳು ತುಂಬಾ ಇರುವುವು. ಹಿಟ್ಲರರಿಗೆ ಈ ವರ್ಷವು ಹೆಚ್ಚು ಶುಭದಾಯಕವಲ್ಲ; ಮುಸಲೋನಿಯವರು ಕಾಹಿಲೆ ಬೀಳುವರು; ಯುರೋಪಿನಲ್ಲಿ ಇನ್ನೊಬ್ಬ ರಾಜರು ಸಿಂಹಾಸನತ್ಯಾಗ ಮಾಡುವರು.

ನಾಗಪುರದ ಟೌನ್ ಹಾಲಿನಲ್ಲಿ ಜರುಗಿದ ಒಂದು ಸಾರ್ವಜನಿಕ ಸಭೆಯಲ್ಲಿ ಹಿಂದೂ ಸಭೆಯವರಿಗೂ, ಕಾಂಗ್ರೆಸ್ ಮಂದಿಗೂ ಕಾಳಗವಾಗಿ ಹೇಗೂ ವಿಾಟಿಂಗ್ ಮುಗಿಯಿತು. ಹಿಂದೂ ಸಭೆಯವರಿಂದ ನಡೆಸಲಾದ ಈ ವಿಾಟಿಂಗಿನಲ್ಲಿ ಕಾಗ್ರೆಸಿನವರ ಪ್ರಶ್ನೆಗಳಿಗೆ ಉತ್ತರ ಕೊಡಲು ತಿರಸ್ಕರಿಸಿದರೆಂಬುದೇ ಈ ಗಲಭೆಗೆ ಕಾರಣ.

ಇಬ್ಬರು ವಿದ್ಯಾರ್ಥಿಗಳನ್ನು 'ಸಸ್ಪೆಂಡ್' ಮಾಡಿದರೆಂದು ಕಲ್ಕತ್ತೆಯ ವಿದ್ಯಾಸಾಗರ ಕಾಲೇಜಿನ ೫೦೦ ಮಂದಿ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವರು.

ಇಂಡಿಯದಲ್ಲಿ ಹೊಗೆಬತ್ತಿ ಸೇದುವ ಅಭ್ಯಾಸ ಹೆಚ್ಚುತ್ತಿದೆ. ಕಳೆದ ೪ ತಿಂಗಳಲ್ಲಿ ೨೦,೧೦,೦೦೦ ರೂಪಾಯಿಗಳು ಬೆಲೆ ಬಾಳುವ ಸಿಗರೇಟುಗಳು ವಿದೇಶದಿಂದ ನಮ್ಮಲ್ಲಿಗೆ ಬಂದು ಬೂದಿಯಾಗಿವೆ.

ಕಾಂಗ್ರೆಸಿನ ಉಮೇದುವಾರರಾಗಿ ನಿಂತ ಕಲ್ಕತ್ತಾ ಪ್ರಾಂತದ ೩ ಮಂದಿ ಕಾಂಗ್ರೆಸ್ ಮಂದಿಯನ್ನು, ಕಾರಣಾಂತರಗಳಿಂದ, ಕಾಂಗ್ರೆಸ್ ಅಧಿಕಾರಿಗಳು 'ಸಸ್ಪೆಂಡ್' ಮಾಡಿರುತ್ತಾರೆ.

ಶ್ರೀ. ಸಿ. ರಾಜಗೋಪಾಲಾಚಾರ್ಯರು ಮದ್ರಾಸಿನ ನ್ಯಾಯವಿಧಾಯಕ ಸಭೆಗಳಲ್ಲಿ ಲೋವರ್ ಹೌಸಿನ ಒಬ್ಬ ಕಾಂಗ್ರೆಸ್ ಉಮೇದುವಾರರಾಗಲಿರುವರೆಂದು ಪ್ರಕಟವಾಗಿದೆ.

ಆರೋಗ್ಯ
ಪುತ್ತು
ಚೈತನ್ಯ
ಕ್ಕಾಗಿ
ಒಕಾಸಾ
ಸೇವಿಸಿ.

ಈ ಅತ್ಯುತ್ಕೃಷ್ಟವಾದ ಹೊರ್ಮನ್ ಟಾನಿಕಿನ ಪಾತರಿಯೂ ತೀವ್ರವೂ ಆದ ಗುಣಕ್ಕೆ ಹೋಲಿಸಲು ಬರುವ ಅಥವಾ ಸಮೀಪವರ್ತಿಯಾಗಿರುವ ಬೇರಾವುದೂ ಇಲ್ಲ.



ಒಕಾಸಾದಲ್ಲಿ ವಿಪುಲವಾದ ಆರೋಗ್ಯವನ್ನೂ, ಚೈತನ್ಯವನ್ನೂ, ದೊರಕಿಸಿಕೊಡುವ ಪದಾರ್ಥಗಳಿವೆ; ಅದು ನಿಮ್ಮ ದೇಹರಚನೆಯಲ್ಲಿರುವ ನಿಶ್ಶಕ್ತಿ ಮತ್ತು ನಿತ್ರಾಣದ ಪ್ರತಿಯೊಂದು ಚಿಹ್ನೆಯನ್ನೂ ಸಂಪೂರ್ಣವಾಗಿ ಹೋಗಲಾಡಿಸುತ್ತದೆ; ನಿಮ್ಮನ್ನು ಉತ್ತಮ ಆರೋಗ್ಯ, ಬಲವಾದ ನರ, ಹೆಚ್ಚಿನ ಶಕ್ತಿ ಮತ್ತು ವೃದ್ಧಿಯಾದ ಚೈತನ್ಯ ಇವುಗಳಿಂದ ಕೂಡಿದ ಒಬ್ಬ ಹೊಸ ಮನುಷ್ಯನನ್ನಾಗಿ ಮಾಡುತ್ತದೆ.

ತರುಣರಾಗಿರಿ.
ಒಕಾಸಾದೊಡನೆ.

ಅದನ್ನು ಪಡೆಯಿರಿ, ನಿಮ್ಮ ಕೆಮಿಸ್ಟರಿಂದ ಅಥವಾ

OKASA CO., BERLIN (INDIA), LTD.,
12, Rampart Row, Fort,
P. O. Box 396, BOMBAY.

ಲಕ್ನೋವಿನ ಕ್ರಿಶ್ಚಿಯನ್ ಕಾಲೇಜಿನ ಪ್ರೊಫೆಸರರಾದ ಹುಸೇನ್‌ರವರು ಮೊನ್ನೆ ಈಚಿಗೆ ವಿಚಿತ್ರವಾದ ಒಂದು ಅನುಭವವನ್ನು ಸಂಪಾದಿಸಿದರು. ಅವರು ತಮ್ಮ ಶಾಲಾ ಸಂಬಳವನ್ನು ಒಂದು ಕರವಸ್ತ್ರದಲ್ಲಿ ಕಟ್ಟಿಕೊಂಡು ಮನೆಗೆ ಬರುತಿದ್ದ ಹಾಗೆ, ಒಂದು ಹದ್ದು ಎಲ್ಲಿಂದಲೋ ಹಾರಿಬಂದು, ಆ ದುಡ್ಡಿನ ಗಂಟನ್ನು ತಿನ್ನುವ ವಸ್ತುವೆಂದು ಭಾವಿಸಿ, ಅವರ ಕೈಯಿಂದ ಹಾರಿಸಿಕೊಂಡು ಹೋಯಿತು. ಕಕ್ಕಾಬಿಕ್ಕಿಯಾಗಿ ಪ್ರೊಫೆಸರರೂ, ವಿದ್ಯಾರ್ಥಿಗಳೂ ಆ ಹದ್ದನ್ನೇ ಹಿಂಬಾಲಿಸಿದರು. ಇಷ್ಟರಲ್ಲಿ ಹದ್ದು ಅದರಲ್ಲಿದ್ದ ತಿಂಡಿ ಏನೆಂದು ನೋಡಲು ಒಂದು ಮರದ ಮೇಲೆ ಕುಳಿತು ಅದರಲ್ಲಿ ತಿಂಡಿ ಏನೂ ಕಾಣದೆ, ಆ ಗಂಟನ್ನು ನೆಲಕ್ಕೆ ಉರುಳಿಸಿತು. ಪ್ರೊಫೆಸರರು ಅದನ್ನು ಸಂತೋಷದಿಂದ ಎತ್ತಿಕೊಂಡು ಹೊರಟುಹೋದರು.

ನಮ್ಮ ಮೈಸೂರಿನ ಶ್ರೀಮದ್ಯುವರಾಜರು ಬೊಂಬಯಿಗೆ ದಯೆಮಾಡಿಸಿದ್ದು, ಅಲ್ಲಿ ಮೈಸೂರಿನ ಸಾಮುಗ್ರಿಗಳನ್ನು ಮಾರಾಟಕ್ಕಿರಿಸಿರುವ 'ಮೈಸೂರು ಎಂಪೋರಿಯಂ' ಎಂಬ ನೂತನ ಸಂಸ್ಥೆಯ ಆರಂಭೋತ್ಸವವನ್ನು ಯಥೋಚಿತವಾಗಿ ನೆರವೇರಿಸುವವರಾದರು. ಅಲ್ವಾರಿನ ಮಹಾರಾಜರೇ ಆದಿಯಾಗಿ ಅನೇಕ ಮಂದಿ ಮಹನೀಯರೇ ಸನ್ಮಾರಂಭಕ್ಕೆ ದಯೆಮಾಡಿಸಿದ್ದರು. ಬೊಂಬಯಿಯಲ್ಲಿನ ಇದರ ವ್ಯಾಪಾರದ ಏಜಂಟರೆಂದರೆ ಸುಪ್ರಸಿದ್ಧ ವ್ಯವಹಾರಜ್ಞರಾದ ಶ್ರೀ. ಜಮುನಾದಾಸ್ ದ್ವಾರಕದಾಸರವರೇ.

ದ. ಕನ್ನಡ

ದೇವಸ್ಥ ಪಠೂಥಿ:—ಬೋರ್ಡ್ ಶಾಲಾ ಮಕ್ಕಳು, ಹಾಗೂ ಯುವಕರು ತಾ. ೨—೧—೩೭ನೇ ಶನಿವಾರ ರಾತ್ರಿ ಶಾಲಾ ಮುಖ್ಯ ಉಪಾಧ್ಯಾಯರಾದ ಶ್ರೀ. ಅಮುಣಿಂಜೆ ಡಿ. ನಾರಾಯಣರಾಯರಿಂದ ನೂತನವಾಗಿ ರಚಿಸಲ್ಪಟ್ಟ 'ಗ್ರಹಚಾರಪರಿಹಾರ' ಎಂಬ ಸಾಮಾಜಿಕ ನಾಟಕವನ್ನೂ, ಶಾಲಾ ಬಾಲಕಿಯರು 'ಸಾಕವ್ವಾ' ಎಂಬ ನಾಟಕವನ್ನೂ ಆಡಿ, ಬಂದಿದ್ದ ಮಹನೀಯರನ್ನು ಸಂತೋಷಪಡಿಸಿದರು.

ಬಳಿಕ ರಾ. ಡಿ. ಎ. ಸುಬ್ಬರಾಯರ ಹಾಡುವಿಕೆಯಿಂದ ಯಸ್ಸಗಾನ ತಾಳಮದ್ದಳೆಯ ಸಭೆಯು ಅತಿ ವೈಭವದಿಂದ ನೆರವೇರಿತು.

ಕುಂದಾಪುರ:—ಇತ್ತೀಚೆ ಸಣ್ಣ ಸಣ್ಣ ಕಳವುಗಳು ಅಲ್ಲಲ್ಲಿ ಆಗುತ್ತಿವೆ. ತಾಮ್ರದ ಪಾತ್ರೆ, ಹರಿವಾಣ ಮೊದಲಾದುವುಗಳು ಅನೇಕ ಕಡೆಗಳಲ್ಲಿ ಕಳವಾಗಿವೆ. ಕೆಲವು ಮಾಲು ಪತ್ತೆಯಾಗಿವೆಯೆಂದೂ ತಿಳಿದುಬರುತ್ತದೆ. ಪೋಲೀಸಿನವರು ಸ್ವಲ್ಪ ನಿಗಾ ಕೊಡುವುದು ಅಗತ್ಯವಾಗಿದೆ.

ಮೈಸೂರಿನಿಂದ ಬಂದಿರುವ ಮು. ರಾ. ಶಾಸ್ತ್ರಿ, ಎಂಬವರು ೨—೩ ಕಡೆಗಳಲ್ಲಿ ಹರಿಕಥಾರೂಪದಿಂದ ಏಸುಕ್ರಿಸ್ತನ ಚರಿತ್ರೆಯನ್ನು ಗಾನ ಮಾಡಿದರು. ಶ್ರೀಯುತರ ವಾಕ್ಸರಣಿಯೂ ಗಾಯನವೂ ಉತ್ತಮವಾಗಿದೆ.

ಇದೇ ತಾರೀಕು ೩ರಲ್ಲು ಆ. ಘ. ೩ಕ್ಕೆ ತ್ರಾಸಿಯ ಗುಹೇಶ್ವರ ದೇವಸ್ಥಾನದಲ್ಲಿ ಸಾರ್ವಜನಿಕ ಸಭೆ ಸೇರಿತು. ಶ್ರೀಯುತ ಹಲ್ಲನಾಡು ಮಾದಪ್ಪಯ್ಯನವರೇ ಅಧ್ಯಕ್ಷರಾಗಿದ್ದರು. ಶ್ರೀ. ಗಣ್ಯರಾದ ಮುಗು ಅಣ್ಣಪ್ಪ ನಾವಡರು, ಸಾಹುಕಾರ್ ಲಕ್ಷ್ಮೀನಾರಾಯಣ ಕಾಮತರು, ತ್ರಾಸಿ ಪಟೇಲರು, ಎಡತೊರೆ ಕೃಷ್ಣಪ್ಪ ಶೆಟ್ಟಿರು, ಮಂಕಿ ಕುಪ್ಪಯ್ಯ ಮಯ್ಯರು ಮುಂತಾದವರು ಶ್ರೀ. ಹೆಗ್ಗಡೆಯವರಿಗೇ ಓಟುಗಳನ್ನು ಕೊಡಬೇಕೆಂದು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಸರ್ವರೂ ಶ್ರೀಯುತ ಡಿ. ಬಿ. ಮಹಾಬಲ ಹೆಗ್ಗಡೆಯವರಿಗೇ ಓಟುಗಳನ್ನು ಕೊಡಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಈ ಸಭೆಗೆ ಸುಮಾರು ೪೦೦ ಜನರು ಸೇರಿದ್ದರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

(ಪ್ರಕಟನೆ ನಂ. ೩)

ಕರ್ನಾಟಕದ ಸುಪ್ರಸಿದ್ಧ ಮುಖಂಡರೂ, ಕೆಲಕಾಲ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ ಇದ್ದ ದೇ. ಭ. ಕಾರ್ನಾಡ ಸದಾಶಿವರಾಯರು ಮೊನ್ನೆ ತಾ. ೯—೧—೧೯೩೭ನೇ ದಿವಸ ಮುಂಬೈಯಲ್ಲಿ ಮೃತರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರು ಅಸಹಕಾರ ಚಳವಳಿಯಲ್ಲಿ ವಕೀಲಿ ವೃತ್ತಿಗೆ ಶರಣು ಹೊಡೆದು, ಗಾಂಧೀಭಕ್ತರಾಗಿ ತಮ್ಮ ಕನುಮನಧನಗಳನ್ನೆಲ್ಲ ರಾಷ್ಟ್ರಕ್ಕೆ ಧಾರೆ ಎರೆದು ಮಂಗಳೂರ ಜಿಲ್ಲೆಯನ್ನು ಜಾಗ್ರತಿಗೊಳಿಸಿದರು. ರಾಷ್ಟ್ರೀಯ ಶಿಕ್ಷಣ, ಖಾದೀ, ಅಸ್ಪೃಶ್ಯತಾನಿವಾರಣೆ ಮೊದಲಾದ ಅನೇಕ ವಿಧಾಯಕ್ಮಕ ಕಾರ್ಯಕ್ರಮಗಳನ್ನು ಜರುಗಿಸುತ್ತ ಕಾಂಗ್ರೆಸ್ಸಿನ ಏಕನಿಷ್ಠ ಸೈನಿಕರಾಗಿ ಇಲ್ಲಿಯ ವರೆಗೆ ಜೀವನವನ್ನು ಸಾಗಿಸಿದ ಸದಾಶಿವರಾಯರು ಮೊನ್ನೆ ಫೈಜಪೂರ ಕಾಂಗ್ರೆಸ್ಸಿನಿಂದ ಮರಳಿ ಮುಂಬೈಗೆ ಬಂದು ನಿಮೋನಿಯಾ ಬೇನೆಯಿಂದ ಮೃತರಾದರು. ಇದರಿಂದ ಕಾಂಗ್ರೆಸ್ಸಿನ ಕಾರ್ಯಕ್ಕೂ ಕರ್ನಾಟಕಕ್ಕೂ ಅಪರಿಮಿತ ಹಾನಿಯಾಗಿದೆ.

ಈ ಪುಣ್ಯಾತ್ಮರು ತೀರಿಕೊಂಡು ಇದೇ ತಿಂಗಳು ೧೯ನೇ ತಾರೀಕಿಗೆ ೧೦ ದಿವಸಗಳಾಗುವದರಿಂದ ಪ್ರತಿಯೊಂದು ಕಾಂಗ್ರೆಸ ಕಮಿಟಿಯವರು ಅಂದು ದುಃಖಪ್ರದರ್ಶನ ಸಭೆಗಳನ್ನು ಮಾಡಬೇಕು. ಅಲ್ಲಿ ದುಃಖಪ್ರದರ್ಶನದ ಗೊತ್ತುವಳಿಯನ್ನು ಮಾಡಿ ಅದನ್ನು ನಮ್ಮ ಕಚೇರಿಗೂ ಅವರ ಮಕ್ಕಳಿಗೂ ಕಳಿಸಬೇಕು. ಅವರ ಮಗಳು ಬೆಂಗಳೂರ ಟಾಟಾ ಇನ್ಸ್‌ಟಿಟ್ಯೂಟದಲ್ಲಿ ಇರುವರು.

ಪ್ರತಿಯೊಂದು ಕಾಂಗ್ರೆಸ ಕಮಿಟಿಯು ತನ್ನ ಕಮಿಟಿಯ ಸಭೆಯಲ್ಲಿಯೂ ಈ ಗೊತ್ತುವಳಿಯನ್ನು ಮಾಡಬೇಕು. (ಸದಾಶಿವರಾಯರ ಮಗಳ ವಿಳಾಸ:—ಕುಮಾರಿ ರಾಧಾಬಾಯಿ ಕಾರ್ನಾಡ, M. Sc., ೧೫ ಕ್ರಾಸರೋಡ, ಮಲ್ಲೇಶ್ವರಮ್-ಬೆಂಗಳೂರ.)

ಧಾರವಾಡ ೧೫—೧—೩೭ } ರಾ. ಶ್ರೀ. ಹುಕ್ಕೇರಿಕರ, ಗೌ. ಕಾರ್ಯದರ್ಶಿ.

ದ. ಕ. ಜಿಲ್ಲಾ ಶಿಕ್ಷಣ ಪ್ರದರ್ಶನ.

ಜಿಲ್ಲಾ ಕಲೆಕ್ಟರರಾದ ಮಿ. ಎ. ಡಿ. ಕ್ರೋಂಬಿಯವರು ಪ್ರದರ್ಶನವನ್ನು ತೆರೆಯುವ ಕಾಲದಲ್ಲಿ ಮಾಡಿದ ಭಾಷಣ.

ಮಹಿಳೆಯರೇ, ಸಜ್ಜನಹೃದರೇ,

ನಾವಿಂದು ಮೂರನೆ ಜಿಲ್ಲಾ ಶಿಕ್ಷಣಪ್ರದರ್ಶನದ ತೆರೆಯುವ ಸಮಾರಂಭಕ್ಕೆ ನೆರೆದಿದ್ದು, ಇಲ್ಲಿ ಕೂಡಿರುವ ಜನಸಂದಣಿಯನ್ನು ಕಂಡು, ಈ ಸಮಾರಂಭದ ಪ್ರಾಮುಖ್ಯತೆಯು ಸಂಪೂರ್ಣವಾಗಿ ಅರಿತುಕೊಳ್ಳಲ್ಪಟ್ಟಿದೆಯೆಂದು ನೋಡಲು ನಾನು ತುಂಬಾ ಹರ್ಷಿತನಾಗಿದ್ದೇನೆ. ಪ್ರದರ್ಶನ ಸಮಿತಿಯು, ಜಿಲ್ಲಾ ಬೋರ್ಡು, ಮುನಿಸಿಪಾಲಿಟಿಗಳು, ಸೆಕೆಂಡರಿ ಎಜುಕೇಶನ್ ಬೋರ್ಡ್, ಜಿಲ್ಲಾ ಎಜುಕೇಶನಲ್ ಕೌನ್ಸಿಲ್, ಇನ್ಸ್‌ಪೆಕ್ಟಿಂಗ್ ಏಜೆನ್ಸಿ, ಉಪಾಧ್ಯಾಯರ ಗಿಲ್ಡ್ ಮತ್ತು ಜಿಲ್ಲೆಯೊಳಗಣ ನಾನಾ ಶಾಲೆಗಳ ಮೇಲಧಿಕಾರಿಗಳು ಇವುಗಳ ಪ್ರಾತಿನಿಧ್ಯವನ್ನುಳ್ಳುದಾಗಿದೆ, ಅಂದರೆ ಈ ಜಿಲ್ಲೆಯ ಮಕ್ಕಳಿಗೆ ವಿದ್ಯೆಯನ್ನು ಕಲಿಸುವ ಪ್ರಮುಖ ಕಾರ್ಯವನ್ನು ವಹಿಸಿಕೊಂಡಿರುವ ಜನಗಳ ಮತ್ತು ಸಂಸ್ಥೆಗಳನ್ನೊಳಗೊಂಡುದಾಗಿರುತ್ತದೆ. ಹಿಂದಿನ ಪ್ರದರ್ಶನವು ಜರುಗಿ ೫ ವರ್ಷಗಳಾಗಿದ್ದು, ಇಂದಿನದು ಹಿಂದಿನವುಗಳೆಲ್ಲವುಗಳಿಗಿಂತಲೂ ಮುಂದುವರಿದಿದೆ ಮತ್ತು ಈ ಸಂದರ್ಭದಲ್ಲಿ ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲೆಗಳೂ ಭಾಗವಹಿಸಿದ್ದು ಪೂರ್ವದಲ್ಲಿ ಎಲಿಮೆಂಟರಿ ಶಾಲೆಗಳು ಮಾತ್ರ ಭಾಗವಹಿಸುತ್ತಿದ್ದುವು.

ಈಗ ಈ ಪ್ರದರ್ಶನದ ಗುರಿಯ ವಿಷಯವಾಗಿ ಕೆಲವು ಮಾತುಗಳನ್ನು ಹೇಳೋಣ. ಈ ಪ್ರಪಂಚದಲ್ಲಿ ಯಾವದೂ ಶಾಶ್ವತವಾಗಿ ಉಳಿಯುವದಿಲ್ಲ. ಮತ್ತು ವಿದ್ಯೆಯನ್ನೀಯುವ ವಿಧಾನದಲ್ಲಿ ಮುಖ್ಯವಾಗಿ ಕಲಿಸುವಿಕೆಗೊಂದು ಕಾರ್ಯಕಾರಿ ರೂಪವನ್ನು ಕೊಡುವ ಪ್ರಯತ್ನದಲ್ಲಿ ಪ್ರಗತಿಯು ಗಣನೀಯವಾಗಿದೆ. ಕಲಿಸುವ ವಿಧಾನದಲ್ಲಿನ ಇತ್ತೀಚಿಗಿನ ಎಲ್ಲಾ ಪ್ರಾಮುಖ್ಯ ಹೊಸ ಬದಲಾವಣೆಗಳ ಮುಖ್ಯ ಸೂತ್ರವೇ 'ಮಾಡುವದರ ಮೂಲಕ ಕಲಿಯುವದೆ'ಂಬುದಾಗಿರುತ್ತದೆ. ಬಾಲಕರು ಪುಸ್ತಕಗಳ ಅಥವಾ ಉಪಾಧ್ಯಾಯರುಗಳ ಮೂಲಕ ಕಲಿತ ಜ್ಞಾನದ ಸಮ್ಮಿಲನವು ಅವರಿಗೆ ಜೀವನದೊಳಗಣ ವಿವಿಧ ವ್ಯವಹಾರಗಳಲ್ಲಿ ಸರಿಯಾಗಿ ನಡಿಯಲಿಕ್ಕೆ ಪ್ರಯೋಜನಕಾರಿಯಾಗಲಿಕ್ಕಿಲ್ಲ. ಮಕ್ಕಳು ತಮ್ಮಷ್ಟಕ್ಕೆ ಕೆಲಸ ಮಾಡಿ ಒಂದು ತೆರನಾದ ಅರಿತುಕೊಳ್ಳುವ ಕ್ರಮವನ್ನು ಸಂಪಾದಿಸಿಕೊಳ್ಳಬೇಕು ಅಂದರೆ ತಮ್ಮಷ್ಟಕ್ಕೇನೆ ಕೆಲಸ ಮಾಡುವ ಸಾಮರ್ಥ್ಯವುಳ್ಳವರಾಗಿರಬೇಕು.

ಈ ರೀತಿಯ ಪ್ರದರ್ಶನಗಳು ವಿದ್ಯಾರ್ಥಿಗಳು ಪುಸ್ತಕಗಳಿಂದ ಮೇಲಿಂದ ಮೇಲೆಂಬಂತೆ ಕಲಿತ ವಿಷಯಗಳ ಕಾರ್ಯರೂಪದ ಜ್ಞಾನವನ್ನು ಸಂಪಾದಿಸಲಿಕ್ಕೆ ತುಂಬಾ ಅನುಕೂಲತೆಗಳನ್ನು ಒದಗಿಸಿ ಕೊಡುತ್ತವೆ. ಅವುಗಳನ್ನು ಶಾಲೆಗಳಲ್ಲಿ ಕಲಿಸಿದ ಕೈಗೆಲಸ ಮತ್ತು ಮನೆಗೆಲಸಗಳನ್ನು ಕಾರ್ಯರೂಪದಲ್ಲಿ ತೋರಿಸುತ್ತವೆ. ಇಷ್ಟರ ವರೆಗೆ ಇಂಥಾ ವಿಷಯಗಳಲ್ಲಿನ ಉದ್ದಿಶ್ಯವು ಬಹಳ ಮಟ್ಟಿಗೆ ಸ್ವಭಾವತಃ ವಿದ್ವತ್ಪೂರ್ಣವಾಗಿತ್ತು. ಇಂಥಾ ಪ್ರದರ್ಶನಗಳು ಕೆಲಸವನ್ನು ಗೈಯುವದರ ಫಲಕಾರಿತ್ವವನ್ನು ತೋರಿಸುತ್ತಿದ್ದು ಮಕ್ಕಳಿಗೆ ಮನೆಯಲ್ಲಿ ಯಾವ ತರಹ ಯೋಗ್ಯ ಶಿಕ್ಷಣವನ್ನು ಕೊಡಬೇಕೆಂದು ಹೆತ್ತವರಿಗೊಂದು ಹುರುಪನ್ನು ಕೊಡುತ್ತದೆ.

ನಾವೀಗ, ಈ ಪ್ರಾತಃಕಾಲ ಇಲ್ಲಿ ನೋಡುವ ವಿವಿಧ ಪ್ರದರ್ಶಿತ ವಸ್ತುಗಳ ಕಡೆಗೆ ತಿರುಗುವಾಗ ಭಾಷೆಗಳನ್ನು ಕಲಿಸುವ ವಿಭಾಗದಲ್ಲಿ, ಮಕ್ಕಳನ್ನು ಆ ದಿಸೆಯು ಬೇಗನೇ ಬುದ್ಧಿವಂತರನ್ನಾಗಿ ಮಾಡಲು ಸಹಕಾರಿಯಾಗುವ ಉಪಕರಣಗಳನ್ನೂ, ಚಾರ್ಟುಗಳನ್ನೂ ಕಾಣಬಹುದು; ಅಲ್ಲದೆ ಭಾಷೆಗಳನ್ನು ಕಲಿಯುವದರಲ್ಲಿ ಚುರುಕುತನವನ್ನೂ ಉತ್ಸಾಹವನ್ನೂ ಕೊಡುವಂಥಾ ಕಥೆಗಳನ್ನೂ, ಕವನಗಳನ್ನೂ ಕಾಣಬಹುದು.

ಭೂಗೋಳಶಾಸ್ತ್ರವನ್ನು ಕಲಿಯುವ ಹೊಸ ವಿಧಾನವು ಆದಕ್ಕೆ ಸಂಬಂಧಪಟ್ಟ ವಿಭಾಗದಲ್ಲಿ ಕಾಣಬಹುದು. ಇಂದಿನ ಮಕ್ಕಳು ಬರೇ, ಹೆಸರುಗಳ, ಸ್ಥಳಗಳ ಮತ್ತು ಪದಾರ್ಥಗಳ ಪಟ್ಟಿಯನ್ನು ಕಲಿಯುವದಲ್ಲವೆಂದು ಕಂಡುಬರುವದು. 'ಪತ್ತಿ ಪದಾರ್ಥಗಳಿಗಾಗಿ ಮ್ಯಾಂಚೆಸ್ಟರ್, ಊಲನ್ ಪದಾರ್ಥಗಳಿಗಾಗಿ ಲೀಡ್ಸ್, ನೇಯಿಗೆಗಾಗಿ ನೊಟ್ಟಿಂಗ್ಹಾಂ' ಇಂಥಾ ಏನೊಂದೂ ಹುರುಳಿಲ್ಲದ ಸೂತ್ರಗಳನ್ನು ಕಲಿಯುವದರ ಜ್ಞಾಪಕವು ನನಗೆ ಇನ್ನೂ ಇದೆ. ಆದರೆ ಇಂದು ಭೂಗೋಲಶಾಸ್ತ್ರವು ಬಹಳ ವಾಸ್ತವಿಕವಾಗಿಯದೆ. ಮಕ್ಕಳು ನಾನಾ ದೇಶಗಳ ಜನಗಳ ವಿಷಯ ಕಲಿತುಕೊಳ್ಳಬೇಕಾಗಿದೆ ಮತ್ತು ಆವರ ವಾತಾವರಣದಿಂದಾಗಿ ಅವರ ಜೀವನವು ಹೇಗಿದೆಯೆಂದು ಕಲಿಸಲ್ಪಡುತ್ತಾರೆ. ಆದೇ ರೀತಿಯಲ್ಲಿ ಚರಿತ್ರೆಯನ್ನು ಒಂದು ಉತ್ಸಾಹಪೂರಿತವಾದ ವಿಷಯವನ್ನಾಗಿ ಮಾಡುವ ಅನೇಕ ಹೊಸ ಸಲಹೆಗಳನ್ನು ಚರಿತ್ರೆಯ ವಿಭಾಗದಲ್ಲಿ ಅರಿತುಕೊಳ್ಳಬಹುದು. ಗಣಿತ ಮತ್ತು ವಿಜ್ಞಾನ ಇವುಗಳಿಗೆ ಸಂಬಂಧಪಟ್ಟ ವಿಭಾಗಗಳಲ್ಲಿ ಇವುಗಳನ್ನು ಕಲಿಸುವದರಲ್ಲಿನ ಪ್ರಾಮುಖ್ಯವಾದ ಹೊಸ ಬದಲಾವಣೆಗಳನ್ನು ಕಾಣಬಹುದು. ಬರೆ ಕಲಿಸುವ ಉಪಕರಣಗಳನ್ನು ಮಾತ್ರ ಪ್ರದರ್ಶಿಸಿಲ್ಲ. ಇಂಥಾ ಶಿಕ್ಷಣದ ಪರಿಣಾಮವನ್ನು ವಿದ್ಯಾರ್ಥಿಗಳ ಕೆಲಸದಿಂದ ಪರಿಗಣಿಸಬಹುದು. ಹೀಗಾಗಿ ವಿದ್ಯಾರ್ಥಿಗಳ ಕೆಲಸಕ್ಕಾಗಿಯೇ ದೊಡ್ಡ ವಿಭಾಗವು ವಿನ್ಯಾಸಿಸಲ್ಪಟ್ಟಿದ್ದು, ಇದು ಕೂಡ ಚಿಕ್ಕ ಚಿಕ್ಕ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಇಲ್ಲಿ ಪ್ರೇಕ್ಷಕರು ನಾನಾ ಶಾಖೆಗಳಲ್ಲಿನ ವಿದ್ಯಾರ್ಥಿಗಳ ಕಾರ್ಯಗಳನ್ನು ಅಂದರೆ, ಬರೆಹ, ಚಿತ್ರ, ಕೈಗೆಲಸ ಇತ್ಯಾದಿಗಳನ್ನು ಕಾಣಬಹುದು. ಇದರಿಂದಾಗಿ ವಿದ್ಯಾರ್ಥಿಗೆ ರಜಾಸಮಯದ ಸದುಪಯೋಗವನ್ನು ಕಲಿಸುವದು ಮರೆತಿಲ್ಲವೆಂದು ತಿಳಿಯಬಹುದು.

ಸಾಯಂಕಾಲಗಳಲ್ಲಿ ವ್ಯಾಯಾಮಪ್ರದರ್ಶನಗಳೂ ಆನಂತರ ವಿವಿಧ ವಿನೋದಾವಳಿಗಳೂ ಇರುವವೆಂದು ನಾನು ತಿಳಿಯುತ್ತೇನೆ. ಪೂರ್ವದಲ್ಲಿ ವಿದ್ಯಾಕಾಲದ ವ್ಯಾಯಾಮದ ಹಾಗೂ ಶಾಲಾ ಸಮಯದ ಅನಂತರದ ಮಾನಸಿಕ ಪರಿವರ್ತನೆಗಳ ಉಲ್ಲಾಸದ ವಿಷಯಗಳು ಬಹಳವಾಗಿ ಗಣನೆಗೆ ತರಲ್ಪಡದೆ ಇದ್ದು ಈ ಪ್ರದರ್ಶನಗಳು ಶಾಲೆಗಳು ಇಂಥಾ ವಿಷಯಗಳಿಗೆ ಹೆಚ್ಚಿನ ಗಮನವನ್ನು ಕೊಡುವಂತೆ ಸಹಕಾರಿಯಾಗುವುವು.

ಕೊನೆಯದಾಗಿ, ಉಪಾಧ್ಯಾಯರುಗಳಿಗೆ ಅನೇಕ ಭಾಷಣಗಳಿರುವುವು. ಈ ಭಾಷಣಗಳು ಪ್ರದರ್ಶಿತವಾದ ಉಪಕರಣಗಳ ಮಾನಸಿಕ ವಿಚಾರಗಳನ್ನು ಬೆಳೆಸುವುದರಲ್ಲಿ ಪ್ರಯೋಜನಕಾರಿಯಾಗುವುವು ಮತ್ತು ಅವರಲ್ಲಿ ಹೊಸ ಹೊಸ ವಿಚಾರಗಳನ್ನು ತುಂಬಿಸಿ ದೇಶದ ವಿದ್ಯಾಭ್ಯಾಸದ ತರಗತಿಯನ್ನು ಅಭಿವೃದ್ಧಿಗೊಳಿಸುವ ಹೊಸ ವಿಷಯಗಳ ಕಡೆಗೆ ಗಮನವನ್ನು ಸೆಳೆಯುವವು.

ಒಟ್ಟಾರೆ ಮೇಲೆ ಈ ಪ್ರದರ್ಶನವು ಯಶಸ್ವಿಯಾಗುವಂತೆ—ಅದು ಯಶಸ್ವಿಯಾಗುವದು ನಿಸ್ಸಂದೇಹ—ಸಾಧ್ಯವಾದ ಪ್ರಯತ್ನಗಳೆಲ್ಲವೂ ಮಾಡಲಾಗಿವೆಯೆಂದು ನಾನು ಹೇಳುವಾಗ, ನೀವು ನನ್ನೊಡನೆ ಒಪ್ಪುವಿರೆಂದು ನಾನು ನಿಶ್ಚಿತನಾಗಿದ್ದೇನೆ, ಅಲ್ಲದೆ ನೀವು ಹೋಗಿ ಪ್ರತಿಯೊಂದನ್ನೂ ನಿಮ್ಮಷ್ಟಕ್ಕೆ ನೋಡಲು ನನ್ನಂತೆಯೇ ಕುತೂಹಲಿಗಳಾಗಿರುವಿರೆಂದು ಭಾವಿಸುತ್ತೇನೆ. ಈ ಪ್ರದರ್ಶನವನ್ನು ಏರ್ಪಡಿಸಿದವರು ಅಪ್ಪೊಂದು ಶ್ರಮವಹಿಸಿ ತಮ್ಮ ಕಾರ್ಯವನ್ನು ನೆರವೇರಿಸಿರುವದರಿಂದ ಅವರನ್ನು ಪ್ರಶಂಸಿಸುವಾಗ ನೀವೂ ನನ್ನೊಡನೆ ಸೇರಲು ಇಷ್ಟಪಡುವಿರಿ. ಈ ಮೂರನೇ ಜಿಲ್ಲಾ ಶಿಕ್ಷಣಪ್ರದರ್ಶನವನ್ನು ತೆರೆಯುವದರಲ್ಲಿ ನನಗೆ ತುಂಬಾ ಸಂತೋಷವಾಗುತ್ತದೆ. ಮತ್ತಿದಕ್ಕೆ ನಿಸ್ಸಂದೇಹವಾಗಿ ದೊರಕಬೇಕಾಗಿರುವ ಯಶಸ್ಸನ್ನು ಆಶಿಸುತ್ತೇನೆ.

ಹೀಗೆಂದು ಭಾಷಣವನ್ನಿತ್ತು ನಮ್ಮ ಜನಪ್ರಿಯ ಕಲೆಕ್ಟರರವರು ಪ್ರದರ್ಶನವನ್ನು ತೆರೆಯುತ್ತಲೆ ಡಿ. ಬೋ. ಅಧ್ಯಕ್ಷರಾದ ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಗಡೆಯವರೂ, ಜಿಲ್ಲಾ ವಿದ್ಯಾಧಿಕಾರಿಗಳಾದ ಮಿ. ಯು. ಕಣ್ಣಪ್ಪನವರೂ ಅವರನ್ನು ಕರಕೊಂಡು ಹೋಗಿ ಪ್ರದರ್ಶನವನ್ನೆಲ್ಲಾ ತೋರಿಸಿದರು. ಆವರು ಇದನ್ನೆಲ್ಲಾ ನೋಡಿ ತೆರಳುವಾಗ ಬೋಯರ್ಸ್ ಸ್ಕೌಟ್ ದಳವು ಜಯಜಯಕಾರವನ್ನು ಮಾಡಿತು.

WANTED

A first class Stenographer for European Office in Mangalore must have previous experience and good knowledge of English. Write with full particulars with Copies of testimonials to Box No. 20, C/o Kanteerava.

ಇನ್ನು ಎರಡು ವಾರಗಳು ಮಾತ್ರ

॥ ಶ್ರೀ ರಾಜರಾಜೇಶ್ವರೀ ಪ್ರಸೀದ ॥

ಸಾಂತ್ಯ ಸಾಮ್ರಾಜ್ಯನಾಟಕ ಮಂಡಲಿ, ಮೈಸೂರು

ಮಂಗಳೂರು ಮೈದಾನದಲ್ಲಿ ನೂತನವಾಗಿ ಕಟ್ಟಿರುವ ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ. 19-1-37ನೆ ಮಂಗಳವಾರ ರಾತ್ರಿ 9-30 ಗಂಟೆಗೆ **'ಆಶಾಪಾಶ'**

ತಾ. 21-1-37ನೆ ಗುರುವಾರ ರಾತ್ರಿ 9-30 ಗಂಟೆಗೆ **'ಮನ್ಮಥವಿಜಯ'**

ತಾ. 23-1-37ನೆ ಶನಿವಾರ ರಾತ್ರಿ 9-30 ಗಂಟೆಗೆ

'ವಿರಾಟಪರ್ವ'

ಎಂಬ ನಾಟಕಗಳನ್ನು ಪ್ರದರ್ಶಿಸುವರು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಸವಿನಯ ಪ್ರಾರ್ಥನೆ.

ಯಂ. ವಿ. ಸುಬ್ಬಯ್ಯ ನಾಯಡು, ಆರ್. ನಾಗೇಂದ್ರ ರಾವ್, } ಪ್ರೊಪ್ರೈಟರ್ಸ್.

ಕೀ ಬ್ರಾಂಡ್ ಪನ್ನೀರು



ಉತ್ಸವಾದಿ ಸಂತೋಷಕಾಲದಲ್ಲಿಯೂ, ವಿಶಾಯಿಗಳಿಗಾಗಿಯೂ, ನೇತ್ರಬಿಂದುಗಳಿಗಾಗಿಯೂ ಪುಡಿಯೊಡನೆ ಮಕ್ಕಳ ಮುಖದ ಮೊಡವೆಗಳ ಮೇಲಿನ ಲೇಪಕ್ಕಾಗಿಯೂ, ಇನ್ನೂ ಹಲವು ಸಂದರ್ಭಗಳಲ್ಲಿಯೂ ಕೀ ಬ್ರಾಂಡ್ ಪನ್ನೀರನ್ನು ಉಪಯೋಗಿಸಲಾಗುತ್ತಿದೆ. ಏಕೆಂದರೆ ಅದು ಅತ್ಯಂತ ಉತ್ಕೃಷ್ಟ ಸಾಧನಗಳುಳ್ಳ ಗುಲಾಬೀ ಹೂವುಗಳಿಂದ ಸಿದ್ಧವಾಗಿದೆ. ಇದರ ಉತ್ಕೃಷ್ಟ ಗುಣಗಳಿಗಾಗಿ, ಬೆನಾರಸ್ ಮತ್ತೂ ಸೂರತ್ತಿನ ವಸ್ತುಪ್ರದರ್ಶನಗಳಲ್ಲಿ ಬಂಗಾರದ ಮೆಡಲುಗಳೂ ಸರ್ಟಿಫಿಕೇಟುಗಳೂ ಸಿಕ್ಕಿವೆ.

ಯಾವತ್ತು ಪ್ರಾಮುಖ್ಯ ಸಾಹುಕಾರರಲ್ಲಿಯೂ ಸಿಕ್ಕುವುದು.

Manufacturers:—

A. S. ATTARWALLA & SONS,
160, Abdul Rehman Street, Bombay, 3.

"ಕೀ ಬ್ರಾಂಡ್ ಪನ್ನೀರ"ನ್ನೇ ಕೊಳ್ಳಲು ಒತ್ತಾಯಪಡಿಸಿರಿ.

Canara Bank Ltd., Mangalore.

NOTICE

Is hereby given that under Section 37 of the Indian Companies Act No. VII of 1913, the Register of Members of the bank will be closed from Monday the 25th January 1937 to Saturday the 13th February 1937 (both days inclusive).

ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ನೋಟೀಸು.

1913ನೇ ಇಸವಿಯ ನಂಬ್ರ 7ನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಈ ಬೇಂಕಿನ ಮೆಂಬರರ ರಿಜಿಸ್ಟರ 1937ನೇ ಇಸವಿ ಜನವರಿ ತಾ. 25ನೇ ಸೋಮವಾರದಿಂದ 1937ನೇ ಇಸವಿ ಫೆಬ್ರವರಿ ತಾ. 13ನೇ ಶನಿವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವುವು.

By Order,

Office of the Bank, Bunder, Mangalore, Date 15-1-1937. } P. Sarvotham Nayak, *General Manager.*

ಸಮಾಚಾರದ ಮಧ್ಯ ವಾತಾಗೇಹ.

ಸಿಮೆಂಟಿನ ಮತ್ತು ಕೊಂಕ್ರೀಟಿನ ವಿವಿಧೋಪಯೋಗವಿಷಯಿಕ ಅನುಭವವಿಜ್ಞಾನಗಳನ್ನು ಅರಿಯಿಸುವ ಪ್ರಾಮುಖ್ಯ ಗೇಹವಾಗಿ **ದಿ ಕೊಂಕ್ರೀಟ್ ಎಸೋಸಿಯೇಷನ್ ಒಫ್ ಇಂಡಿಯಾ** ಎಂಬ ಸಂಸ್ಥೆಯೊಂದನ್ನು ಏರ್ಪಡಿಸಿಯಿದೆ.

ಅನುಭವಸಿದ್ಧವಾದ ಈ ಯಥಾರ್ಥಜ್ಞಾನವು ಎಸೋಸಿಯೇಷನಿನ ಮುಖಾಂತರ ಜವಾಬುದಾರಿಯುಳ್ಳ ಉದ್ಯೋಗಸ್ಥರ ಇಂಜಿನಿಯರರ ಸ್ಥಪತಿಗಳ ಮತ್ತು ಸರ್ವೇಯರರ ಕೈಸೇರಲಿರುವುದು.

ನಿಮಗಾಗಿ ಕೊಂಕ್ರೀಟಿನಿಂದ ಮಹತ್ತಮ ಉಪಯೋಗವನ್ನು ಒದಗಿಸಿಕೊಡುವುದನ್ನೇ ಮುಖ್ಯ ಧ್ಯೇಯವಾಗಿಟ್ಟು ಕೊಂಡ ಯೋಗ್ಯವಂತರಾದ ಇಂಜಿನಿಯರರ ಸಿಬಂದಿಯೇ ಎಸೋಸಿಯೇಷನಿನ ಕೆಳಗಿದೆ. ನೀವು ಅಪೇಕ್ಷಿಸಿದರೆ ಅವರು ಬಂದು ಬೇಕಾದ ಕೊಂಕ್ರೀಟು ವಿಷಯಗಳನ್ನು ಚರ್ಚಿಸಿ, ಅನುಭವ ಸಾಲದೆಂದಾದರೆ ಇನ್ನೂ ಪ್ರಮಾಣಿಸಿ ತಿಳಿಸುವರು.

ಇಡಿ ಉದ್ದಿಮೆಯ ಪ್ರಾತಿನಿಧ್ಯವು ಎಸೋಸಿಯೇಷನಿಗಿದೆಯಾಗಿ ನಿಮಗೆ ಕೊಂಕ್ರೀಟು ಯಾವ ಉಪಯೋಗಕ್ಕೆ ಬೀಳಬೇಕೋ ಅದಕ್ಕೆ ಸಂಬಂಧಿಸಿದ ಹಸ್ತಕಗಳನ್ನು ಅದು ಹೊರಪಡಿಸುತ್ತಿರುವುದು. ಪ್ರವೃತ್ತಿಸುವ ಪ್ರತಿ ಇಂಜಿನಿಯರೂ ಸ್ಥಪತಿಯೂ ಈ ಸೇವೆಯನ್ನು ಸ್ವೀಕರಿಸಬೇಕು. ಇದರಿಂದ ಭಾರತೀಯ ಸಿಮೆಂಟು ಪ್ರವೃತ್ತಿಯು ನಿಮಗೆಷ್ಟು ಸಹಾಯ ಮಾಡಲಿಚ್ಛಿಸುವುದೆಂಬುದು ಇದರಿಂದ ವ್ಯಕ್ತವಾಗುವುದು.

ಲಾಭಕ್ಕೆ ದುಡಿಯಬಾರದೆಂದು ಎಸೋಸಿಯೇಷನಿನ ಮೆಮೊರೆಂಡಮಿನಲ್ಲಿ ಪ್ರತ್ಯಕ್ಷವಿದೆ.

For further particulars write to:

THE CONCRETE ASSOCIATION OF INDIA.

BOMBAY:	Head Office:	Forbes Building, Home Street, Fort.
CALCUTTA:		12, Mission Row.
MADRAS:		Bharat Building, Mount Road.
LAHORE:		Oriental Buildings, The Mall.
BANGALORE:		Andrew's Building, No. 2, South Parade.

ಕೊಂಕ್ರೀಟು—ಆಧುನಿಕ ಮಂದಿರೋಪಕರಣ.

ನಮ್ಮ ಬೆಲೆಯಿಲ್ಲದ ಗ್ರಂಥಮಾಲೆಯ ಪಟ್ಟಿ ಬೇಕೆಂದಾದರೆ, ಈ ಜಾಹೀರಾತನ್ನು ಕತ್ತರಿಸಿ, K. M.—3, ಟಪ್ಪಾಲ್ ಪೆಟ್ಟಿಗೆ 312, ಮದ್ರಾಸು, ಈ ವಿಳಾಸಕ್ಕೆ ಬರೆದು ಕೇಳಿರಿ.

ಸಾಲಿಗ್ರಾಮಪುರಾಣವು.

(ಲೇಖಕ:—ಶ್ರೀ. ಏ. ಶಿವರಾಮಯ್ಯ.)

ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ಶೌನಕಾದಿ ಋಷಿಗಳು ಸಹ್ಯಾದ್ರಿ (ಪಶ್ಚಿಮ ಘಟ್ಟ) ಪ್ರಾಂತ್ಯದಲ್ಲಿ ಸಂಚರಿಸುತ್ತಾ ವೇಲಾವನ (ಕೂಟಗ್ರಾಮ)ವೆಂಬಲ್ಲಿಗೆ ಬಂದರು. ಆಗ ಅಲ್ಲಿ ವಸಿಷ್ಠನೆಂಬ ಒಬ್ಬ ಋಷಿಯು ತಪವನ್ನಾಚರಿಸುತ್ತಿದ್ದು ಬಂದ ಅತಿಥಿಗಳನ್ನು ಯಥಾನ್ಯಾಯವಾಗಿ ಸತ್ಕರಿಸಿ, ಕ್ಷೇಮಕುಶಲಗಳನ್ನು ವಿಚಾರಿಸಿ ಕುಳಿತಿರುವಾಗ ಅವರ ಸಂಗಡ ಬಂದಿದ್ದ ಸೂತನನ್ನು ಕುರಿತು ವಸಿಷ್ಠನು 'ಎಲೈ ಮಹರ್ಷಿಯೇ, ಈ ಸ್ಥಳಕ್ಕೆ ಸವಿಶಾಪವಾಗಿ ಮೂರು ಕ್ಷೇತ್ರವಿರುವುದು. ಅವುಗಳ ರಹಸ್ಯವನ್ನು ವಿಸ್ತರಿಸೆ'ನ್ನಲು ಸೂತನು, ಕೋಟೀಶ್ವರ ಕ್ಷೇತ್ರವನ್ನೂ, ಮಧುವನವೆಂಬಲ್ಲಿ ಪರಮೇಶ್ವರನು ಋಷಿಗಳಿಗಾಗಿ ಕುಂಭದಲ್ಲಿ ಜನಿಸಿದ 'ಕುಂಭಕಾಶಿ' ಕ್ಷೇತ್ರವನ್ನೂ ವರ್ಣಿಸಿ, ತರುವಾಯ, ಸೀತಾನದಿಗೂ ಮಧುವನಕ್ಕೂ ಮಧ್ಯೇ ಮಹಾವಿಷ್ಣುವಿನ ಸ್ವಯಂಜಾತವಾದ ನೃಸಿಂಹಕ್ಷೇತ್ರದ ವಿಷಯವಾಗಿ ವರ್ಣಿಸಿದುದೇನೆಂದರೆ:—

'ಪೂರ್ವದಲ್ಲಿ ನಾರದ ಋಷಿಯು ತೀರ್ಥಯಾತ್ರೆಗಾಗಿ ಲೋಕವನ್ನೆಲ್ಲಾ ಸಂಚರಿಸಿ 'ಕೂಟಗ್ರಾಮ'ಕ್ಕೆ ಬರುತ್ತಿರುವಾಗ ಅಲ್ಲಿ ಅನೇಕ ಋಷಿಗಳು ಗುಂಪುಗುಂಪಾಗಿ ತಪವನ್ನಾಚರಿಸುತ್ತಿದ್ದುದನ್ನು ಕಂಡು ನಾರದನೂ ಅವರ ನಡುವೆ ತಪಸ್ಸಿಗೆ ತೊಡಗಿದನು. ಆಗ ಭೂಮ್ಯಾಕಾಶಗಳಲ್ಲಿಯೂ ಮಹತ್ತರವಾದ ಕಲಕಲವುಂಟಾಗಿ, ಪ್ರಚಂಡವಾದ ಬಿರುಗಾಳಿಯು ಬೀಸತೊಡಗಿ ಧೂಳು ಕವಿದುಕೊಂಡು, ಮೃಗಪಕ್ಷಿಗಳೆಲ್ಲಾ ವಿಕಾರಧ್ವನಿ ಮಾಡುತ್ತಾ ದಿಕ್ಕುದಿಕ್ಕಿಗೆ ಓಡತೊಡಗಿದವು. ಆಗ ಆಕಾಶದಲ್ಲಿ ದಿವ್ಯವಾದ ಅಶರೀರವಾಕ್ಯವು 'ಎಲ್ಲೈ ಋಷಿಗಳಿರಾ, ಇಲ್ಲೇ ಸವಿಾಪದ ಅಶ್ವತ್ಥವೃಕ್ಷದ ಕೋಟರದಲ್ಲಿ ನೃಸಿಂಹಮೂರ್ತಿಯ ಪುರಾತನ ವಿಗ್ರಹವೊಂದು ಅಡಗಿರುವುದು. ಸಾಲಿಗ್ರಾಮಶಿಲೆಯಿಂದ ನಿರ್ಮಿಸಲ್ಪಟ್ಟ ಆ ವಿಗ್ರಹವನ್ನು ನಾರದನು ಪ್ರತಿಷ್ಠೆ ಮಾಡಲಿ' ಎಂದು ಹೇಳಿ ಅಡಗಿ ಹೋಯಿತು. ಆಗ ನಾರದನು ಭಕ್ತಿಪೂರ್ವಕವಾಗಿ ಆ ಸ್ಥಳಕ್ಕೆ ಹೋಗಿ ನೃಸಿಂಹವಿಗ್ರಹವನ್ನು ತಂದು ಪ್ರತಿಷ್ಠೆ ಮಾಡಿ ಉಭಯಪಾರ್ಶ್ವಗಳಲ್ಲಿಯೂ ಶಂಖ, ಚಕ್ರವೆಂಬೆರಡು ತೀರ್ಥಗಳನ್ನು ನಿರ್ಮಿಸಿದನು.

ವಿಗ್ರಹದ ಸ್ವರೂಪ—ಎಡಗಾಲನ್ನು ಯೋಗಾಸನಕ್ಕೆ ಸರಿಯಾಗಿ ಮಡಚಿ, ಆ ಮೊಳಕಾಲ ಮೇಲೆ, ಶಂಖಪಾಣಿಯಾದ ಎಡಹಸ್ತವನ್ನು ಇರಿಸಿದ್ದಾಗಿಯೂ, ನಿಟ್ಟುಗಿಟ್ಟಿರುವ ಬಲ ಮೊಳಕಾಲ ಮೇಲೆ ಚಕ್ರಪಾಣಿಯಾದ ಬಲಹಸ್ತವನ್ನು ಇಟ್ಟಿರುವುದಾಗಿಯೂ, ದಕ್ಷಿಣಕ್ಕೆ ಚಕ್ರತೀರ್ಥ ಮತ್ತು ಉತ್ತರಕ್ಕೆ ಶಂಖತೀರ್ಥ ಇವುಗಳ ನಡುವೆ ಸಾಲಿಗ್ರಾಮಶಿಲೆಯಿಂದ ನಿರ್ಮಿಸಿ ಸ್ಥಾಪಿಸಲ್ಪಟ್ಟಿದ್ದಾಗಿಯೂ ಇರುವುದು.

ನೃಸಿಂಹವಿಗ್ರಹೋತ್ಪತ್ತಿ—ಮಹಾವಿಷ್ಣುವು ಹಿರಣ್ಯಕಶಿಪುವಿನ ವಧಾನಂತರ ದೇವತೆಗಳನ್ನೆಲ್ಲಾ ಕರೆದು, 'ಭೂಲೋಕದಲ್ಲಿ ಶಂಖ, ಚಕ್ರಗಳೆಂಬೆರಡು ತೀರ್ಥಗಳ ಬಳಿಯಲ್ಲಿ ಲಕ್ಷ್ಮೀ ಭೂದೇವಿಯರು ನನಗಾಗಿ ತಪವನ್ನಾಚರಿಸುತ್ತಿರುವರು. ಅವರ ಮಧ್ಯದಲ್ಲಿ ನಾನು ಶಾಂತರೂಪದಿಂದ ನೆಲಸಿಕೊಂಡಿರುವೆನು. ನೀವು ಆ ಎಡೆಗೆ ಹೋಗಿರೆ'ಂದು ಆಜ್ಞಾಪಿಸಲು ಬ್ರಹ್ಮಾದಿಗಳು ಹೊರಟು ಆ ಸ್ಥಳವನ್ನು ಹುಡುಕುತ್ತಾ ಬರುವಾಗ ಈಗಿನ ಸಾಲಿಗ್ರಾಮದಲ್ಲಿ ಶಂಖತೀರ್ಥ, ಚಕ್ರತೀರ್ಥಗಳಿರುವುದನ್ನು ಕಂಡು, ಬ್ರಹ್ಮನು ವಿಶ್ವಕರ್ಮನಿಂದ, ಶಾಂತಸ್ವರೂಪದ ನೃಸಿಂಹವಿಗ್ರಹವನ್ನು ಮಾಡಿಸಿ ಪ್ರತಿಷ್ಠಿಸಿ ಪೂಜಿಸಿದನು.

ಶಂಖತೀರ್ಥ-ಚಕ್ರತೀರ್ಥೋತ್ಪತ್ತಿ—ಮಹಾವಿಷ್ಣುವಿನ ಕೈಯಲ್ಲಿರುವ ಶಂಖ-ಚಕ್ರಗಳೆಂಬ ಆಯುಧಗಳನ್ನು ನೋಡಿ ಭಯಗ್ರಸ್ತರಾದ ಲಕ್ಷ್ಮೀ-ಭೂದೇವಿಯರಿಗೆ ಅಭಯಪ್ರದಾನವನ್ನು ಮಾಡಿ, ಆ ಶಂಖ-ಚಕ್ರಗಳನ್ನು ಭೂಲೋಕಕ್ಕೆ ಕಳುಹಿಸಿ ಅಲ್ಲಿ ತೀರ್ಥವಾಗಿರುವಂತೆ ನಿಯಮಿಸಿದನು. ಇವುಗಳಲ್ಲಿ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ನೃಸಿಂಹದರ್ಶನವನ್ನು ಮಾಡುವುದರಿಂದ ಮಹತ್ಫಲವಿರುವುದಾಗಿ ಸ್ಥಳಪುರಾಣದಲ್ಲಿ ಹೇಳಿದೆ.

ಕ್ಷೇತ್ರದ ಹೆಸರು—ಸಾಲಿಗ್ರಾಮಶಿಲೆಯಿಂದ ನಿರ್ಮಿಸಲ್ಪಟ್ಟ ನೃಸಿಂಹವಿಗ್ರಹವಿರುವುದರಿಂದ ಸಾಲಿಗ್ರಾಮವೆನ್ನುತ್ತಲೂ, ಮಹಾಗಣಪತಿಯು ಇಲ್ಲಿ ಆವಿರ್ಭವಿಸಿದುದರಿಂದ 'ಗಜಪುರ'ವೆನ್ನುತ್ತಲೂ ಈ ಕ್ಷೇತ್ರಕ್ಕೆ ಹೆಸರುಗಳಿರುವವು.

ಗಣಪತಿಯಾವಿರ್ಭಾವ, ಮಯೂರವರ್ಮ, ಚಂದ್ರಾಂಗದ, ಲೋಕಾದಿತ್ಯರ ಚರಿತ್ರೆಗಳು—ಪೂರ್ವದಲ್ಲಿ ದ್ವಾಪರಯುಗಾಂತ್ಯದಲ್ಲಿ ಈ ದೇಶವನ್ನು ಚಂದ್ರವಂಶದ ರಾಜರೂ (ಈ ವಂಶಾವಳಿಯಲ್ಲಿ ತಪ್ಪುಗಳಿವೆ. ಅವರು ಆಳಿದ ಸಂವತ್ಸರಗಳಲ್ಲಿಯೂ ತಪ್ಪುಗಳು ಕಂಡುಬಂದುದರಿಂದ ಇಲ್ಲಿ ಸೇರಿಸಲಿಲ್ಲ.) ನಂದರೂ, ಬಾಹ್ಲಿಕರೂ ಮೌರಿವಂಶದವರೂ, ಕದಂಬರಾಜರೂ ಕ್ರಮವಾಗಿ ಆಳಿದ ಮೇಲೆ ವಸುರಾಜನು ಜಯಂತಿನಗರದಲ್ಲಿ ಪಟ್ಟಕ್ಕೆ ಬಂದನು. ಈ ವಸುರಾಜನ ಮಗಳಲ್ಲಿ ಮಯೂರವರ್ಮನು ಹುಟ್ಟಿದನು. ಈತನ ಬಾಲ್ಯದಲ್ಲಿಯೇ ತಂದೆ ತೀರಿಹೋಗಿ, ಶತ್ರುಗಳು ರಾಜ್ಯವನ್ನಾಕ್ರಮಿಸಲು ಇವನ ತಾಯಿಯು ಕೂಸನ್ನು ಎತ್ತಿಕೊಂಡು ಶುಕ್ತಿಮತಿನದೀ(ಇದು ಕುಂದಾಪುರ ತಾಲೂಕಿನಲ್ಲಿ ಶಂಕರನಾರಾಯಣದ ಹತ್ತರ ಹರಿಯುವುದು)ತೀರಕ್ಕಾಗಿ ಬಂದಳು. ಅಲ್ಲಿ ಬಹು ಕಷ್ಟದಿಂದ ಜೀವನ ಮಾಡಿಕೊಂಡಿರಲು, ವಸಿಷ್ಠನೆಂಬ ಒಬ್ಬ ಬ್ರಾಹ್ಮಣನು ಕೂಸನ್ನು ನೋಡಿ ಉಪನಯನಾದಿಕರ್ಮಗಳನ್ನೂ, ವಿದ್ಯಾಭ್ಯಾಸವನ್ನೂ ಮಾಡಿಸಿ, ತೌಳವ, ಕೇರಳ, ರಾಜ್ಯಗಳ ಧೊರೆಯಾಗುವಂತೆ ಅತನಿಗೆ ಸಹಾಯಮಾಡಿದನು. ಒಂದು ದಿನ ಮಯೂರವರ್ಮನು ಒಡ್ಡೋಲಗದಲ್ಲಿ ಕುಳಿತಿರುವಾಗ, ಕಾಶ್ಯಪನೆಂಬ ಬ್ರಾಹ್ಮಣನು ತೀರ್ಥಯಾತ್ರೆಯನ್ನು ಮಾಡುತ್ತಾ ಅವನಿದ್ದಲ್ಲಿಗೆ ಬಂದು, ಉತ್ತಮ ಕುಲದ ಬ್ರಾಹ್ಮಣರನ್ನು ತಂದು ನಿನ್ನ ರಾಜ್ಯದಲ್ಲಿ ನಿಲ್ಲಿಸಿಕೊಳ್ಳಬೇಕೆಂದು ಉಪದೇಶಮಾಡಿ ಹೋದನು. ಆಗ ಮಯೂರವರ್ಮನು ದಕ್ಷಿಣ ಇಂಡ್ಯಾದ ಅಹಿಚ್ಛತ್ರಕ್ಕಾಗಿ ಹೋಗಿ ಅಲ್ಲಿ ಬೌದ್ಧ ವಿಜಯಕ್ಕಾಗಿ ಕೂಡಿದ್ದ ವಿಪ್ರವರ್ಯರನ್ನು ಕಂಡು, ಪ್ರಾರ್ಥಿಸಿ ಕರೆತಂದು ತನ್ನ ರಾಜ್ಯದಲ್ಲಿ ವಿಸ್ತರಿಸಿದನು. ಮಯೂರವರ್ಮನು ಕಾಲವಾದ ಮೇಲೆ ಬ್ರಾಹ್ಮಣರೆಲ್ಲಾ ರಾಜ್ಯದಲ್ಲಿ ವ್ಯವಸ್ಥೆಯಿಲ್ಲದುದರಿಂದ ಸ್ವಸ್ಥಾನಕ್ಕೇ ಹೊರಟುಹೋದರು. ಆ ಮೇಲೆ ಅವನ ಕುಮಾರ ಚಂದ್ರಾಂಗದನು ಧೊರೆಯಾಗಿ ಬ್ರಾಹ್ಮಣರನ್ನು ತಿರಿಗಿ ಕರೆತಂದನು. ಅವನೂ ಸ್ವರ್ಗಸ್ಥನಾಗಿ ಅವನ ಮಗ 'ಲೋಕಾದಿತ್ಯ'ನೆಂಬವನು ಚಿಕ್ಕವನಿರುವಾಗ ಹುಬ್ಬಾಸಿಕನೆಂಬ ಹೊಲೆಯನು ರಾಜ್ಯವನ್ನಾಕ್ರಮಿಸಿಕೊಂಡು ಪ್ರಜಾಕಂಟಕನಾಗಲು ಚಂದ್ರಾಂಗದನು ಕರೆತಂದಿದ್ದ ಬ್ರಾಹ್ಮಣರೆಲ್ಲಾ ತಿರಿಗಿ ಸ್ವಸ್ಥಾನಕ್ಕೆ ಹೊರಟು ಹೋದರು. ಇತ್ತ ಲೋಕಾದಿತ್ಯರಾಯನು ಪರಾಶರನೆಂಬ ಬ್ರಾಹ್ಮಣನಿಂದ ವಿದ್ಯಾಭ್ಯಾಸವನ್ನು ತೀರಿಸಿಕೊಂಡು ಗೌಡದೇಶದ ಅರಸನಾದ ಚಂಡಸೇನನ ಸಹೋದರಿ ಕನಕಾವತಿಯನ್ನು ವಿವಾಹ ಮಾಡಿಕೊಂಡು ಚಂಡಸೇನನ ಸಹಾಯದಿಂದ ಹುಬ್ಬಾಸಿಕನನ್ನು ಗೆದ್ದು ಪುನಃ ಸ್ವರಾಜ್ಯವನ್ನು ಪಡೆದನು. ತಿರಿಗಿ ಲೋಕಾದಿತ್ಯನು ಅಹಿಚ್ಛತ್ರಕ್ಕೆ ಹೋಗಿ ಮಹಾವಿಷ್ಣುವಿನ ಅಂಶೀಭೂತನಾಗಿ, ಬೌದ್ಧರನ್ನು ವಾದದಲ್ಲಿ ಗೆದ್ದು ಪ್ರಖ್ಯಾತನಾದ ಭಟ್ಟಾಚಾರ್ಯನೆಂಬ ಬ್ರಾಹ್ಮಣಶಿಖಾಮಣಿಯನ್ನೂ ಇನ್ನೂ ಹಲವು ಮಂದಿ ಬ್ರಾಹ್ಮಣರನ್ನೂ ಕರೆತಂದನು.

(ಮುಂದುವರಿಯುವುದು.)

Weldons have transferred their rights of the South Kanara Milk Supply Society to Mr. M. L. S. Kumble from the 1st of January 1937. Utensils, furniture &c will be returned to Weldons' if Mr. M. L. S. Kumble discontinues.

S. S. KARANJE,
For Weldon & Co., Mangalore.

ಒಂದು ಮನೋರಂಜಕವಾದ ಅಡ್ಡ ಕಸುಬು

ಒಂದು ಆದರ್ಶಪ್ರಾಯ ಕೆಮೆರಾ!

ರೋಮಾಂಚವನ್ನು ಉಂಟುಮಾಡುವ, ಸಜೀವವಾದ ಮತ್ತೂ ವಿನೋದಮಯವು ಘಟನೆಗಳನ್ನು ನೀವು ಅತ್ಯುತ್ಕೃಷ್ಟವಾದ ಭಾವಚಿತ್ರಗಳಲ್ಲಿ ಹಿಡಿದಿಡದಿದ್ದರೆ ಇವುಗಳ ಸ್ಮರಣೆಯು ಸ್ವಲ್ಪ ಸಮಯದಲ್ಲಿ ಮಾಸಿ ಹೋಗಲೇ ಬೇಕು. ನೀವು ನಿಮ್ಮ ಜೀವನದ ಸುಖಮಯವಾದ ಮತ್ತೂ ಮನೋಹರವಾದ ಯಾವತ್ತು ಸಂದರ್ಭವಿಶೇಷಗಳ ಚಾಖಲೆಗಳನ್ನು ಎಷ್ಟೋ ಸುಲಭದಲ್ಲಿ ಮಾಡಿಕೊಳ್ಳಬಲ್ಲಿರಿ—ಏಕೆಂದರೆ, ನೀವು ಬರೇ 3—12—0ರ ಅಲ್ಪ ಬೆಲೆಗೇ ಕೋಡಕ್ ತಯಾರಿಯ ಒಂದು ಕೆಮೆರಾವನ್ನು ಪಡೆಯಬಲ್ಲಿರಿ. ಅವನ್ನು ನಿಮ್ಮ ಕೋಡಕ್ ವ್ಯಾಪಾರಿಯಲ್ಲಿ ನೋಡಿರಿ—ಆ ವಿಶೇಷವಾದ ಬೆಲೆಯನ್ನು ಕಂಡು ನಿಮಗೆ ಆಶ್ಚರ್ಯವಾಗದಿರದು.



ಒಂದರಲ್ಲಿಯೇ ಎರಡು ಕೆಮರಾಗಳಿರುವುದಕ್ಕೆ ರೂ. 4/8/- ನಂಬ್ರ 2 ಪೊರ್ಟ್ರೈಟ್ "ಬ್ರೌನಿ" ಮೊಡೆಲ್ ಬಿ. ಇದರ ಲೀವರನ್ನು ಒತ್ತಿದ ಮಾತ್ರದಿಂದಲೇ ಎರಡನೆಯ ಲೆನ್ಸ್ ಅಂತಿಮಕಾರ್ಯದ "ಷಾಟ್"ಗಳಿಗಾಗಿ, ತನ್ನ ಸ್ಥಾನಕ್ಕೆ ಜಾರುತ್ತದೆ. "ಬ್ರೌನಿ"ಗಳು ಕೋಡಕಿನಿಂದ ಮಾತ್ರವೇ ತಯಾರಿಸಲ್ಪಡುತ್ತವೆ. ಅತ್ಯುತ್ತಮ ಫಲಿತಾಂಶಕ್ಕಾಗಿ ಕೋಡಕ್ ಫಿಲ್ಮನ್ನೇ ತುಂಬಿಸಿರಿ.

ಕೋಡಕ್ ಲಿಮಿಟೆಡ್
(ಇಂಗ್ಲೆಂಡಿನಲ್ಲಿ ಇನ್‌ಕಾರ್ಪರೇಟ್ ಆಗಿದೆ)
ಬೊಂಬಯಿ . ಕಲ್ಕತ್ತ . ಲಾಹೋರ್ . ಮದ್ರಾಸ್

ಉತ್ತಮವಾದ ದೀಪಗಳಿಗಾಗಿ
ಉಪಯೋಗಿಸಿ
ರೇಡಿಯೋ ಮ್ಯಾಂಟಲುಗಳನ್ನೇ

ಒಂದು ಶುದ್ಧವಾದ ಹಿಂದೀ ತಯಾರಿಕೆ.



ಇದು ಮಾಡಲ್ಪಟ್ಟದ್ದು ಹಿಂದೀ ಮೂಲಧನದಿಂದ
ಹಿಂದೀಯರ ಕೈಗೆಲಸದಿಂದ
ಹಿಂದೀಯರ ಆಡಳಿತದಿಂದ.

ಎಲ್ಲೆಲ್ಲಿಯೂ ಸಿಕ್ಕುತ್ತದೆ.

ದಿ ನ್ಯಾಶನಲ್ ಮ್ಯಾಂಟಲ್ ಮೆನ್ಯುಫೇಕ್ಚರಿಂಗ್ ಕೊ.
386, ಗಿರಗಾಂ ಬ್ಯಾಕ್ ರೋಡ್,
ಬೊಂಬಾಯಿ 4.

ಸರ್ವಜನರ ಸಂಪೂರ್ಣ ಸಂತೃಪ್ತಿಯೇ ನಮ್ಮ ಧ್ಯೇಯ!
"ಮೈಸೂರು ಕೆಫೆ"
ಅತ್ಯುತ್ತಮ, ಆದರ್ಶನೀಯ ಉಪಹಾರಗೃಹ
178-179, ಚೈನಾ ಬಜಾರು ರೋಡ್, (ಹಳೆ ಆನಂದಭವನದ ಕಟ್ಟಡ.)
ಸಾವುಕಾರ ಪೇಟೆ, ಮದರಾಸು.

ಅತ್ಯಾಧುನಿಕ, ಶಾಸ್ತ್ರೀಯ ಮತ್ತು ನಿರ್ಮಲಕಾರಕ ರೀತಿಯ ಸೌಕರ್ಯಸಲಕರಣೆಗಳು.

ಹೆಂಗಸರಿಗೂ, ಫಲಾಹಾರ, ಭೋಜನಾದಿ ಕೂಟಗಳ ಏರ್ಪಾಡುಗಳಿಗೂ ಪ್ರತ್ಯೇಕ ಸ್ಥಳ ವಸತಿ ಅನುಕೂಲತೆಗಳು.

ಅನೇಕ ವರ್ಷಗಳಿಂದ ಪ್ರಖ್ಯಾತಿಹೊಂದಿದ, ಅನುಭವಸ್ಥ ಯೋಗ್ಯ ಜನರ ಮೇಲ್ವಿಚಾರಣೆಯಲ್ಲಿ ನಡೆಯುವುದು.

ಪ್ರೊಪ್ರೈಟರ್ಸ್:
ಕೆ. ಗೋಪಾಲಾಚಾರ್ ಮತ್ತು ಕೆ. ಗುರುರಾಜಾಚಾರ್.

ನಮ್ಮ ಇನ್ನಿತರ ಉಪಹಾರಭವನಗಳು

ವಿದ್ಯಾರ್ಥಿಭವನಂ, ಜಗನ್ಮೋಹನ ಪಾಲೇಸ್ ರೋಡ್, ಮೈಸೂರು.	ರೈಲ್ವೆ ಇಂಡಿಯನ್ ರಿಫ್ರೆಷ್‌ಮೆಂಟ್ ರೂಮ್ಸ್, ಮೈಸೂರು ರೈಲ್ವೆ, ಮೈಸೂರು.	ಉಡುಪಿ ಆನಂದಭವನ, ಜೂಬಿಲಿ ಕ್ಲೋಕ್ ಟವರ್ ಸ್ಕ್ವಾಯರ್, ಮೈಸೂರು.	ಕೃಷ್ಣರಾಜಸಾಗರ ರೆಸ್ಟೋರೆಂಟ್, ಬೃಂದಾವನ.

ವಿಜ್ಞಾನ ವಿಷಯ

(ವಿಜ್ಞಾನಿ)

ಅಖಿಲ ಭಾರತ ವೈಜ್ಞಾನಿಕ ಪರಿಷತ್ತಿನ ೨೪ನೇ ಅಧಿವೇಶನ.

ಅಖಿಲ ಭಾರತ ವೈಜ್ಞಾನಿಕ ಪರಿಷತ್ತಿನ ೨೪ನೇ ಅಧಿವೇಶನವು ಹೈದ್ರಾಬಾದಿನ ಉಸ್ಮಾನಿಯಾ ಯುನಿವರ್ಸಿಟಿಯವರ ಆಮಂತ್ರಣದ ಮೇರೆಗೆ ಇದೇ ತಿಂಗಳ ಮೊದಲನೇ ವಾರದಲ್ಲಿ ನೆರವೇರಿತು. ಸಮ್ಮೇಳನಕ್ಕೆ ರಾವ್ ಬಹದ್ದೂರು ಟಿ. ಎಸ್. ವೆಂಕಟ್ರಾಮಯ್ಯನವರು ಅಧ್ಯಕ್ಷರಾಗಿದ್ದರು. ಮುನ್ನೂರು ಮಂದಿ ಪ್ರತಿನಿಧಿಗಳು ಹಿಂದೂದೇಶದ ವಿವಿಧ ಪ್ರಾಂತಗಳಿಂದ ಬಂದು ಸಮ್ಮೇಳನದಲ್ಲಿ ಭಾಗವಹಿಸಿದರು. ನಿಜಾಮ ಸರಕಾರದ ಮಂತ್ರಿಗಳಾದ ಸರ್ ಅಕ್ಬರ್ ಹೈದರಿಯವರು ಸಮ್ಮೇಳನದ ಉದ್ಘಾಟನಾಸಮಾರಂಭವನ್ನು ನೆರವೇರಿಸಿ ಚಿಕ್ಕದೊಂದು ಭಾಷಣ ಮಾಡಿ, ನಿಜಾಮ ಸಾಹೇಬರು ಕಳುಹಿಸಿದ ಶುಭಸಂದೇಶವನ್ನು ಓದಿಹೇಳಿದರು. ನಿಜಾಮ ಸಾಹೇಬರ ಸಂದೇಶದ ಸಾರಾಂಶ—'ವಿಜ್ಞಾನದ ಎಲ್ಲಾ ಭಾಗಗಳಲ್ಲಿ ಸಂಶೋಧನೆಯಾಗಬೇಕೆಂದು ಪ್ರಯತ್ನಗಳು ನಡೆಯುವುದು ಶುಭಚಿಹ್ನೆಯಾಗಿದೆ. ಹಿಂದುಸ್ಥಾನವು ಅಭಿವೃದ್ಧಿ ಹೊಂದಿ ಅದರ ಯಶಸ್ಸು ಲೋಕದಲ್ಲಿ ಹರಡಬೇಕಾದರೆ ನಮ್ಮ ದೇಶದಲ್ಲಿ ವಿಜ್ಞಾನಶಾಸ್ತ್ರವು ಮುಂದುವರಿಯಬೇಕು. ವಿಜ್ಞಾನಶಾಸ್ತ್ರದ ಅಭಿವೃದ್ಧಿಕಾರ್ಯದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯವು ಇತರ ವಿಶ್ವವಿದ್ಯಾಲಯದೊಡನೆ ಸಹಕರಿಸಲು ಸಿದ್ಧವಾಗಿದೆ.'

ಸಮ್ಮೇಳನಾಧ್ಯಕ್ಷರಾದ ಶ್ರೀ. ಟಿ. ಎಸ್. ವೆಂಕಟ್ರಾಮಯ್ಯನವರು ತಮ್ಮ ಅಧ್ಯಕ್ಷಭಾಷಣದಲ್ಲಿ ಹಿಂದೂದೇಶದ ಇಂದಿನ ಮತ್ತು ಹಿಂದಿನ ಹಳ್ಳಿಗಳ ಸ್ಥಿತಿಗತಿಗಳನ್ನು ಮನದಟ್ಟಾಗುವಂತೆ ವಿವರಿಸಿ ಹೇಳಿದರು. ಇಂದು ಕೃಷಿವಿಭಾಗದಲ್ಲಿ ವಿಶೇಷ ಉತ್ಪನ್ನವಾಗುವುದಿಲ್ಲವೆಂದರು. ಹಳ್ಳಿಯ ಕೈಗಾರಿಕೆಗಳಿಗೆ ಪ್ರೋತ್ಸಾಹ ಕಡಮೆಯಾಗಿ ನಿರುದ್ಯೋಗತೆಯು ಹರಡಿದ್ದರಿಂದ ಹಳ್ಳಿಯ ಜನರು ಪಟ್ಟಣ ಸೇರುವುದರಿಂದ ಹಳ್ಳಿಯ ಕೃಷಿಕಾರ್ಯವು ಕೂಡ ಬಿದ್ದು ಹೋಯಿತೆಂದೂ, ಹಳ್ಳಿಯ ಕೈಗಾರಿಕೆಗಳಿಗೆ ಪ್ರೋತ್ಸಾಹವಿತ್ತು ಅಲ್ಲಿಯ ಜನರಿಗೆ ಅಲ್ಲಿಯೇ ಜೀವನವನ್ನು ಕಲ್ಪಿಸಿ ಕೃಷಿಕಾರ್ಯವನ್ನು ವೃದ್ಧಿಗೊಳಿಸಿದರೆ ಹಳ್ಳಿಯ ಮತ್ತು ಪಟ್ಟಣದ ಜನರು ಸುಖವಾಗಿರಬಹುದೆಂದೂ ಹೇಳಿ ಭಾಷಣವನ್ನು ಮುಕ್ತಾಯಗೊಳಿಸಿದರು.

ಭೂಮೂಪಕ ವಿಭಾಗದ(ಜಿಯೋಲಜಿಕಲ್ ಸರ್ವೆ)ರವರಾದ ಮಿ. ಲೆಸ್ಟರು ವೈಜ್ಞಾನಿಕ ಸಮ್ಮೇಳದ ಭೂಗರ್ಭ ವಿಭಾಗದ ಅಧ್ಯಕ್ಷರಾಗಿದ್ದರು. ಅವರು ಭೂಕಂಪದ ಮೂಲಕಾರಣಗಳನ್ನು ವಿವರಿಸಿ ಚರ್ಚಿಸುತ್ತಾ ಹೀಗೆಂದರು—

'ದಕ್ಷಿಣ ಹಿಂದೂದೇಶದಲ್ಲಿ ಪರ್ವತನಿರ್ಮಾಣಕಾರ್ಯವು ಎಷ್ಟೋ ಕಾಲಗಳ ಮೊದಲೇ ನಿಂತುಹೋಗಿರುವುದರಿಂದ ದಕ್ಷಿಣ ಹಿಂದೂದೇಶಕ್ಕೆ ವಿಶೇಷ ಭೂಕಂಪದ ಭಯವಿಲ್ಲ. ಉತ್ತರ ಹಿಂದೂದೇಶದ ಹಿಮಾಲಯ, ಬಲೂಚೀಸ್ತಾನ, ಬರ್ಮಾಗಳ ಪರ್ವತನಿರ್ಮಾಣವು ಆಧುನಿಕವಾದುದರಿಂದ ಅವುಗಳು ಒತ್ತುತ್ತಿವೆ. ಆದುದರಿಂದಲೇ ಈ ಪರ್ವತಪ್ರಾಂತಗಳಲ್ಲಿ ಆಗಾಗ ಭೂಕಂಪಗಳಾಗುತ್ತವೆ.

'ಹಿಂದುಸ್ಥಾನವು ಕಳೆದ ೬ ವರ್ಷಗಳಿಂದ ವಿಶೇಷ ಭೂಕಂಪಬಾಧೆಯನ್ನನುಭವಿಸುತ್ತಿದೆ. ಕಳೆದ ೬ ವರ್ಷಗಳಲ್ಲಿ ೫ ಮಹಾಭೂಕಂಪಗಳಾದುವು. ಮುಂದೆ ಭೂಕಂಪವೆಂದಾಗದುವುದೆಂದು ನಿಶ್ಚಯವಾಗಿ ಹೇಳಲಿಕ್ಕೆ ಬರುವುದಿಲ್ಲ. ಅಂತು ಉತ್ತರ ಹಿಂದೂದೇಶಕ್ಕೆ ಭೂಕಂಪದ ಬಾಧೆ ತಪ್ಪಿದ್ದಲ್ಲ. ಈ ಭೂಕಂಪದ ಉಪದ್ರವವನ್ನು ತಡೆಯುವುದು ನಮ್ಮ ದೇಶದ ದುರದೃಷ್ಟ ಮಾತ್ರವಲ್ಲ. ಜಪಾನ, ಕೆಲಿಫೋರ್ನಿಯಾ, ನ್ಯೂಝಿಲೀಂಡ್, ಇಟೆಲಿಗಳಿಗೂ ಆಗಾಗ ಭೂಕಂಪದ ಭಯವಿದ್ದೇ ಇದೆ. ಹಿಂದುಸ್ಥಾನವನ್ನು ಬಿಟ್ಟು ಉಳಿದ ದೇಶಗಳೂ ಭೂಕಂಪದ ಉಪದ್ರವದಿಂದ ತಪ್ಪಿಸಿಕೊಳ್ಳಲು ಅನೇಕ ವೈಜ್ಞಾನಿಕ ಉಪಾಯಗಳನ್ನು ಕಂಡುಕೊಂಡಿವೆ. ಇನ್ನೂ ಕೂಡ ಇತರ ಉಪಾಯಗಳನ್ನು ಹುಡುಕುತ್ತಿವೆ. ಹಿಂದುಸ್ಥಾನದಲ್ಲಿ ಮಾತ್ರ ಭೂಕಂಪದ ಉಪದ್ರವವನ್ನು ತಡೆಯಲು ವಿಶೇಷ ಉಪಾಯಗಳನ್ನು ಕಂಡುಕೊಂಡಂತೆ ತೋರುವುದಿಲ್ಲ. ಭೂಕಂಪಗಳನ್ನು ತಡೆಯಬಲ್ಲ ಭವನನಿರ್ಮಾಣಕಲೆಯು ನಮ್ಮಲ್ಲಿ ಇನ್ನೂ ಹುಟ್ಟಿಲ್ಲವೆಂದರೂ ತಪ್ಪಾಗದು.'

ಇದೇ ಸಮ್ಮೇಳನದ ಮಾನಸಶಾಸ್ತ್ರ ವಿಭಾಗದ ಅಧ್ಯಕ್ಷರಾದ ಶ್ರೀ. ಕೆ. ಸಿ. ಮುಖರ್ಜಿಯವರು 'ವ್ಯಕ್ತಿಯಲ್ಲಿ ಸಮಾಜದ ಪ್ರತೀತಿ' ಎಂಬ ವಿಷಯದ ಮೇಲೆ ಮಾತಾಡುತ್ತಾ ಹೀಗೆಂದರು—'ವ್ಯಕ್ತಿ ಮತ್ತು ಸಮಾಜಗಳನ್ನು ವಿಭಾಗ ಮಾಡಲಿಕ್ಕಾಗುವುದಿಲ್ಲ. ವ್ಯಕ್ತಿಯ ಮಾನಸಿಕ ಜೀವನದಲ್ಲಿ ಸಾಮಾಜಿಕ ಸಂಬಂಧಗಳು ಬಲವಾಗಿ ಬೇರೂರಿಬಿಟ್ಟಿವೆ. ಸಮಾಜದ ಪ್ರತೀತಿಯು ವ್ಯಕ್ತಿಯ ಮಾನಸಿಕೋನ್ನತಿಯ ತುತ್ತ ತುದಿಯೆಂದು ಹಲವರ ಮತವಾಗಿದೆ. ಆದರೆ ಅಂಥವುಗಳಿಗೆ ನಿಯಮನಿಬಂಧನೆಗಳನ್ನು ಹಾಕಲು ಬರುವುದಿಲ್ಲ. ವ್ಯಕ್ತಿಯು ಸಮಾಜದ ಒಂದು ಅಲಿಪ್ತ ಜೀವನವಾಗಿರದೆ ಸಮಾಜ ಜೀವನದ ಭಾಗ ಮಾತ್ರನಾಗಿರುವನು. ಶಿಶುವು ಜನಿಸುವಾಗ ಅದೊಂದು ವ್ಯಕ್ತಿಯಾಗಿ ಹುಟ್ಟುವುದಿಲ್ಲ. ಆ ಶಿಶುವು ಬೆಳೆಯುತ್ತಾ ಬೆಳೆಯುತ್ತಾ ಸಮಾಜದ ಮತ್ತು ಜೀವನದ ಸಂಬಂಧಗಳು ಬೆಳೆದಾಗ ಅದೊಂದು ವ್ಯಕ್ತಿಯಾಗುವುದು. ವ್ಯಕ್ತಿಯನ್ನು ಸಮಾಜದ ಸಂಸ್ಕೃತಿಯನ್ನಳೆಯುವ ಅಳತೆಗೋಲೆನ್ನಬಹುದು. ಸಾಮಾಜಿಕ ಸಂಸ್ಕೃತಿಯುಂಟಾಗಬೇಕಾದರೆ ವ್ಯಕ್ತಿಸಂಬಂಧನಿರ್ಲೇಬೇಕು. ವ್ಯಕ್ತಿಗಳು ಸಾಮಾಜಿಕ ಸಂಸ್ಕೃತಿಯ ಕೇವಲ ನಿರ್ಜೀವ ಮಾದರಿಗಳಾಗಿರದೆ ಆ ಸಂಸ್ಕೃತಿಯನ್ನು ಬೆಳೆಸುವ ಸಜೀವ ಮಾದರಿಗಳಾಗಿರಬೇಕು.

'ಕೌಟುಂಬಿಕ ಪ್ರತೀತಿಯು ಮಗುವಿನ ಮನಸ್ಸನ್ನು ತಿದ್ದಿ ಸಾಮಾಜಿಕ ಪ್ರತೀತಿಯುಂಟಾಗುವುದಕ್ಕೆ ದಾರಿ ಮಾಡುತ್ತದೆ. ಜಪಾನಿನಲ್ಲಿ ಈ ಕೌಟುಂಬಿಕ ಪ್ರತೀತಿಯು ತೀವ್ರವಾಗಿರುವುದರಿಂದಲೇ ಜಪಾನಿಗಳಲ್ಲಿ ಅತ್ಯುಜ್ಜ್ವಲ ರಾಷ್ಟ್ರಾಭಿಮಾನವು ಕಂಡುಬರುವುದು. ಇದನ್ನು ನೋಡಿದರೆ ಸಮಾಜದ ಪ್ರತೀತಿಗೆ ಕೌಟುಂಬಿಕ ಪ್ರತೀತಿಯು ಅತ್ಯವಶ್ಯವೆಂದು ಹೇಳಬರುವುದಿಲ್ಲ. ಎಷ್ಟೋ ಹಿಂದುಳಿದ ಸಮಾಜಗಳನ್ನು ನೋಡಿದರೆ ಅವರ ಕೌಟುಂಬಿಕ ಪ್ರತೀತಿಯು ಎಷ್ಟು ತೀವ್ರವಾಗಿದ್ದರೂ ಅವರಲ್ಲಿ ಸಾಮಾಜಿಕ ಪ್ರತೀತಿಯ ಲವಲೇಶವೂ ಕಂಡುಬರುವುದಿಲ್ಲ. ಹಾಗೆಯೇ ಕೌಟುಂಬಿಕ ಜೀವನವನ್ನು ಇಲ್ಲದಂತೆ ಮಾಡಿ ಮಕ್ಕಳನ್ನು ಸಿಪಾಯಿಗಳಂತೆ ಬೆಳೆಸಿದರೆ ಅವರಲ್ಲಿ ಸಮಾಜದ ಪ್ರತೀತಿಯುಂಟಾದೀತೆಂದು ಹೇಳಲಿಕ್ಕೆ ಬರುವುದಿಲ್ಲ. ಅದರ ಬದಲಾಗಿ ವ್ಯಕ್ತಿಯಲ್ಲಿ ಸಂಸ್ಕೃತಿಯ ಪ್ರತೀತಿಯೇ ಇಲ್ಲದಂತಾಗುವುದು.'

× × × × ×

ಬರುವ ವರ್ಷ ವಿಜ್ಞಾನಪರಿಷತ್ತಿನ ಇಪ್ಪತ್ತೈದನೇ ಸಮ್ಮೇಳನವು ರಜತೋತ್ಸವದೊಂದಿಗೆ ಕಲ್ಕತ್ತೆಯಲ್ಲಿ ನಡೆಯುವದೆಂದು ನಿರ್ಧರಿಸಲಾಯಿತು.

× × × × ×

ನಾವು ವಾಸಮಾಡುವ ಭೂಮಿಯು ೨೬೫ ದಿನಗಳಲ್ಲಿ ನಮಗೆ ಕಾಣುವ ಸೂರ್ಯನಿಗೆ ಒಂದು ಸುತ್ತು ಒರುತ್ತದಷ್ಟೆ. ಹೀಗೆ ಒಂದು ಸುತ್ತು ಸುತ್ತವಾಗ ನಮ್ಮ ಭೂಮಿಯು ಮೈಲು ೯೬೦,೦೦೦,೦೦೦ ಸಂಚರಿಸುತ್ತದೆ. ಇದನ್ನು ಒಂದು ಗಂಟೆಗೆ ವಿಭಾಗಿಸಿದರೆ ಭೂಮಿಯ ವೇಗವು ಗಂಟೆಗೆ ೬೬,೭೫೦ ಮೈಲುಗಳಾಗುತ್ತವೆ.

× × × × ×

ಜೀವವೆಂಬುದು ಏನಾಗಿರಬಹುದು? ಅದು ಎಲ್ಲಿಂದ ಹೇಗೆ ಉಂಟಾಗಿರಬಹುದು? ಅದರ ಪರಿಣಾಮವೇನು? ಎಂಬ ಹಲವು ಪ್ರಶ್ನೆಗಳು ಎಂತೆಂತಹವರನ್ನೂ ಮರುಳುಗೊಳಿಸುವ ಪ್ರಶ್ನೆಗಳಾಗಿವೆ. ಯಾವುದೊಂದು ಸಜೀವಿ ಪ್ರಾಣಿಯನ್ನಾಗಲೀ ವಸ್ತುವನ್ನಾಗಲೀ ಸಂಶೋಧಿಸಿದರೆ ಅದರಲ್ಲಿರುವ ಬೇರೆ ಬೇರೆ ವಸ್ತುಗಳು ಈ ಭೂಮಿಯಲ್ಲಿ ಕೂಡ ಕಾಣಬರುವುವು. ಒಂದು ಸಜೀವ ವಸ್ತುವನ್ನು ಸುಟ್ಟರೆ ಮುಖ್ಯವಾಗಿ ಅಂಗಾರಾಮ್ಲ, ಜಲಜನಕ ವಾಯು, ಅಮ್ಲಜನಕ ವಾಯುಗಳೂ, ರಂಜಕ, ಕಬ್ಬಿಣ, ಕೆಲ್ಸಿಯಂ ಮೊದಲಾದ ಲೋಹಾಂಶಗಳೂ ಕಾಣಿಸಿಗುವುವು. ನಿರ್ಜೀವ ಲೋಕದಲ್ಲಿ ಕಾಣಬಾರದ ವಸ್ತುಗಳು ಸಜೀವ ಪ್ರಾಣಿಗಳಲ್ಲಿಯೂ ಕಂಡುಬರುವುದಿಲ್ಲ. ಹೀಗಿದ್ದರೂ ಅಂಗಾರ, ಜಲಜನಕ, ರಂಜಕ, ಅಮ್ಲಜನಕಗಳನ್ನು ಯಾವ ರೀತಿಯ ಪ್ರಮಾಣದಿಂದ ಒಟ್ಟುಗೂಡಿಸಿದರೂ ಹೊಸತೊಂದು ಜೀವನನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ.

ಒಂದು ಜೀವವು ಜೀವಿಸಿ ಬೆಳೆದು ಅಭಿವೃದ್ಧಿಹೊಂದಬೇಕಾದರೆ ಆವ್ಯಜನಕ ಮೊದಲಾದ ವಸ್ತುಗಳು ಇದ್ದೇ ತೀರಬೇಕು. ಅವುಗಳಿಲ್ಲದೆ ಯಾವ ಕಾರ್ಯವೂ ಸಾಗದು. ಸಸ್ಯವರ್ಗವಾಗಲೀ ಪ್ರಾಣಿವರ್ಗವಾಗಲೀ ಮೇಲೆ ಹೇಳಿರುವ ಧಾತುಗಳಿಂದ ತುಂಬಿರುವ ಪ್ರೊಟೀನು, ಕೊಬ್ಬು ಮೊದಲಾದ ಜೀವವರ್ಧಕಗಳಿಂದಲೇ ಬೆಳೆಯುತ್ತದೆ. ಪ್ರಾಣಿಗಳಿಗೂ ಸಸ್ಯಗಳಿಗೂ ಅವುಗಳ ಕಾರ್ಯಶಕ್ತಿಯು ಪ್ರೊಟೀನು ಮತ್ತು ಕೊಬ್ಬುಗಳಿಂದಲೇ ಬರಬೇಕಾದರೂ ಪ್ರೊಟೀನು ಮತ್ತ ಕೊಬ್ಬುಗಳಿಂದ ಹೊಸ ಜೀವವನ್ನು ಸೃಷ್ಟಿಸಲಿಕ್ಕಾಗುವುದಿಲ್ಲ.

ನಿರ್ಜೀವ ಮತ್ತು ಸಜೀವ ವಸ್ತುಗಳನ್ನು ವರ್ಣಿಸುತ್ತ ಹರ್ಬರ್ಟ್ ಸ್ಪೆನ್ಸರನೆಂಬ ಮಹಾತತ್ತ್ವಜ್ಞಾನಿಯು ಹೀಗೆ ಹೇಳಿರುವನು—'ತನ್ನ ಆಂತರಿಕ ಸ್ಥಿತಿಯನ್ನು ಬಾಹ್ಯಪ್ರಪಂಚಕ್ಕೆ ಸರಿಯಾಗಿ ಹೊಂದಿಸಿ ಬರುವ ಲಕ್ಷಣವೇ ಜೀವ. ಪ್ರಪಂಚದ ಬಾಹ್ಯಸ್ಥಿತಿಯು ಬದಲಾಗುತ್ತ ಹೋದಂತೆ ಜೀವವು ತನ್ನ ಒಳಗಿನ ಸ್ಥಿತಿಗತಿಗಳನ್ನೂ ಒದಲಾಯಿಸುತ್ತದೆ. ಚಳಿ ಅಥವಾ ಗಾಳಿ ಬಂದರೆ ಗಿಡಮರಗಳು ತಮ್ಮ ಎಲೆಗಳನ್ನೆಲ್ಲಾ ಉದುರಿಸಿ ಬಿಟ್ಟು ತಮ್ಮೊಳಗಿರುವ ನೀರಿನ ಭಾಗವು ಆರಿಹೋಗದಂತೆ ಅವುಗಳನ್ನು ಕಾಪಾಡಿಕೊಳ್ಳುವುವು. ಹೊರಗಿನ ಸ್ಥಿತಿಗೆ ಹೊಂದಿಕೊಂಡು ಹೋಗುವ ಒಳಗಿನ ಜೀವದ ರಚನೆಯಲ್ಲಿ ಬದಲಾವಣೆಯಾದರೂ ಅದರ ಸ್ವಭಾವವು ಬದಲಾವಂತಿಲ್ಲ.

ಸ್ತ್ರೀರೋಗಗಳನ್ನು ನಿವಾರಿಸುವುದರಲ್ಲಿ "ಲೋಧ್ರ"ಕ್ಕಿಂತಲೂ ಗುಣಕಾರಿಯಾದ ಬೇರಾವ ಔಷಧವೂ ಇಲ್ಲ. ಅದು ಮುಟ್ಟಿನ ಅವಧಿಯನ್ನು ಕ್ರಮಗೊಳಿಸುತ್ತದೆ, ಮಿತವಾದ ಮುಟ್ಟಿನುಂಟು ಮಾಡುತ್ತದೆ, ಆತ್ಯಧಿಕವಾದ ಮುಟ್ಟಿನ ಪ್ರದರವನ್ನು ತಡೆಗಟ್ಟುತ್ತದೆ, ಮುಟ್ಟಿನ ಕಾಲದ ನೋವು, ಹೊಟ್ಟೆ ನೋವು, ಬೆನ್ನುನೋವು ಮೊದಲಾದವುಗಳನ್ನು ನಿವಾರಿಸುತ್ತದೆ, ಎಲ್ಲಕ್ಕೂ ಮೇಲಾಗಿ ಸಾಮಾನ್ಯ ಆರೋಗ್ಯವನ್ನೂ, ಶಕ್ತಿಯನ್ನೂ ವೃದ್ಧಿಗೊಳಿಸುವುದಕ್ಕೆ ಅತ್ಯುತ್ತಮೋಷಧವಾದ "ಟಾನಿಕ್" ಆಗಿರುತ್ತದೆ.

ಲೋಧ್ರ

ಗರ್ಭಾಶಯದ "ಟಾನಿಕ್"

ಪ್ರತಿಯೊಂದು ಸಂಸಾರಕ್ಕೂ ಇದು ಬೇಕಾಗಿದೆ.

ಕೇಸರಿ ಕುಟೀರಂ

ಎಗ್ಮೋರ್ :: :: ಮದ್ರಾಸ್

"CHEAPEST RATE. VALUE BACK IF DISAPPROVED DECENT, STRONG, ACCURATE & STYLISH W/WATCHES GTD 3 YEARS. ROUND NICKEL 2/14/-, RADIUM DIAL 3/12/-: GOLDEN 3/14/-. SQUARE NICKEL 4/6/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 5/8/-. P/POSTAGE 1/-EXTRA. CAT FREE ON 3. G.T.CO. 185 MANICKTOLA ST. CALCUTTA

ದಮ್ಮಿನ ಪ್ರಕಾರ ಬಹಳ ಲಾಭ

ಅದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮಾನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ಸೂರಾರು ದಮ್ಮಿನವರಿಗೆ **ಪುರೋಹಿತ ಶ್ವಾಸಹಾರಿ**ಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢನಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು.

ಎಫಿಡ್ರೀನಿನ ಗುಳಿಗೆ ಹೊಗೆಯ ಔಷಧ ಇಂಜಕ್ಶನ್‌ಗಳಂಥ **ದಮ್ಮು ತಾತ್ಪರ್ತಿಕ ನಿಲ್ಲಿಸುವ** ಪುಷ್ಕಳ ಔಷಧಗಳು ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸನಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು. ಅವರೆಲ್ಲರಿಗೆ **ದಮ್ಮನ್ನು ನಿದಾನ ಅದರೂ ಪೂರ್ಣ ಗುಣಮಾಡುವಂಥ** ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು. ದಮ್ಮು ಕಂಠದಾಹ ಮಾಡುವ ಹಳೇ ಕೆಮ್ಮು ಕೋಡಗಸೆಮ್ಮು ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ **ಪುರೋಹಿತ ಶ್ವಾಸಹಾರೀ ಸ್ಪೈನ್** ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು. ಅಲ್ಲದೆ ಅಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಾಂಪಾವುಂಡ (ಕೆಂಪು ಪ್ಯಾಕಿಂಗ್)ದ ಶಿಫಾರಸು ಮಾಡುವೆನು.

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂ. ೨, ರೂ. ೩-೮, ಮತ್ತು ರೂ. ೬ ಬೆಲೆಯ ಸಣ್ಣ ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು.

ಮುಂಬಯಿ ಏಜಂಟ:—
ಓರಿಯಂಟೆಲ್ ಮೆಡಿಕಲ್ ಸ್ಟೋರ್ಸ್,
ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೩.

ಮುಂಬಯಿ ಸ್ಟಾಕಿಸ್ಟ:—
ವನಮಾಲೀ ಭಿಕಾ ಕಂ.,
ಪ್ರಿನ್ಸೆಸ್ ಸ್ಟ್ರೀಟ.
ಕಾಂತಿಲಾಲ ಫೋಟಾಲಾಲ ಕಂ.,
ಪ್ರಿನ್ಸೆಸ್ ಸ್ಟ್ರೀಟ.

ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಅಪೂರ್ವ ಶೋಧ

ಶಾಸ್ತ್ರೀಯ ರೀತಿಯಿಂದ ಸಿದ್ಧವಾದ ನಮ್ಮ 'ಡಾರ್ಲಿಂಗ್ ಬ್ಯೂಟಿ ಲೋಶನ್' ಎಂಬ ಸೌಂದರ್ಯವರ್ಧಕ ದ್ರವ್ಯವು ಐದು ನಿಮಿಷಗಳಲ್ಲಿಯೇ ಮುಖ ಕೂಡ ಶರೀರದ ಇತರ ಭಾಗಗಳಿಗೂ ಹೊಸ ತಾರುಣ್ಯವನ್ನು ಕೊಡುತ್ತದೆ. ಅದು ಕಲೆಗಳನ್ನು, ಮಚ್ಚುಸ್ಸೇರಿದ ಸುಕ್ಕುಗಳನ್ನು, ದಡಾವನ್ನು, ಮಡಿಕೆಗಳನ್ನು, ನೆರಿಗೆಗಳನ್ನು ಮತ್ತು ಕೆಟ್ಟದಾಗಿ ತೋರುವ ಚುಕ್ಕೆಗಳನ್ನು ನಿವಾರಿಸುತ್ತದೆ—ನೈಸರ್ಗಿಕವಾಗಿ, ಬೆಳ್ಳಗಾಗಿ ಮಾಡಿ, ನವತಾರುಣ್ಯವನ್ನು ಕೊಡುತ್ತದೆ,—ಮುಖ-ಕೈ ವೈವರ್ಣಗಳನ್ನು, ಶರೀರವನ್ನು ಸುಂದರವಾಗಿ ಮಾರ್ಪಡಿಸುತ್ತದೆ, ಅಲ್ಲದೆ ವ್ಯಕ್ತಿಗಳಿಗೆ ಮಖಮಲಿನಂಥ ಮೃದುತನವನ್ನು ಉಂಟುಮಾಡುತ್ತದೆ. ಯಾವತ್ತು ದೇಶಗಳ ಸಾವಿರಾರು ಮಂದಿ ಹೆಂಗಸರು ನಿತ್ಯವೂ ಇದನ್ನೇ ಉಪಯೋಗಿಸುತ್ತಿದ್ದಾರೆ. ಇದು ಒಳ್ಳೆಯ ಪರಿಣಾಮವನ್ನು ಕೊಡುತ್ತದೆ. ಪ್ರತಿ ಬಾಟ್ಲಿಯ ಬೆಲೆ ರೂ. ೨—೦—೦, ಪೋಸ್ಟೇಜು ಪ್ರತ್ಯೇಕ. ೩ ಬಾಟ್ಲಿಗಳನ್ನು ಒಮ್ಮೆಗೇ ತರಿಸಿದರೆ ಅಂಚೆ ಹಾಸಲು ಉಚಿತ. ವಿದೇಶಗಳ ಎಲ್ಲಾ ಆರ್ಡರಿನೊಡನೆಯೂ, ಆ ದೇಶಗಳ ಬೆಲೆಯನ್ನು ಮುಂದಾಗಿ ಕಳುಹಿಸಲೇ ಬೇಕು; ಇಲ್ಲದಿದ್ದರೆ ಅಂಥ ಆರ್ಡರುಗಳಿಗೆ ಗಮನಕೊಡಲಾಗುವುದಿಲ್ಲ. ಪತ್ರವ್ಯವಹಾರ ಇಂಗ್ಲಿಷಿನಲ್ಲಿರಬೇಕು. ಉಚಾರವಾದ ಶತಕಗಳ ಮೇಲೆ ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.

Sole Distributors:
ಲಾರೋಯಾ & ಕೊ., Laroiya & Co.,
೮೩, ರೈಲ್ವೆ ರೋಡ್, 83, Railway Road,
ಲಾಹೋರ್. Lahore.

ಆರೋಗ್ಯ ವಿಜ್ಞಾನ

ಕುಷ್ಠರೋಗ

ಸಾರ್ವಜನಿಕ ಆರೋಗ್ಯ.

ಕುಷ್ಠರೋಗಪೀಡಿತರಲ್ಲಿ ಹೆಚ್ಚಿನ ಮಂದಿ ತಮ್ಮ ರೋಗಕ್ಕೆ ಯಾವ ಔಷಧವೂ ತಗಲುವುದಿಲ್ಲವೆಂದೂ ತಮ್ಮ ದುರಾದೃಷ್ಟದಿಂದ ತಮಗೆ ಆ ರೋಗವು ಬಂದದ್ದೆಂದೂ ನಂಬಿ ಸುಮ್ಮನಿರುತ್ತಿದ್ದರು. ಇನ್ನೂ ಅನೇಕ ಮಂದಿ ತಮಗಿರುವ ರೋಗವು ಯಾರಿಗೂ ತಿಳಿಯಬಾರದೆಂದು ಅದನ್ನು ಅಡಗಿಸಿಕೊಂಡು ಸರಿಯಾದ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದಿಲ್ಲ.. ಕುಷ್ಠರೋಗವು ಪ್ರಾಥಮಿಕ ಅವಸ್ಥೆಯಲ್ಲಿರುವಾಗ ಅದನ್ನು ನಿವಾರಣೆ ಮಾಡಲಿಕ್ಕೂ ತಡಿಸಲಿಕ್ಕೂ ಸಾಧ್ಯವಿದೆ ಎಂಬುದನ್ನು ಈಗ ಕಂಡುಹಿಡಿದಿರುತ್ತಾರೆ. ಇದರಿಂದ ವಿದ್ಯಮಾನಗಳೆಲ್ಲಾ ಪರಿವರ್ತನೆಯನ್ನು ಹೊಂದಿರುತ್ತವೆ. ಸರಕಾರಿ ನೌಕರರಲ್ಲಿ ಯಾರಿಗಾದರೂ ಈ ರೋಗವಿದೆಯೆಂದು ಸಂಶಯವಿರುವಲ್ಲಿ ಸರಕಾರದವರು ಅವರಿಗೆ ಚಿಕಿತ್ಸೆ ಬಗ್ಗೆ ಬೇಕಾದಷ್ಟು ರಜೆಯನ್ನು ಆದಷ್ಟು ಉದಾರ ರೀತಿಯಿಂದ ಕೊಡುತ್ತಾರೆ. ಸರಕಾರದವರು ಈ ರೋಗವನ್ನು ನಮ್ಮ ಆಧಿಪತ್ಯದಿಂದ ನಿರ್ಮೂಲಿಸಲಿಕ್ಕೆ ಉಪಾಯಗಳನ್ನೇನು ಮಾಡಬಹುದೆಂಬುದನ್ನು ಆಲೋಚಿಸುತ್ತಿದ್ದಾರೆ. ಹಾಗೆ ಕುಷ್ಠರೋಗನಿವಾರಣೆಯ ಕಾರ್ಯವು ಸ್ವಲ್ಪವಾದರೂ ಸಫಲವಾಗಬೇಕಾದರೆ ರೋಗವು ಪ್ರಾಥಮಿಕ ಅವಸ್ಥೆಯಲ್ಲಿರುವಾಗಲೇ ಅದರ ಲಕ್ಷಣಗಳನ್ನು ಕಂಡುಹಿಡಿದು ಅದಕ್ಕೆ ಚಿಕಿತ್ಸೆ ಮಾಡುವದು ಅಗತ್ಯವೆಂಬುದು ೧೯೨೭ರಲ್ಲಿ ಸರಕಾರದ ಜಾಹೀರಾತಿಗೆ ಬಂತು. ಈ ರೋಗದ ಲಕ್ಷಣವನ್ನು ಕಂಡುಹಿಡಿಯುವ ಜ್ಞಾನ ಪಡೆಯಬೇಕಾದರೆ ರೋಗಪೀಡಿತರ ಶಯ್ಯೆಗಳಿದ್ದು ಸಕಲ ಸಾಧನಗಳಿಂದ ಕೂಡಿದ ಪ್ರತ್ಯೇಕ 'ಕ್ಲಿನಿಕ್' ಎಂಬ ಶಯ್ಯಾಸ್ಪತ್ರೆಗಳಲ್ಲಿ ಮಾತ್ರ ಸಾಧ್ಯವಿರುವದರಿಂದ ಕುಷ್ಠರೋಗ ಶಯ್ಯಾಸ್ಪತ್ರೆ(ಕ್ಲಿನಿಕ್)ಗಳನ್ನು ಅಲ್ಲಲ್ಲಿ ತೆರೆಯಬೇಕಾಗಿಯೂ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿರುವ ದೊಡ್ಡ ಆಸ್ಪತ್ರೆಗಳಲ್ಲಿ ಬೇರೆ ಹೊರ ರೋಗಿಗಳಂತೆಯೇ ಕುಷ್ಠರೋಗಿಗಳಿಗೂ ಔಷಧೋಪಚಾರ ಮಾಡುವ ಕ್ರಮವನ್ನು ಮೆಲ್ಲಗೆ ಜಾರಿಗೆ ತರಬೇಕೆಂದೂ ಎಲ್ಲಿ ಅಂಥಾ ಆಸ್ಪತ್ರೆಗಳಿಗೆ ತಾಗಿ ವೈದ್ಯ ವಿದ್ಯಾಲಯಗಳಿವೆಯೋ ಅಲ್ಲಿಯೇ ಈ ಕೆಲಸ ಪ್ರಾರಂಭಿಸಬೇಕೆಂದೂ ಸರಕಾರದವರಿಗೆ ಸೂಚಿಸಿದರು. ಈ ಸೂಚನೆಗಳಿಗನುಸಾರವಾಗಿ ೧೯೨೭ರಲ್ಲಿ ತಂಜಾವೂರು, ಮಧುರಾ, ವಿಶಾಖಪಟ್ಟಣ, ಕೊಯಂಬುತ್ತೂರು ಮತ್ತು ಗುಂಟೂರಿನಲ್ಲಿರುವ ಹೆಡ್‌ಕ್ವಾರ್ಟರ್ಸ್ (ಮುಖ್ಯ ಪಟ್ಟಣ) ಆಸ್ಪತ್ರೆಗಳಲ್ಲಿ ಐದು ಚರ್ಮರೋಗಶೋಧನೆಯ ಶಯ್ಯಾಸ್ಪತ್ರೆಗಳನ್ನು ತೆರೆಯಲಿಕ್ಕೆ ಸರಕಾರದವರು ಆಜ್ಞಾಪಿಸಿರುವರು. ಸೇಲಂ ಜಿಲ್ಲೆಯಲ್ಲಿರುವ ಕುಷ್ಠರೋಗನಿವಾರಣಾ ಸಮಿತಿಯವರು ಸಂಗ್ರಹಮಾಡಿಕೊಟ್ಟ ಚಂತಿಗೆ ಹಣದ ಸಹಾಯದಿಂದ ಕೃಷ್ಣಾಗಿರಿಯ ತಾಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯಲ್ಲಿ ಕುಷ್ಠರೋಗ ಶಯ್ಯಾಲಯವನ್ನು ತೆರೆದಿರುತ್ತಾರೆ.

ಈ ಆಧಿಪತ್ಯದಲ್ಲಿ ಕುಷ್ಠರೋಗದ ಹಾವಳಿಯನ್ನು ಕಡಿಮೆಯಾಗುವುದಕ್ಕೆ ಸಹಾಯಕ ಯೋಜನೆಯೊಂದನ್ನು ೧೯೩೧ರಲ್ಲಿ ನಮ್ಮ ಸರಕಾರದ ಮುಂದೆ ತಂದರು. ಇದರ ಮೇರೆಗೆ ಈ ಆಧಿಪತ್ಯವನ್ನು ಆರು ಪ್ರಾಂತ್ಯಗಳಾಗಿ ವಿಂಗಡಿಸಿ ಅಸಿಸ್ಟಾಂಟ್ ಸರ್ಜನ್ ತರಗತಿಯ, ತರಬೇತು ಹೊಂದಿದ ಸ್ಪೆಶಲ್ ಆಫೀಸರರೊಬ್ಬೊಬ್ಬರನ್ನು ಒಂದೊಂದು ಪ್ರಾಂತ್ಯಕ್ಕೆ ನೇಮಿಸಬೇಕಾಗಿರುತ್ತದೆ. ಈ ಸ್ಪೆಶಲ್ ಆಫೀಸರರು ಕೆಳಗೆ ಕಾಣಿಸಿದ ಕೆಲಸಗಳನ್ನು ಮಾಡುವರು.

೧. ಕುಷ್ಠರೋಗವು ಆಗಾಗ್ಯೆ ಕಾಲಕ್ರಮಕ್ಕನುಸಾರವಾಗಿ ತಲೆದೋರುವಲ್ಲಿ ಮುಖ್ಯ ಕೇಂದ್ರಸ್ಥಳಗಳಲ್ಲೆಲ್ಲಾ ಕುಷ್ಠರೋಗ ಶಯ್ಯಾಸ್ಪತ್ರೆಗಳನ್ನು ಸ್ಥಾಪಿಸುವದು.

೨. ಕುಷ್ಠರೋಗ ಸಮ್ಮಂಧವಾದ ಕೆಲಸಗಳಲ್ಲಿ ವೈದ್ಯ ಉದ್ಯೋಗಸ್ಥರನ್ನು ತರಬೇತಿ ಮಾಡುವದು.

೩. ಪ್ರಚಾರ ಪೈಮಾಶಿ ಕೆಲಸಗಳನ್ನು ಮಾಡುವದು.

೧೦. ಇವುಗಳಲ್ಲೊಂದು ಪ್ರಾಂತ್ಯಕ್ಕೆ ಕುಷ್ಠರೋಗದ ಪ್ರಧಾನ ವೈದ್ಯ ಉದ್ಯೋಗಸ್ಥ (ಚೀಫ್ ಲೆಪ್ರಸಿ ಆಫೀಸರರು)ರೊಬ್ಬರಿದ್ದು ಅವರ ಸೂಚನೆಗಳಂತೆ ಉಳಿದ ಉದ್ಯೋಗಸ್ಥರು ಕೆಲಸ ಮಾಡುವರು.

ಈ ಯೋಜನೆಯನ್ನು ಸರಕಾರದವರು ಸ್ವೀಕರಿಸಿ ೧೯೩೧ರಲ್ಲಿ ಜಾರಿಗೆ ತಂದರು. ಈ ಯೋಜನೆಯ ಫಲವಾಗಿ ಈಗ ಸರಕಾರಿ ವೈದ್ಯಕೀಯ ಸಂಸ್ಥೆಗಳಲ್ಲೆಲ್ಲಾ ಕುಷ್ಠರೋಗದ ಶಯ್ಯಾಲಯಗಳನ್ನು ತೆರೆದಿರುತ್ತಾರೆ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಈ ಕುಷ್ಠರೋಗ ನಿವಾರಣೆಯ ಕೆಲಸವು ಬಹಳ ಪ್ರಯೋಜನದ್ದೆಂದು ತೋರಿದ್ದರಿಂದ ತಮ್ಮ ಕೈಕೆಳಗಿರುವ ವೈದ್ಯಕೀಯ ಸಂಸ್ಥೆಗಳಲ್ಲಿ ಕುಷ್ಠರೋಗ ಶಯ್ಯಾಸ್ಪತ್ರೆಗಳನ್ನು ತೆರೆಯಲಿಕ್ಕೆ ಅವರು ಹಣಸಹಾಯವನ್ನು ಮಾಡಿರುವರು. ಈ ಆಧಿಪತ್ಯದಲ್ಲಿ ಈಗ ಒಟ್ಟಿಗೆ ಳಳಜ ಶಯ್ಯಾಸ್ಪತ್ರೆಗಳಲ್ಲಿ ಕೆಲಸ ನಡಿಯುತ್ತಿದೆ. ಈ ಶಯ್ಯಾಸ್ಪತ್ರೆಗಳಲ್ಲಿ ಕಾರ್ಯಕ್ರಮಗಳು ಯೋಗ್ಯರೀತಿಯಿಂದ ನಡೆಯುತ್ತಾ ಬಂದುದರಿಂದ ಅವುಗಳು ಜನರ ಮನಸ್ಸನ್ನು ದಿನೇ ದಿನೇ ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತಿವೆ. ಈ ಕುಷ್ಠರೋಗ ಶಯ್ಯಾಸ್ಪತ್ರೆಗಳ ಕುರಿತು ಜನರಲ್ಲಿ ಪ್ರೀತಿಭಾವನವನ್ನು ಹುಟ್ಟಿಸುವ ಉದ್ದಿಶ್ಯವಾಗಿ ಪ್ರಾಂತಿಕ ಕುಷ್ಠರೋಗನಿವಾರಣಾಧಿಕಾರಿಗಳು ಗ್ರಾಮಗಳಲ್ಲಿ ಪ್ರಚಾರಕೆಲಸವನ್ನು ಮಾಡುತ್ತಿರುತ್ತಾರೆ. ಗ್ರಾಮಗಳಲ್ಲಿ ಕುಷ್ಠರೋಗಿಗಳ ಲೆಕ್ಕವನ್ನು ಇಡುವ ಕ್ರಮವನ್ನು ಆರಂಭಿಸಿ, ಚಿಕಿತ್ಸೆಯ ಕುರಿತು ಅಭಾವವಿರುವ ರೋಗಿಗಳ ಕುರಿತು ಅವರಿರುವ ಗ್ರಾಮಗಳಲ್ಲಿಯೇ ಅವರ ರೋಗವು ಹೇಗೆ ಪರಿಣಮಿಸುವುದೆಂದು ನಜರಿಡುವರು. ಶಾಲಾ ವಿದ್ಯಾರ್ಥಿಗಳಲ್ಲಿ ಯಾರಲ್ಲಿಯಾದರೂ ಕುಷ್ಠರೋಗದ ಕುರುಹುಗಳಿರುವವೋ ಎಂಬದನ್ನು ಪರೀಕ್ಷಿಸುವ ಕುರಿತು ಸಹಾ ಈ ಪ್ರಾಂತಿಕ ಉದ್ಯೋಗಸ್ಥರು ಮನಸ್ಸು ಕೊಡುತ್ತಾರೆ. ಹೀಗೆ ಪ್ರತಿ ಜಿಲ್ಲೆಯಲ್ಲಿಯೂ ನಿರಂತರ ಕುಷ್ಠರೋಗನಿವಾರಣಾಕಾರ್ಯಗಳು ನಡೆಸುತ್ತಿರಬೇಕೆಂಬ ಉದ್ದಿಶ್ಯದಿಂದ ೧೯೩೫ನೇ ಇಸವಿಯಲ್ಲಿ ಕಲ್ಕತ್ತಾ ಮತ್ತು ಮದ್ರಾಸು ಕುಷ್ಠರೋಗ ಕಾರ್ಯಕಾರಿಗಳ ಸಮ್ಮೇಲನವೊಂದು ಜರಗಿತು. ಈ ಸಮ್ಮೇಲನದ ನಿರ್ಣಯಗಳಿಗನುಸಾರವಾಗಿ ಈಗ ಪ್ರತಿ ಜಿಲ್ಲೆಯಲ್ಲಿ ಕುಷ್ಠರೋಗ ನಿವಾರಣೆಯ ಸಂಸ್ಥೆಗಳನ್ನು ಸ್ಥಾಪಿಸಿರುವದು ಒಂದು ವಿಶೇಷ ಸಂಗತಿಯಾಗಿರುತ್ತದೆ. ತಿರುಮಣಿ ಎಂಬಲ್ಲಿ ಸುಮಾರು ೧॥ ಲಕ್ಷ ರೂಪ್ಯಾ ಖರ್ಚು ತಗಲುವ ಕುಷ್ಠರೋಗಿಗಳ ಒಂದು ದೊಡ್ಡ ವಸಾಹತವನ್ನು ಸರಕಾರಿ ಖರ್ಚಿನಿಂದ ನಡೆಸುತ್ತಾರೆ. ಈ ರೋಗದ ಚಿಕಿತ್ಸೆ ಮಾಡುವ ಕ್ರಮಗಳಲ್ಲಿ ಅನೇಕ ವೈದ್ಯ ಉದ್ಯೋಗಸ್ಥರಿಗೆ ತರಬೇತು ಮಾಡಿರುತ್ತಾರೆ ಕುಷ್ಠರೋಗದ ಪ್ರಧಾನ ವೈದ್ಯ ಉದ್ಯೋಗಸ್ಥರು ಚಿಕ್ಕ ಪುಸ್ತಕಗಳ ಮೂಲಕವೂ ಜಾಹೀರಾತುಗಳ ಮೂಲಕವೂ ವೈದ್ಯ ಉದ್ಯೋಗಸ್ಥರಿಗೆಲ್ಲಾ ಅನುಭವವನ್ನು ಕೊಡುತ್ತಿದ್ದಾರೆ. ಇತ್ತೀಚೆಗೆ ಕುಷ್ಠರೋಗನಿವಾರಣೆಯ ಬಗ್ಗೆ ಸರಕಾರದವರು ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದಾರೆಂಬದು ಇದರಿಂದೆಲ್ಲಾ ವ್ಯಕ್ತವಾಗಬಹುದು. ಈ ಜಿಲ್ಲೆಯಲ್ಲಿ ಜಿಲ್ಲಾ ಹೆಲ್ತ್ ಆಫೀಸರರು ಕಾರ್ಯದರ್ಶಿಗಳಾಗಿರುವ ಜಿಲ್ಲಾ ಕುಷ್ಠರೋಗ ಸಮಿತಿಯೊಂದಿರುವದು. ಈ ಸಮಿತಿಯ ಕೆಳಗೆ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ೧೧ ಕುಷ್ಠರೋಗದ ಶಯ್ಯಾಸ್ಪತ್ರೆಗಳಿವೆ.

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು.)

ಡೋಂಗರೇ ಇವರ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೇ ಇವರ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತ ಬಲವನ್ನುಂಟುಮಾಡಿ ಆರೋಗ್ಯವನ್ನು ಹೆಚ್ಚಿತ್ತದೆ.

(೬) ಡೋಂಗರೇ ಇವರ ಬಾಲಾಮೃತ ಹಳೆಯ ಮತ್ತು ಅಸಹ್ಯವಾದ ಕೆಮ್ಮು, ಮ ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೭) ಡೋಂಗರೇ ಇವರ ಬಾಲಾಮೃತ ಮಧುರವಿರುವುದರಿಂದ, ಮಕ್ಕಳು ಅನ ಖಿಂದ ಸೇವಿಸುತ್ತಾರೆ.

(೮) ಸ್ವಲ್ಪದರಲ್ಲಿ ಹೇಳುವುದೆಂದರೆ, ಡೋಂಗರೇ ಇವರ ಬಾಲಾಮೃತವು ಬೆಳೆಯುವ ಕ್ಕಳಿಗೆ ಯೋಗ್ಯವಾದ ವಸ್ತುವು ಇರುತ್ತದೆ.

ಮೂಲಕರು:—ಕೇ. ಟಿ. ಡೋಂಗರೇ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ಸಿಗುವುದು.

ಉಡುಪಿ **ಶ್ರೀ ಕೃಷ್ಣ ಭವನ, ಮಂಗಳೂರು**

ಹೆಡ್ ಆಫೀಸು:—ವರ್ಕೌಂಟ್ ರೋಡ್, ಮದ್ರಾಸ್
ಬ್ರಾಂಚ್:—ಗಣಪತಿ ಹೈಸ್ಕೂಲಿನ ಸವಿೂಪ
ಅನುಭವಸ್ಥ ಬ್ರಾಹ್ಮಣರಿಂದ ವಿಧಿಯುಕ್ತವಾಗಿ ಸಿದ್ಧಗೊಳಿಸಲ್ಪಡುವ ಉತ್ತಮವಾ
ತಿಂಡಿತಿನಸು ಮತ್ತು ಭೋಜನ!
ವಿದ್ಯುದ್ದೀಪಗಳುಳ್ಳ ಚೊಕ್ಕಟ ಕೊಠಡಿಗಳು. ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು.
ಯಾತ್ರಿಕರಿಗೂ ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸಗೃಹ!
ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ಪೂರ್ಣ ತೃಪ್ತಿಗೊಳಿಸುವಂಥವುಗಳೇ.
ಪ್ರೊಪ್ರೈಟರ್:—ಕೆ. ಕೃಷ್ಣರಾವ

WANTED

In the South Kanara District young and ambitiou men on very liberal terms, to represent the BHARA INSURANCE COMPANY, LTD., LAHORE. An exceller opportunity to earn a decent living.

Apply to:—

DUTT & CO., *Chief Agents,* KARWAI

MODERN PRINTING! AT MODERATE RATES
CONSULT
THE
Saraswathi Printing Works, Ltd.,
CANTONMENT, MANGALORE.

ಅರ್ಧ ಬೆಲೆ ಕ್ರಿಸ್‌ಮಸಿಗಾಗಿ ಮಾತ್ರ. "ಹನಿಮೂನ್ ಮರ್ದಾಯ್ ಸೆಟ್" (ರಿಜಿಸ್ಟರ್ಡ್)

ಈ ಸೆಟ್ಟಿನಲ್ಲಿ ಬಹಳ ಶಕ್ತಿಯುಳ್ಳ ಬಂಗಾರ, ಬೆಳ್ಳಿಯ ಲೇಪದ ಮಾತ್ರೆಗಳೂ, ಕ್ರೀಮೂ ಇವೆ. ಸಪುಂಸಕತ್ವ, ಇಂದ್ರಿಯಶ್ಲಥತೆ, ಶಕ್ತಿಕ್ಷಯ, ಧಾತುನಷ್ಟ, ಇಂದ್ರಿಯವ್ಯಾಪಾರದ ನಿಶ್ಯಕ್ತಿ, ಆಯಾಸ, ಹಾಗೂ ಎಲ್ಲ ಬಗೆಯ ಸ್ತ್ರೀಪುರುಷ ಧರ್ಮದ ಅಕ್ರಮಗಳಿಗೂ ಈ ಮಾತ್ರೆಗಳು ಬಹಳ ಪರಿಣಾಮಕಾರಿಯಾಗಿದ್ದು, ಅವುಗಳನ್ನು ವಿಧಾಯಕ ರೀತಿಯಲ್ಲಿ ಸೇವಿಸುವದರಿಂದ ಪುನರ್ ಯೌವ್ವನವೂ, ಸಂಪೂರ್ಣ ರಕ್ತದಿಂದ ತುಂಬಿದ ಪುಷ್ಟಿಯಾದ ದೇಹವೂ ಉಂಟಾಗುತ್ತದೆ.

ಅತ್ಯಂತ ಅಮೂಲ್ಯವಾದ ಔಷಧಪದಾರ್ಥಗಳಿಂದ ತಯಾರಿಸಲ್ಪಟ್ಟಿದ್ದು, ಈ ಕ್ರೀಮು, ಹೊರ ಲೇಪಕ್ಕೆ ಮಾತ್ರವಾಗಿದೆ. ಚಿಕ್ಕದಾಗಿರುವ, ದುರ್ಬಲವಾದ ಜನನೇಂದ್ರಿಯಕ್ಕೆ ಇದನ್ನು ಲೇಪಿಸಬಹುದು. ಕಳೆಗುಂದಿದ ಶಕ್ತಿಯನ್ನು ಈ ಕ್ರೀಮು ಪುನಃ ದೊರಕಿಸಿಕೊಡುವುದಲ್ಲದೆ, ಒಬ್ಬ ವ್ಯಕ್ತಿಯು ತನ್ನ ಸುಖೋಪಭೋಗವನ್ನು ಸಂಪೂರ್ಣ ಅನುಭವಿಸುವಲ್ಲಿ ಅತನಿಗೆ ತುಂಬ ಸಹಾಯಮಾಡುತ್ತದೆ. ಸೆಟ್ಟೊಂದಕ್ಕೆ ರೂ. 5/8/—. ಕ್ರಿಸ್‌ಮಸಿಗೆ ಮಾತ್ರ ರೂ. 2/12/—.

ಹನಿಮೂನ್ ಮರ್ದಾಯ್ ಸೆಟ್ ಆಫೀಸ್ (ರಿಜಿಸ್ಟರ್ಡ್), 5/7, ಓಕ್ ಲೇನ್, ಮೆಡೋಸ್ ಸ್ಟ್ರೀಟ್, ಫೋರ್ಟ್, ಬೊಂಬಯಿ.

...ತಿ ಶಾರದಾದೇವಿ

(ಶ್ರೀ॥ ಎನ್. ಎಸ್. ಶಾಸ್ತ್ರಿ, ಚಿಕ್ಕಬಾಣಾವರ

...ದಿಕೆಯ ಮೇಲೆ ನಿಂತು ಉಪನ್ಯಾಸ ... ಪದವಿನ್ಯಾಸದಿಂದ ಪ್ರತಿಭೆಯನ್ನು ...ೋರಿಸಿಕೊಳ್ಳುವ ಸುಧಾರಕರನ್ನು ನೋಡಿ ನಿರಾಗಾಗುವವರು ಶ್ರೀ ಶಾರದಾದೇವಿಯ ಜೀವನದ ಕಡೆಗೆ ತಿರುಗಿ ನೋಡಿದರೆ ಆಶ್ಚರ್ಯ ಪಡುವರು. ಅದೊಂದು ಶಾಂತವಾದ, ಮೌನವಾದ, ಆದರೆ ಅಧ್ಯಾತ್ಮಿಕತೆಯ ಪರಿಪೂರ್ಣವಾದ ಜೀವನ. ಯಾರ ಕಣ್ಣಿಗೂ ಬೀಳದೆ ಸಂಧ್ಯಾಕಾಲದಲ್ಲಿ ಅರಳುವ ಶುಭ್ರವಾದ ಮಲ್ಲಿಗೆಯಂತಿಹುದು ಆಕೆಯ ಜೀವನ. ಆದರೆ ಮಲ್ಲಿಗೆಯ ಕಂಪು ಇಂಪಾಗಿ ತೆಂಗಾಳಿಯಲ್ಲಿ ಬೆರಾಡಿ ಜನರ ಮನ ಸೆಳೆಯುವಂತಹ ಆಕೆಯ ಪಾವಿತ್ರತೆ, ದೇವತ್ವ ಪ್ರಶಾಂತವಾಗಿ ಜಗತ್ತಿನಲ್ಲಿ ಪರಡಿದೆ.

ಶ್ರೀ ಶಾರದಾದೇವಿಯು ಪಟ್ಟಣದ ಪ್ರಶಾಂತಿ, ಗಲಭೆ, ಗದ್ದಲಗಳಿಗೆ ದೂರವಾದ ಪ್ರದೇಶದಲ್ಲಿ ಶಾಂತಿಪೂರಿತ ವಾತಾವರಣದಲ್ಲಿ ಬೆಳೆದಾಕೆ. ಚಿಕ್ಕಂದಿನಿಂದ ಪವಿತ್ರವಾದ ಆವರಣದಲ್ಲಿ ಬೆಳೆದಾಕೆ. ಶ್ರೀರಾಮಕೃಷ್ಣರ ಪ್ರೇಮದ ಗಾಳಿಯಲ್ಲಿ ಬೆಳೆದಾಕೆ. ಆದುದರಿಂದ ಮುಂದೆ ಆಕೆಯಲ್ಲಿ ಈ ಗುಣಗಳ ಪರಿಪಕ್ವವನ್ನು ಕಾಣುವೆವು. ಶ್ರೀ ಶಾರದಾದೇವಿಯವರು ಪ್ರೇಮದ ಖನಿಯಾಗಿದ್ದರು. ದೇವತ್ವದ ನಿಧಿಯಾಗಿದ್ದರು. ಸಾವಿರಾರು ಜನರಿಗೆ ತನ್ನ ಸ್ಪರ್ಶಮಾಡಿ ಭಾವ ಸಮಾಧಿಯನ್ನು ಅನುಗ್ರಹಿಸಿದ್ದರು. ಸಾವಿರಾರು ಜನರ ಜೀವನಗಳನ್ನು ತಿದ್ದಿ ಉತ್ತಮಗೊಳಿಸಿದ್ದರು. ಆಕೆಯಲ್ಲಿ ಪರಮಹಂಸರಲ್ಲಿದ್ದ "ದೀನ ಜನರಲ್ಲಿ ಮರುಕ, ಪಾಪಿಷ್ಠರಲ್ಲಿ ದಯೆ" ಮುಂತಾದ ಗುಣಗಳು ಪೂರ್ಣವಾಗಿ ಬಿಂಬಿತವಾಗಿದ್ದವು.

ಐದು ವರ್ಷ ವಯಸ್ಸಿನಲ್ಲಿ ಶ್ರೀ ಶಾರದಾದೇವಿಯವರಿಗೂ ಪರಮಹಂಸರಿಗೂ ವಿವಾಹವಾಯಿತು. ಆಗ ಪರಮಹಂಸರಿಗೆ ಇಪ್ಪತ್ತು ಮೂರು ವರ್ಷ ವಯಸ್ಸಾಗಿದ್ದಿತು. ಮದುವೆಯಾದ ಕೆಲ ದಿನಗಳ ಮೇಲೆ ಶಾರದಾದೇವಿ ತವರೂರಿಗೆ ಹೋದರು. ಬಳಿಕ ಎಂಟು ವರ್ಷಗಳ ಮೇಲೆ ಆಕೆ ಪುನಃ ಪರಮಹಂಸರನ್ನು ನೋಡಿದುದು. ಆ ವೇಳೆಗೆ ಶ್ರೀರಾಮಕೃಷ್ಣರಿಗೆ ಹುಚ್ಚು ಹಿಡಿದಿದೆಯೆಂದು ಎಲ್ಲೆಲ್ಲೂ ಜನರು ಹೇಳಿಕೊಳ್ಳುತ್ತಿದ್ದರು. ಹದಿನಾಲ್ಕು ವರ್ಷದ ಹುಡುಗಿಗೆ ಇಂತಹ ವಾರ್ತೆಯನ್ನು ಕೇಳಿ ಹೇಗಾಗಿರಬೇಕು? ಆದರೂ ತಾನು ಸ್ವತಃ ನೋಡಬೇಕೆಂದು ನಿಶ್ಚಯಿಸಿ ತಂದೆಯೊಂದಿಗೆ ದಕ್ಷಿಣೇಶ್ವರಕ್ಕೆ ನಡೆದು ಬಂದಳು. ಬಂದು, ತನ್ನ ಸ್ವಾಮಿಯನ್ನು ಕಂಡಳು.

ಆ ವೇಳೆಗೆ ಶ್ರೀರಾಮಕೃಷ್ಣರು ಅನೇಕ ಮಾರ್ಗಗಳಲ್ಲಿ ಸಾಧನೆಗಳನ್ನು ನಡೆಸಿ ಸಿದ್ಧರಾಗಿದ್ದರು. ಎಷ್ಟು ವರ್ಷಗಳಿಗೆ ಅವರಿಗೆ ಸಿದ್ಧಿ ಲಭಿಸಿತ್ತೆಂದರೆ ತನ್ನ ಅಮೂಲ್ಯವಾದ ಸಾಧನೆಗಳ ಫಲಗಳನ್ನು ಶಾರದಾದೇವಿಯ ಚರಣತಲದಲ್ಲಿ ಅರ್ಪಿಸಿ, ಪ್ರಾಪಂಚಿಕ ಜೀವನವನ್ನು, ಪತ್ನಿಗಾಗಿ ನಡೆಸಲು ಸಿದ್ಧರಾದರು. ಇದರಿಂದ ಅವರು ಎಂತಹ ತ್ಯಾಗಕ್ಕೆ ಸಿದ್ಧರಾಗಿದ್ದರೆಂಬುದು ತಿಳಿಯುವುದು. ಅಂತಹ ತ್ಯಾಗಬುದ್ಧಿಗೆ ಪ್ರತಿಯಾಗಿ ಶಾರದಾದೇವಿಯು ಮಹತ್ತಾದ ತ್ಯಾಗವನ್ನೇ ಮಾಡಿದರು. ಪ್ರಾಪಂಚಿಕ ಸುಖಗಳೆಲ್ಲವನ್ನೂ ತ್ಯಜಿಸಿ, ಪತಿಯ ಬಳಿ ಶಿಷ್ಯೆಯಾಗಿ ಕುಳಿತರು; ಅವರಿಂದ ಕಲಿಯಲು ಸಿದ್ಧರಾದರು.

ಕಲ್ಕತ್ತೆಗೆ ಬಂದ ಹೊಸತರಲ್ಲಿ ಆಕೆಯ "ಹಳ್ಳಿಯಲ್ಲಿದ್ದ ಮನಸ್ಸು" ಪಟ್ಟಣದ ಬಳಿ ಹೇಗೆ ವರ್ತಿಸುವುದೋ ಎಂದು ಪರಮಹಂಸರು ತವಕಪಡುತ್ತಿದ್ದರಂತೆ. ಆದರೆ ಶಾರದಾದೇವಿಯು ದಕ್ಷಿಣೇಶ್ವರದಲ್ಲಿ ತಮಗಿದ್ದ ಕೋಣೆಯಿಂದೀಚೆಗೆ ಅಪೂರ್ವವಾಗಿ ಬರುತ್ತಿದ್ದರು. ತಮ್ಮ ಕಾಲದಲ್ಲಿ ಮುಕ್ಕಾಲು ಪಾಲನ್ನೆಲ್ಲಾ ಧ್ಯಾನ, ಜಪಗಳಲ್ಲಿ ಕಳೆಯುತ್ತಿದ್ದರು. ಹೊರಗಿನ ಪ್ರಪಂಚದ ಗೋಜನ್ನು ಹೆಚ್ಚು ಹತ್ತಿಸಿಕೊಳ್ಳುತ್ತಿರಲಿಲ್ಲ. ಬೆಳಗಿನ ಜಾವದಲ್ಲಿ ಹರಮಹಂಸರು ಧ್ಯಾನಕ್ಕೆ ಹೋಗುತ್ತಿದ್ದರು. ಆಗ ಅವರನ್ನು ನೋಡಬೇಕೆಂದು ಆಕೆ ತನ್ನ ಬಾಗಿಲ ಕಿಂಡಿಯಿಂದ ತದೇಕಧ್ಯಾನದಿಂದ ನೋಡುತ್ತಿದ್ದರು. ಆದರೆ ಆಕೆಯ ದೃಷ್ಟಿಪಥದ ಬಳಿಗೆ ಬರುವುದಕ್ಕೆ ಮುಂಚೆಯೇ ಅವರು ಶಾಲನ್ನು ಮುಖದ ಮೇಲೆ ಎಳೆದುಕೊಳ್ಳುತ್ತಿದ್ದರು. ಕಾತುರತೆಯಿಂದ ಆಕೆ ಮರುದಿನಕ್ಕಾಗಿ ಕಾಯುವಳು. ಮರುದಿನವೂ ಹೀಗೆಯೇ. ಇದನ್ನೋದಿದವರು ಪರಮಹಂಸರ ಕಾಠಿಣ್ಯಹೃದಯದ ಮೇಲೆ ವ್ಯಾಖ್ಯಾನ ಮಾಡಬೇಕಾಗಿಲ್ಲ. ಇದೆಲ್ಲಾ ಕೇವಲ ಪರೀಕ್ಷಾತ್ಮಕಗಳಾದುವು. ನಿಜವಾಗಿಯೂ ಪರಮಹಂಸರು ಶ್ರೀಮಾತೆಯನ್ನು ನೋಡಿಕೊಂಡಂತೆ ಮತ್ತಾವ ಪತಿಯಾದರೂ ನೋಡಿಕೊಂಡರೆ, ಆ ಸಂಸಾರ ಸ್ವರ್ಗವಾದೀತು. ಅಷ್ಟು ಸಹನೆ ನಮ್ಮೆಲ್ಲರಿಗೂ ಇದ್ದಿದ್ದರೆ ಭೂಮಿ ಅಮರಾವತಿಯಾಗುತ್ತಿತ್ತು. ಅವರು ಆಕೆಗೆ ಪ್ರತಿಯೊಂದು ಸಣ್ಣ ವಿಷಯವನ್ನೂ—ಕಡೆಗೆ ದೀಪ ಹಚ್ಚುವುದನ್ನೂ—ಹೇಳಿಕೊಡುತ್ತಿದ್ದುದಲ್ಲದೆ, ಅತ್ಯಂತ ಗಹನವಾದ ವೇದಾಂತ ತತ್ವಗಳನ್ನೂ ತಿಳಿಸುತ್ತಿದ್ದರು. ಸಮಾಧಿಯ ಗಂಭೀರ ತಮ ರಹಸ್ಯಗಳನ್ನು ಬೋಧಿಸುತ್ತಿದ್ದರು.

ಶ್ರೀ ಶಾರದಾದೇವಿ ಸಾಧನೆಯನ್ನು ಅವಲಂಬಿಸುವ ಮೊದಲಲ್ಲಿ ಶರಚ್ಚಂದ್ರನ ಪ್ರತಿಬಿಂಬವನ್ನು ನೀರಿನಲ್ಲಿ ನೋಡಿ, "ಚಂದ್ರಕಿರಣದಂತೆ ಪರಿಶುದ್ಧವಾದ ಮನಸ್ಸನ್ನು ನೀಡುವಂತೆ" ಮಾತೆಯನ್ನು ಬೇಡಿಕೊಳ್ಳುತ್ತಿದ್ದರು. ಅದು ಎಷ್ಟು ಮಟ್ಟಿಗೆ ಫಲಿಸಿತ್ತೆಂದರೆ, ಆಕೆಯನ್ನು ಪಾವಿತ್ರತೆಯ ಮೂರ್ತಿಯೆಂದು ಹೇಳಬಹುದಾಗಿತ್ತು. ಜಗತ್ತಿನಲ್ಲೆಲ್ಲೂ ಕಾಣದ, ದೇವತೆಗಳಲ್ಲಿ ಕಾಣಬಹುದಾದ ಪರಿಶುದ್ಧತೆಯೆಲ್ಲಾ ಒಟ್ಟುಗೂಡಿ ಭಗವತಿಯ ಆಕಾರವನ್ನು ತಾಳಿತ್ತೆಂದು ಹೇಳಬಹುದು. ದಿನದಿನಕ್ಕೆ ಆಕೆಯ ಸಾಧನೆ ಹೆಚ್ಚು ಹೆಚ್ಚು ಗಹನವಾಯಿತು. ದಿನದಿನಕ್ಕೆ ಆಕೆಯ ಮನಸ್ಸು ಪರಮಾತ್ಮನ ಅನುಭವವನ್ನು ಹೊಂದ ತೊಡಗಿತು. ಕಡೆಗೆ ಸಮಾಧಿಯಲ್ಲಿ ಲೀನವಾಯಿತು. ಪರಬ್ರಹ್ಮನ ಅನುಭವವಾಯಿತು.

ನೊದವೊದಲು ಆಕೆ ಗುರುದೇವನ ಸಮಾಧ್ಯವಸ್ಥೆಯನ್ನು ನೋಡಿ ಬೆದರುತ್ತಿದ್ದಳು. ಆದರೆ ಅವರು ಆಕೆಗೆ ಸಮಾಧಿಯಿಂದೆಚ್ಚರಗೊಳಿಸುವ ರಹಸ್ಯವನ್ನು ತಿಳಿಸಿದರು. ಆಕೆಯಲ್ಲಿ ಅವರಿಗೆ ಎಷ್ಟು ಪೂಜ್ಯಭಾವನೆಯಿತ್ತೆಂದರೆ, ಒಂದು ಸಲವೂ ಆಕೆಯನ್ನು ಏಕವಚನದಿಂದ ಕರೆಯುತ್ತಿರಲಿಲ್ಲ. ಮನಸ್ಸಿನಲ್ಲಿ ಆಕೆಯನ್ನು ಜಗನ್ಮಾತೆಯ ಬೇರೊಂದು ರೂಪವೆಂದು ತಿಳಿದಿದ್ದರು. ಅದನ್ನು ವ್ಯಕ್ತಗೊಳಿಸಿಯೂ ಇದ್ದಾರೆ. ಹಾಗೆಯೇ ಆಚರಿಸಿದ್ದಾರೆ. ಆ ದೇವದಂಪತಿಗಳ ನಡುವೆ ಪ್ರಾಪಂಚಿಕತೆ ಎಂದೂ ಬರಲಿಲ್ಲ; ಎಂದೂ ಕಾಮವು ಸುಳಿಯಲಿಲ್ಲ. ಅಮಾನುಷವಾದ ಬ್ರಹ್ಮಚರ್ಯದಿಂದ ಅವರು ಬಾಳಿದರು.

ಪರಮಹಂಸರು ತಮ್ಮಲ್ಲಿಟ್ಟಿದ್ದ ಪ್ರೇಮವನ್ನು ಕುರಿತು ಶಾರದಾದೇವಿಯವರು ಅನೇಕ ವೇಳೆ ತಮ್ಮ ಶಿಷ್ಯಮಂಡಲಿಗೆ ಹೇಳುತ್ತಿದ್ದರು. ಅವರು ಒಂದು ತಡವೆಯೂ ಕೋಪಿಸಿಕೊಳ್ಳಲಿಲ್ಲವಂತೆ. ಹೂವಿನಿಂದ ಕೂಡ ಹೊಡೆಯಲಿಲ್ಲವಂತೆ. ಇಂತಹ ದೈವಿಕ ಪ್ರೇಮವನ್ನು ಮತ್ತೆಲ್ಲಿ ಕಾಣಲಾಗುವುದು? ಆಕೆಯನ್ನು ದೇವಿಯೆಂದು ಭಾವಿಸಿ ಒಂದು ದಿನ ಪೂಜಿಸಿಯೂ ಪೂಜಿಸಿದರು. ಅದುಕಾರಣವೇ ಆಕೆ ವಿಶ್ವಮಾತೆಯಾದುದು.

ಗುರುದೇವನ ಮಹಾಸಮಾಧಿಯಾದ ಕಾಲದಲ್ಲಿ ಶಾರದಾದೇವಿಗೆ ಸ್ವಲ್ಪ ಕಳವಳವಾಯಿತು. ಗೋಳಾಡಿದರು. ಆದರೆ ಸಾವನ್ನು ಒಂದು ಬಾಗಿಲೆಂದು ತಿಳಿದಿದ್ದ ಪರಮಹಂಸರು ಆಕೆಗೆ ಗೋಚರಿಸಿ, "ನಾನು ಈ ಮನೆಯನ್ನು ಬಿಟ್ಟು ಆ ಮನೆಗೆ ಹೋಗಿದ್ದೇನೆ. ಅಷ್ಟೇ. ನೀನೇಕೆ ರೋದಿಸುವೆ?" ಎಂದರಂತೆ. ಆಕೆ ಕೂಡಲೆ ನಿಜವನ್ನು ಗ್ರಹಿಸಿ, ಸಮಾಧಾನಚಿತ್ತರಾದರು. ಗುರುದೇವನನ್ನು ನಿರಂತರ ಮನಸ್ಸಿನಲ್ಲಿ ನಿಲ್ಲಿಸಿಕೊಂಡರು. ಅವರಿಗೆ ಅಗಲಿಕೆಯಾಗಲಿಲ್ಲ, ಇನ್ನೂ ನಿಕಟಸಂಬಂಧವುಂಟಾಯಿತು.

ಇದಾದ ಮೇಲೆ ಭಗವತಿ ಶಾರದಾದೇವಿಯವರು ಶ್ರೀರಾಮಕೃಷ್ಣರ ಶಿಷ್ಯಕೋಟಿಗೆ ಮಾತೆಯಂತೆ ನಿಂತರು. ತಾಯಿ ತನ್ನ ಮಕ್ಕಳನ್ನು ಮಾತ್ರ ಪ್ರೀತಿಸುವಳು. ಮತ್ತು ಎಲ್ಲಾ ಮಕ್ಕಳನ್ನೂ ಒಂದೇ ವಿಧವಾಗಿ ಪ್ರೀತಿಸುವುದಿಲ್ಲ. ಆದರೆ ಶ್ರೀಮಾತೆ ಎಲ್ಲರನ್ನೂ ಮಕ್ಕಳಂತೆ ಭಾವಿಸುತ್ತಿದ್ದರು. ಒಂದೇ ವಿಧವಾಗಿ ಪ್ರೀತಿಸುತ್ತಿದ್ದರು. ವಿಶ್ವವೇ ಆಕೆಗೆ ಮಗು. ಅಂತಹ ಹೃದಯವೈಶಾಲ್ಯವಿದ್ದುದರಿಂದಲೇ ಆಕೆ "ಮಹಾಮಾತೆ"ಯಾದುದು.

ಭಗವತಿ ಶಾರದಾದೇವಿಯ ಪ್ರೇಮಕ್ಕೆ ಜಾತಿ, ಕುಲ, ವರ್ಣ, ಗೋತ್ರಗಳ ಭೇದಗಳ ಅಡ್ಡಿ ಬರುತ್ತಿರಲಿಲ್ಲ. ಸೋದರಿ ನಿವೇದಿತಾ, ವೊದಲಾದ ಆಂಗ್ಲವನಿತೆಯರೊಂದಿಗೆ ಆಕೆ ವಾಸವಾಗಿದ್ದರು, ಎಷ್ಟೋ ಸಲ ಅವರೊಂದಿಗೆ ಆಹಾರಸ್ವೀಕಾರ ಮಾಡುತ್ತಿದ್ದುದೂ ಇದಕ್ಕೆ ಸಾಕ್ಷಿ. ಆಕೆಯು ಮಂದಿಗೆ ಉಪನ್ಯಾಸ ಮಾಡದಿದ್ದರೂ ಹತ್ತಿರದಲ್ಲಿದ್ದ ಕೆಲ ಜನರಿಗೆ ಹೇಳಿದ ಉಪದೇಶವಾಕ್ಯಗಳು ನಿರಂತರ ಅವರ ಮನಸ್ಸಿನಲ್ಲಿ ಮೂಡಿಸುವು. ಬರಿಯ ಉಪದೇಶಗಳಂತಲ್ಲದೆ, ಅವುಗಳ ಹಿಂದೆ ಆಕೆಯ ಧರ್ಮಜೀವನವಿತ್ತು. ಆದುದರಿಂದ ಆಕೆಯ ವಾಕ್ಯಗಳಿಗೆ ಎರಡು ವಿಧವಾದ ಬಲವಿತ್ತು. ಆಕೆಯ ಸರಳ ಜೀವನ, ಧಾರ್ಮಿಕ ಬುದ್ಧಿ, ವೈರಾಗ್ಯಪೂರ್ಣ ಚಿತ್ತ ಇವು ನಮ್ಮ ದೇಶಕ್ಕಿಂದು ಆದರ್ಶಗಳು. ಪುರಾತನ ಕಾಲದಲ್ಲಿನ ಸೀತಾ, ಸಾವಿತ್ರಿಗಳಂತೆ ಆಕೆ ನಮ್ಮ ಪೂಜೆಗೆ ಚಿರಕಾಲ ಅರ್ಹರಾದವರು. ಆಕೆಯ ಧರ್ಮಜ್ಯೋತಿ ನಮ್ಮ ದೇಶದ ಮೇಲೆ—ಪ್ರಪಂಚದ ಮೇಲೆ—ಉಜ್ಜ್ವಲವಾಗಿ ಬೆಳಗುತ್ತಿದೆ, ಆ ಪ್ರಭೆಯನ್ನು ನೋಡಲು ಕಣ್ಣು ತೆಗೆಯಬೇಕು. ನೋಡಿ ಅದರ ದಿವ್ಯ ಸಂದೇಶವನ್ನು ಕೇಳಬೇಕು. ಬಳಿಕ ಆಕೆಯ ಅನುಗ್ರಹದಿಂದ ಆಚರಿಸಬೇಕು. ಆಕೆಯ ಕೃಪಾನುಯ ದೃಷ್ಟಿ ಚಿರಕಾಲ ನಮ್ಮ ಮೇಲೆ ಪ್ರಸರಿಸಿರಲಿ!

'ಸರಸ್ವತಿ'

ಹೆಂಗಸರಿಗಾಗಿ

Box & Folding Camera.

With this Camera you can take excellant photos of men, women, boys, girls, gardens, natural scenery, Race, Marriage party, Procession etc. Unemployed can earn Rs. 5/- daily



Film, Card, Chemicals and instruction book are sent free. Folding Camera Rs. 4/-; Box No. 2 Rs. 2/12/-, No. 1 Rs. 3/12/- Postage extra.

National Trading Co. (K. R.)
P. O. Beadon Street,
4, 5—1. CALCUTTA.

ಅತ್ಯಾಶ್ಚರ್ಯಕರವಾದ ಇಲೆಕ್ಟ್ರೋ-ಟಾನಿಕ್ ಉಪಚಾರ

ಇಂದ್ರಿಯದೌರ್ಬಲ್ಯ, ಎಲ್ಲಾ ತರದ ನರಗಳ ರೋಗಗಳು, ನಿದ್ರೆಯಿಲ್ಲದಿರುವಿಕೆ, ಮೆದುಳಿನ ಅಶಕ್ತತೆ, ನೆನಪು, ಮತ್ತು ಮನೋದಾರ್ಢ್ಯ ಕಡಿಮೆಯಾಗುವಿಕೆ ಇತ್ಯಾದಿಗಳಿಗೆ

ಚೈತನ್ಯ, ಮೆದುಳಿನ ಶಕ್ತಿ ಮತ್ತು ಆರೋಗ್ಯವನ್ನು ತೀವ್ರವಾಗಿಯೂ, ಏನೊಂದು ಬಾಧೆಯಿಲ್ಲದ ರೀತಿಯಲ್ಲಿಯೂ ಉಂಟುಮಾಡುವ, ಶಕ್ತಿವಂತವಾದ ಚೈತನ್ಯದಾಯಕ ಪದಾರ್ಥಗಳನ್ನುಳ್ಳ ಈ ಆಶ್ಚರ್ಯಕರವಾದ ಟಾನಿಕ್ ಗುಳಿಗೆಗಳ ವಿಸ್ಮಯಕರವಾದ ಗುಣಕಾರಿ ಪರಿಣಾಮವನ್ನು ಒಂದೇ ದಿನದಲ್ಲಿ ಕಂಡುಕೊಳ್ಳುವಿರಿ. ಉಷ್ಣಕಾಲದ ಅಶಕ್ತತೆಯು ಮಾಯವಾಗುವುದು. ನಿಮ್ಮ ಜೀರ್ಣಶಕ್ತಿ, ಜೀವನದ ಸುಖ ಮತ್ತು ಮುಖದ ಕಾಂತಿ ಎಣಿಕೆಗಿಂತಲೂ ಅಪರಿಮಿತವಾಗಿ ವರ್ಧಿಸುವುದು—ಚುರುಕಾದ ಮಾನಸಿಕ ಮತ್ತು ಶಾರೀರಕ ಉದ್ಯೋಗಗಳಲ್ಲಿ ನಿರತರಾಗಿರುವವರಿಗೆ ಅದರ್ಶಪ್ರಾಯವಾಗಿರುವುದು. ಅವನ್ನು ಇಂದೇ ಉಪಯೋಗಿಸಿರಿ—ಹೊಸ ಮನುಷ್ಯರಾಗಿರಿ!

ಕ್ರಯ: 25 ಮಾತ್ರೆಗಳ ಒಂದು ಬಾಟಲಿಗೆ ರೂ. 1—4—0. 40 ಮಾತ್ರೆಗಳ ಒಂದು ಬಾಟಲಿಗೆ ರೂ. 2—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಪ್ರೊ. ಜೇಮ್ಸರ ಇಲೆಕ್ಟ್ರೋಟೋನಿಕ್ ಪಿಲ್ಸ್

ಉಚಿತ ಮಾದರಿ. 2 ದಿನಗಳ ಉಪಯೋಗದ ಮಾದರಿ ಬಾಟ್ಲಿಯು 4 ಆಣೆಗಳ ಅಂಚೆ ಚೀಟುಗಳನ್ನು ಕಳುಹಿಸಿದಲ್ಲಿ ಧರ್ಮಾರ್ಥವಾಗಿ ರವಾನಿಸಲ್ಪಡುವುದು.
ವೇದನೆಯನ್ನು ಕೂಡಲೇ ಉಪಶಮನಗೊಳಿಸುತ್ತದೆ.

"ಆಡ್‌ಮನ್ಸ್ ಸ್ಯಾಪ್ಸ್ಸ್ ಸಾಲ್ವ್" (ಬಾಮ್) (ರಿಜಿಸ್ಟರ್ಡ್)

ನೀವು ಆದರ ಪರಿಣಾಮವನ್ನು ಕಂಡು ಆಶ್ಚರ್ಯಪಡುವಿರಿ. ಅದು ಯಾವದೇ ತರದ ಹೊರ ವೇದನೆಯಾಗಿರಲಿ, ಈ ಆಶ್ಚರ್ಯಕರವಾದ ಬಾಮನ್ನು ಕೂಡಲೇ ಸವರಿದಲ್ಲಿ ತೀವ್ರ ಉಪಶಮನವು ಸಿಗುವುದು. ಇಂದೇ ಒಂದು ಭರಣಿಯನ್ನು ಉಪಯೋಗಿಸಿರಿ. ಆ ಮೇಲೆ ನೀವು ಆದನ್ನು ಬಿಡಲಾರಿರಿ. ಆದು ಆಶ್ಚರ್ಯಕರವಾಗಿದೆ. ಎಲ್ಲೆಲ್ಲಿಯೂ ಸಿಗುತ್ತದೆ.
ಕ್ರಯ: ಭರಣಿಯೊಂದರ ರೂ. 1-0-0, ವಿ. ಪಿ. ಚಾರ್ಜು ಪ್ರತ್ಯೇಕ. ಟಪ್ಪಾಲು ಖರ್ಚಿಗಾಗಿ 2 ಆಣೆಗಳ ಅಂಚೆಚೀಟಿನೊಡನೆ ಬರೆದರೆ ಉಚಿತವಾದ ಮಾದರಿಯು ಸಿಗುವುದು.

Sole Agents:—Anglo-Indian Drug & Chemical Co.,
285, Juma Masjid, Bombay No. 2.

ತಾ. ೨—೧—೧೯೩೭ರಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರವರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಪ್ರೊಸಿಡಿಂಗ್ಸ್.—ಜಿ. ಓ. ನಂಬ್ರ ೨೫೬೬ ತಾರೀಕು ೧—೧೨—೧೯೩೬ರ ಹುಕುಮನ್ನು ಓದಲಾಯಿತು.

(ಮುಂದುವರಿದಿದೆ)

ನಿರ್ಣಯ ನಂಬ್ರ ೫:—c ೨ ಗ್ರಾಂಟು ಎಣಿಸಲ್ಪಡತಕ್ಕದ್ದು.....ಈ ಕೆಳಗಿನ ಸಬ್ ರೂಲಿಗೆ ಅನುಸಾರವಾಗಿ ಮಾತ್ರ

I ನಾಲ್ಕನೇ ಮತ್ತು ೫ನೇ ಕ್ಲಾಸಿನ ಪ್ರತಿ ೨ ವಿದ್ಯಾರ್ಥಿಗಳು ೩ ವಿದ್ಯಾರ್ಥಿಗಳೆಂದು ಎಣಿಸಲ್ಪಡಬೇಕು.

ಪ್ರಕೃತದ ಮಕ್ಕಳ ಸಂಖ್ಯೆ ಮತ್ತು ಹಾಜರಿಯು ಗ್ರೆಂಟ್ ಪಡೆಯಲಿಕ್ಕೆ ಯೋಗ್ಯವಾಗಿರಲು ಮಕ್ಕಳ ಸಂಖ್ಯೆಯೂ ಹಾಜರಿಯೂ ಪಕ್ಕನೆ ಹೆಚ್ಚಾಗಬೇಕಾಗುವುದು. ಇದು ಸಂಪೂರ್ಣ ಅಸಾಧ್ಯ. ಆದುದರಿಂದ ಈ ಕೆಳಗಿನ ತಿದ್ದುಪಡಿಯನ್ನು ಸೂಚಿಸಲಾಗಿದೆ.

ತಿದ್ದುಪಡಿ:—(೨) ಪ್ರತಿಯೊಬ್ಬ ಉಪಾಧ್ಯಾಯನಿಗೆ Iನೇ ಮತ್ತು IIನೇ ಕ್ಲಾಸಿನಲ್ಲಿ ಸರಾಸರಿ ಹಾಜರಿಯು ೨೦ ಇರಬೇಕು. ಮತ್ತು III & IV & Vನೇ ದರ್ಜೆಗಳಲ್ಲಿ ೧೫ ಇರಬೇಕು.

೨ (I) IIIನೇ IVನೇ ಮತ್ತು Vನೇ ದರ್ಜೆಯ ಪ್ರತಿ ೨ ವಿದ್ಯಾರ್ಥಿಗಳು ಮೂರೆಂದು ಎಣಿಸಲ್ಪಡಬೇಕು.

ನಿರ್ಣಯ ನಂಬ್ರ ೬:—ಎಸೆಸ್ಸಿಡ್ ಗ್ರಾಂಟು ಕಡಿಮೆ ಮಾಡಲ್ಪಡಬೇಕು. ೬ I (II) & (III) ಈ ರೂಲುಗಳಲ್ಲಿ ನಿರ್ದೇಶಿಸಲ್ಪಟ್ಟ ಮಕ್ಕಳ ಸಂಖ್ಯೆಯು ಮುಂದಕ್ಕೆ ೪ ವರ್ಷಗಳಲ್ಲಿ ಕ್ರಮವಾದ ರೀತಿಯಲ್ಲಿ ಹರಿಮಿತಿಯನ್ನು ಹೊಂದಲು ಪೂರ್ತಿ ಸಾಧ್ಯವಾಗಿರಬೇಕು. ಈ ಕಮಿಟಿಯು ಸರಕಾರದವರು ವಿದ್ಯಾರ್ಥಿಗಳನ್ನು ೫ ವರ್ಷಗಳ ಕೋರ್ಸಿಗೆ ಇಡಬೇಕೆಂದು ಅಪೇಕ್ಷಿಸುತ್ತದೆ. ಮತ್ತು ಶೇಕಡ ಕಡಿತವನ್ನು ೧—೪—೧೯೪೦ರ ಮೇಲೆ ಜಾರಿಗೆ ತರಲು ಸೂಚಿಸುತ್ತದೆ.

ಸೂಚಿಸುವ ತಿದ್ದುಪಡಿ:—೪ & ೫ ದರ್ಜೆಗಳಿರುವಲ್ಲಿ ಮಕ್ಕಳ ಸಂಖ್ಯೆಯು ಶೇಕಡ ೧೫॥ ಗಿಂತ ಕಡಿಮೆಯಾದರೆ ಗ್ರಾಂಟು ಕಡಿಮೆ ಮಾಡಲ್ಪಡುವುದು. ಈ ರೂಲು ೧—೪—೧೯೪೦ರ ವರೆಗೆ ಜಾರಿಯಲ್ಲಿರಬೇಕು.

ನಿರ್ಣಯ ನಂಬ್ರ ೭:—I D-೪-A- ಇಲ್ಲಿ ಸೂಚಿಸಲ್ಪಟ್ಟ ತಿದ್ದುಪಡಿಯು ತಾ. ೧-೧-೧೯೪೧ ನ್ನು ತಾ. ೧—೪—೪೧ ಎಂದು ತಾರೀಕು ವ್ಯತ್ಯಾಸ ಮಾಡಲಿಕ್ಕೆ. ಯಾಕೆಂದರೆ, ತರಬೇತಿತ ಉಪಾಧ್ಯಾಯರು T. S. L. C. ಪರೀಕ್ಷೆಯಿಂದ ಪಾರ್ಟ್‌ಯಲ್ಲಿ ಅಡೊಡನೆ ಮಾತ್ರ ಸಿಗುತ್ತಾರೆ.

ನಿರ್ಣಯ ನಂಬ್ರ ೮:—I (c) (i) A (ii) ಪೂರ್ಣ ಶಿಕ್ಷಣವಿಭಾಗವನ್ನು ಪೂರ್ತಿಗೊಳಿಸುವ ಮೊದಲು ವಿದ್ಯಾರ್ಥಿಗಳನ್ನು ಶಾಲೆಯಿಂದ ತೆಗೆಯಬೇಡಿ.

'ಒಂದು ವರ್ಷಕ್ಕಿಂತ ಹೆಚ್ಚು ಒಂದೇ ಕ್ಲಾಸಿನಲ್ಲಿ' ಎಂಬಲ್ಲಿ '೨ ವರ್ಷಕ್ಕಿಂತ ಹೆಚ್ಚು ಒಂದೇ ಕ್ಲಾಸಿನಲ್ಲಿ' ಎಂದು ಇಡುವುದು. ಇದು ಆಗತ್ಯವಿದೆ. ಯಾಕೆಂದರೆ ಈ ಜಿಲ್ಲೆಯಲ್ಲಿ ಅಗಿಂಡಾಗಿನ ವಿದ್ಯಾರ್ಥಿಗಳ ವಾಸ್ತವ್ಯ ಬದಲಾಯಿಸೋಣ ಅಸ್ವಸ್ಥ ಅಥವಾ ಬೇರೆ ಗೃಹಕೃತ್ಯದ ತೊಂದರೆಗಳು ವಿದ್ಯಾರ್ಥಿಗಳ ಅಭಿವೃದ್ಧಿಗೂ, ಸರಿಯಾದ ಹಾಜರಿಗೂ ತೊಡಕನ್ನುಂಟುಮಾಡುತ್ತವೆ.

ನಿರ್ಣಯ ನಂಬ್ರ ೯:— ಅಳಿಯಸಂತಾನದ ಕುಟುಂಬಗಳಲ್ಲಿ ಮಕ್ಕಳು ಹೆಚ್ಚಾಗಿ ತಂದೆಯ ಮನೆಯಿಂದ ಮಾವನ ಮನೆಗೆ ಕರೆಯಲ್ಪಡುತ್ತಾರೆ. ಮತ್ತು ಇದರಿಂದ ಅವರ ಅಭಿವೃದ್ಧಿಗೆ ತೊಡಕುಂಟಾಗುತ್ತದೆ. ಈ ತೊಂದರೆಯನ್ನು ತಡೆಯಲು ಸಾಧ್ಯವಿಲ್ಲ.

ಆದುದರಿಂದ c (೧) A (೨)ರಲ್ಲಿ ಪೂರ್ಣ ಶಿಕ್ಷಣವಿಭಾಗವನ್ನು ಪೂರ್ತಿಗೊಳಿಸುವ ಮುಂಚೆ ಮಕ್ಕಳನ್ನು ಹಿಂತೆಗೆಯೋಣ ಎಂಬದನ್ನು ಬಿಟ್ಟುಬಿಡುವುದು. ಯಾಕೆಂದರೆ ಇದು ಮೇಲೆ ಹೇಳಿದ ಪ್ರಕಾರ ವಿದ್ಯಾರ್ಥಿಗಳ ಅಯೋಗ್ಯ ಹಾಜರಿಯ ಕಡಿತವೆಂದು ಲೆಕ್ಕಿಸಲ್ಪಡುವುದು. ಇವ್ಮಡಿ ಕಡಿತವು ಕಠಿಣ ಶಿಕ್ಷೆಯೆಂಬಾಗುವುದು.

ನಿರ್ಣಯ ನಂಬ್ರ ೧೦:—(೧) A ೬ರಲ್ಲಿ ಮುಂಜೂರಾಗದ ಪಠ್ಯಪುಸ್ತಕಗಳ ವಿಷಯದಲ್ಲಿ 'ಮಂಜೂರಾದ ಪಠ್ಯಪುಸ್ತಕಗಳ ಕ್ರಮವಾದ ಪಟ್ಟಿಯು ಪ್ರತಿ ೬ ತಿಂಗಳಿಗೊಮ್ಮೆ ಸಂಬಂಧಪಟ್ಟ ಇನ್ಸ್‌ಪೆಕ್ಟಿಂಗ್ ಉದ್ಯೋಗಸ್ಥರಿಂದ ಪರೀಕ್ಷಿಸಲಾರು ಮೂಲಕ ತಿಳಿಸಲ್ಪಡಬೇಕು' ಎಂಬುದನ್ನು ಸೇರಿಸುವುದು. ಉಪಾಧ್ಯಾಯ ಮೆನೇಜರರು F. St. ಜೊಜ್ಜ್ ಶೇಟನ್ನು ಕೊಂಡುಕೊಳ್ಳಲು ಬಲು ಬಡವರಾಗಿದ್ದಾರೆ. ಮತ್ತು ಈಗಿನಂತಹ ಪಠ್ಯಪುಸ್ತಕ, ಲೈಬ್ರೇರಿ ಪುಸ್ತಕ ಎಂಬ ವಿಭಜನೆಯು ಇನ್ಸ್‌ಪೆಕ್ಟಿಂಗ್ ಆಫೀಸರರಿಂದ ಹಲವು ವೇಳೆ ಮಾಡಲ್ಪಡುವುದಿಲ್ಲ. ಮತ್ತು ಮಂಜೂರಾಗದೆ ಪಠ್ಯಪುಸ್ತಕಗಳನ್ನು ಉಪಯೋಗಿಸುವ ತಪ್ಪಿತಕ್ಕೆ ಉಪಾಧ್ಯಾಯ ಮೆನೇಜರರು ತೊಂದರೆಗೆ ಕಾರಣರಾಗುತ್ತಾರೆ.

ನಿರ್ಣಯ ನಂಬ್ರ ೧೧:-VII ಸಬ್ ಕ್ಲಾಸಿನ ಫೂಟ್ ನೋಟಿನಲ್ಲಿ ರಿಜಿಸ್ಟ್ರಿಗಳ ಸುಳ್ಳಿನ ವಿಷಯ ಇತ್ಯಾದಿ ೫೦% ಬದಲಿಗೆ ೩೫% ಇಡುವುದು. ಯಾಕೆಂದರೆ, ಇಲ್ಲವಾದರೆ ಇನ್ಸ್‌ಪೆಕ್ಟಿಂಗ್ ಆಫೀಸರರು ನ್ಯಾಯವಾದ ಕಾರಣವನ್ನು ಕೊಡದೆ ಮತ್ತು ಬೇರೆ ರಿಪೋರ್ಟನ್ನು ಬರೆಯದೆ ೫೦% ನ ವರೆಗೆ ಕಡಿತವನ್ನು ಶಿಫಾರಸು ಮಾಡಬಹುದು. ಇದೊಂದು ಊಹನಾ ಸಂಕಷ್ಟವಲ್ಲ. ಯಾಕೆಂದರೆ ಇಂತಹ ಅತ್ಯಾಚಾರಗಳ ಸಂದರ್ಭಗಳು Councilನ ಇತ್ತೀಚಿಗಿನ ವಿಚಾರಣೆಗಳಲ್ಲಿ ಪ್ರಕಾಶಕ್ಕೆ ಬಂದು ನಿಜಸ್ಥಿತಿಯು ಇತ್ಯರ್ಥವಾಗಿ ಅಂತಹವುಗಳು ಈಗಲೂ ಮೊಳಕೆಗೆ ಬರುತ್ತವೆ.

ನಿರ್ಣಯ ನಂಬ್ರ ೧೨:-I (B) (iii) ೪ನೇ ಗಿಂತ ಜಾಸ್ತಿ ತರಬೇತಿಯಾದ ಉಪಾಧ್ಯಾಯರಿರುವ ಶಾಲೆಗಳಿಗೆ ಬಡ್ತಿ ಗ್ರಾಂಟು ಕೊಡಲ್ಪಡಲಿಕ್ಕಿಲ್ಲ. ಇದರಿಂದ ೪ ಯಾ ೫ ಉಪಾಧ್ಯಾಯರುಗಳಿರುವ ಶಾಲೆಗಳಲ್ಲಿ ಒಬ್ಬ ತರಬೇತಿಯಾಗದ ಉಪಾಧ್ಯಾಯನಿಗೆ ಕಳುಹಿಸಲ್ಪಟ್ಟ ಉಪಾಧ್ಯಾಯರು ಹೆಚ್ಚಿಗೆ ಸರಿಬಳ ಕೊಡುವ ಬೇರೆ ಶಾಲೆಗೆ ಹೋಗುವುದರಿಂದ ಉಪಾಧ್ಯಾಯ ಮ್ಯಾನೇಜರರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ 'ತರಬೇತಿಯಾದ ಉಪಾಧ್ಯಾಯರ ಅರ್ಧಕ್ಕಿಂತ ಹೆಚ್ಚಲ್ಲದ' ಎಂದು ತಿದ್ದಬೇಕು.

ನಿರ್ಣಯ ನಂಬ್ರ ೧೩:—b (೨):— ಮೇಲಿನ ೭ನೇ ಸಬ್ ರೂಲಿನಲ್ಲಿ ೩೫% ಎಂದು ಸೂಚಿಸಿದಂತೆ, ಇಲ್ಲಿ ೫೦%ನ ಬದಲಿಗೆ ೩೫% ಎಂದಿಡುವುದು.

ನಿರ್ಣಯ ನಂಬ್ರ ೧೪:-B. (೩) D. E. O. ಅಥವಾ ಇನ್ಸ್‌ಪೆಕ್ಟೆಸ್, ಡೈರೆಕ್ಟರವರ ಒಪ್ಪಿಗೆ ವಿಸಹ ಶಿಫಾರಸು ಮಾಡಿದ ಬಡ್ತಿಯೂ ಕಡಿತವು ೨೦%ಗಿಂತ ಮಿಕ್ಕದಿದ್ದರೆ—D. E. O. ಅಥವಾ ಇನ್ಸ್‌ಪೆಕ್ಟೆಸ್ ಶಿಫಾರಸು ಮಾಡಿದ ಕಡಿತವುಳ್ಳ ಶಾಲೆಯ ಎಸೆಸ್ಸ್ ಗ್ರಾಂಟಿಗೆ ಬಡ್ತಿಯು ಕೊಡಲಿಕ್ಕಿಲ್ಲ. ಇಲ್ಲಿ ಮೇಲೆ ಕೊಟ್ಟ ೨ ಮತ್ತು ೩ನೇ ಷರಗಳನ್ನು ಬಿಡುವುದು. ಇಲ್ಲಿ ಕಡಿತ ಅಥವಾ ಬಡ್ತಿಗೆ ಡೈರೆಕ್ಟರವರ ಒಪ್ಪಿಗೆಯು ಅನಗತ್ಯವೆಂದು ಕಾಣುತ್ತದೆ. ಯಾಕೆಂದರೆ, ನೊಂದ ಪೋರ್ಟ್‌ಯವರಿಗೆ ಡೈರೆಕ್ಟರ ವರೆಗೆ ಅಪ್ಪೀಲುಮಾಡುವ ಹಕ್ಕಿದೆ. ಆದುದರಿಂದ 'ಡೈರೆಕ್ಟರವರ ಒಪ್ಪಿಗೆ ಇಲ್ಲದೆ' ಎಂಬ ಶಬ್ದಗಳನ್ನು ಬಿಡಬಹುದು. ಯಾಕೆಂದರೆ, Inspecting Officers ಮಾಡಿದ ಹೆಚ್ಚು ಕಮ್ಮಿ ಮೇಲೆ ಯಥಾರ್ಥವನ್ನು ಮಾಡಲು ಕೌನ್ಸಿಲಿಗೆ ಅಧಿಕಾರವಿರಬೇಕು. ಪಾರಾ ೧೩ರಲ್ಲಿ 'ಕೌನ್ಸಿಲಿಗೆ ಅವಶ್ಯ ಕಂಡ ವಿಚಾರವನ್ನು ಮಾಡುವುದು' ಎಂದು ರೂಲಿನಲ್ಲಿ ಕಾಣುವುದರಿಂದ Inspecting Officerರರು ತಮ್ಮಷ್ಟಕ್ಕೆ ತಮ್ಮ ಸ್ವಂತ ಅಭಿಪ್ರಾಯವನ್ನು ಕೌನ್ಸಿಲಿನ ಅಭಿಪ್ರಾಯಕ್ಕೆ ವಿರೋಧವಾಗಿ ರಿಪೋರ್ಟು ಮಾಡಲಿಕ್ಕೆ ಬಿಡುವುದು ಕೌನ್ಸಿಲಿಗೆ ಭೂಷಣವಲ್ಲವೆಂದು ಸಮರ್ಥಿಸುವುದಲ್ಲ.

ನಿರ್ಣಯ ನಂಬ್ರ ೧೫:-d (ii) ಪ್ರತಿ ೪ & ೫ ಕ್ಲಾಸುಗಳಲ್ಲಿ ೩೫%ಗಿಂತ ಕಡಿಮೆ ಎಂಬಲ್ಲಿ ೧—೪—೧೯೪೦ರ ವರೆಗೆ ೧೨॥% ಎಂದಿಡುವುದು. ಇದಕ್ಕೆ ಕಾರಣಗಳನ್ನು ಮೇಲೆಯೇ ಕೊಡಲಾಗಿವೆ.

ನಿರ್ಣಯ ನಂಬ್ರ ೧೬:-D (iii) ಇಲ್ಲಿ 'District Educational Council'ನ ಒಪ್ಪಿಗೆಗೆ ಒಳಪಟ್ಟ' ಎಂಬಾದನ್ನು ಕೊನೆಗೆ ಸೇರಿಸುವುದು Inspecting Officerರರು ವ್ಯಕ್ತಿಪರವಾಗಿ ಮಾಡಬಹುದಾದ ಹೆಚ್ಚು ಕಡಿಮೆಯನ್ನು ನಿಲ್ಲಿಸಲು ಅಗತ್ಯವಾಗಿದೆ.

ನಿರ್ಣಯ ನಂಬ್ರ ೧೭:-(೨) ಒಂದು ತಿಂಗಳ ಬದಲಿಗೆ ೩ ತಿಂಗಳಿಂತ ಇಡುವುದು. ಕಾರಣಗಳು ಮೇಲೆ ಕೊಡಲಾಗಿವೆ.

ನಿರ್ಣಯ ನಂಬ್ರ ೧೮:-(g) ಮೊದಲಿನ ತಿದ್ದುಪಡಿಯಲ್ಲಿ ರೂಲ್ ೩ A ಎಂಬುದು ಬಿಡಲ್ಪಡುವುದೆಂದು ಹೇಳಲಾಗಿದೆ. ಸಪ್ಲಿಮೆಂಟರೀ ವ್ಯಾಡಿಗೆ ಸೇರಿದ ಶಾಲೆಗಳ ವಿಷಯದಲ್ಲಿ ಇದು ಅಗತ್ಯವಿರುವುದರಿಂದ ಇದನ್ನು ಹಾಗೆಯೇ ಇಡಬಹುದು.

ನಿರ್ಣಯ ನಂಬ್ರ ೧೯:-೪ A 'ಉಪಾಧ್ಯಾಯರ ಪರಿಮಿತಿ' ಇಲ್ಲಿ 'ಎರಡು ತರಬೇತಾದ ಉಪಾಧ್ಯಾಯರಿಗೆ ಒಬ್ಬ ತರಬೇತಿಯಾಗದ ಉಪಾಧ್ಯಾಯ' ಎಂಬಲ್ಲಿ ಒಟ್ಟು ಉಪಾಧ್ಯಾಯರ ಅರ್ಧಕ್ಕಿಂತ ಹೆಚ್ಚಲ್ಲದ ಎಂದಿಡುವುದು.

ನಿರ್ಣಯ ನಂಬ್ರ ೨೦:-V (೯) i & iii ಎಪ್ಪೆಂಡಿಕ್ಸ್ ೩ರಲ್ಲಿ ತಿಂಗಳ ರಿಟರ್ನ ನಂಬ್ರ ೯:—ಈ ವಿಷಯ ಬಿಟ್ಟುಬಿಡಬಹುದು. ಯಾಕೆಂದರೆ ಇಲ್ಲಿ ವಿದ್ಯಾಬೋಧನೆಗೆ ಸಂಬಂಧಪಟ್ಟ ಯೋಗ್ಯ ಚರ್ಚೆಗಳೂ ನಡಿಸಲ್ಪಡದಿರುವುದರಿಂದಲೂ, ಮತ್ತು ಇತ್ತೀಚಿನ ವಿಷಯಗಳಲ್ಲದ ಅನ್ಯ ಸಂಗತಿಗಳು ಚರ್ಚಿಸಲ್ಪಡುವುದರಿಂದ. ನ್ಯಾಯವಾದ ಯೋಗ್ಯ ಕೆಲಸಗಳ ಭಕ್ಷಿಸಿ ವಿಸಹ ಉಪಾಧ್ಯಾಯರಿಗೆ ಈ ಮೀಟಿಂಗುಗಳು ಅನವಶ್ಯವಾಗಿಯೂ, ಬೇಸರಹಾಯಕವಾಗಿಯೂ, ಇರುತ್ತವೆ. ಸಭೆಗಳನ್ನು ಆಭರುಚಿಯುಳ್ಳದ್ದಾಗಿ ಮಾಡಿದರೆ, ಉಪಾಧ್ಯಾಯರು, ಸಭೆಗಳಿಗೆ ಬರಲು ತಪ್ಪಿಸಲಿಕ್ಕಿಲ್ಲ. ಮತ್ತು ಹೆಚ್ಚಿನ ಸೆಂಟರುಗಳಲ್ಲಿ ಒಂದೇ ಕಾಲದಲ್ಲಿ ಮೀಟಿಂಗುಗಳು ಜರಗಿಸಲ್ಪಡುವುದರಿಂದ ಇನ್ಸ್‌ಪೆಕ್ಟಿಂಗ್ ಆಫೀಸರರು ತಮ್ಮ ರೇಂಜಿನ ಎಲ್ಲಾ ಮೀಟಿಂಗುಗಳಿಗೆ ದಯಮಾಡಿಸಲು ಸಾಧ್ಯವಿಲ್ಲ. ಕ್ರಮವಾದ ಕೆಲಸವು ನಡೆಸಲಾಗುವುದಿಲ್ಲ. ಕೆಲವೆಡೆಗಳಲ್ಲಿ ನಡುಬಿನಿಲಿನಲ್ಲಿ ಕೆಲವು ಮೈಲುಗಳ ಸಂಚಾರದ ಅನಂತರ ಕುಡಿಯಲು ನೀರು ಕೂಡ ಹೊರಕೆಲು ಪರ್ಯಾಪ್ತವಾಗಿದೆ. ಭಗಳು ಇರುವಲ್ಲಿಯೂ, ಮತ್ತು Insp. Officerರರು ಸಭೆಗಳಿಗೆ ದಯೆಮಾಡಿಸಿ, ಹಳೆದಂತೆ, ಉಪಾಧ್ಯಾಯರ ಮನಸ್ಸಿಗೆ ಯುಕ್ತವನ್ನು ಸಭೆಯಲ್ಲಿ ಮಾತಾಡಲು ಸಮ್ಮತ ಕೊಡುಲ್ಲಿಯೂ, ಸಭೆಗಳು ಸಾಮಾನ್ಯವಾಗಿ ಎಲ್ಲರ ಮೆಚ್ಚಿಗೆಗೆ ಭಾಗಿಯಾಗುವುದಿಲ್ಲ. ಎಷ್ಟರ ವರೆಗೆ ಸರಿಯಾದ ಯೋಗ್ಯಕ್ರಮಗಳು ಅನುಸರಣೆಗೆ ಬರುವುದಿಲ್ಲವೋ ಮತ್ತು ಏನೂ ಕೆಲಸವಾಗುವುದಿಲ್ಲವೋ ಅಷ್ಟರ ವರೆಗೆ ಇಂತಹ ಮಾಸಿಕ ಸಭೆಗಳು ನಿರುತ್ಸಾಹಕರ ಮತ್ತು ನಿರರ್ಥಕವಾಗಿರುತ್ತವೆ. Inspecting Officerರರು ಕಾಲಕ್ಕನುವಾಗಿ ಯೋಗ್ಯ ಕಾರ್ಯಕ್ರಮವನ್ನು ಸೂಚಿಸಿ ಸಭೆಗಳನ್ನು ಯಶಸ್ವಿಯಾಗಿ ಮಾಡಬೇಕು.

"ಮೂಲ್ಕಿ ಗ್ರೇಂಡ್ ರೇಫ್‌ಲ್"

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ.

ಲೆಫ್ಟಿ ಆಫೀಸರು ತಾರೀಕು	ಸೋಡ್ತಿ ತೆಗೆಯುವ ತಾರೀಕು
25—1—1937	31—1—1937

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ.

ಜಾಗ್ರತೆ ಮಾಡಿರಿ! ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ!!

ಸೋಡ್ತಿ ತೆಗೆಯುವ ತಾರೀಕೆನ್ನು ಯಾವ ಕಾರಣದಿಂದಲೂ ಮುಂದರಿಸಿಡೋಣಾಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ:—

ಕಾರ್ಯದರ್ಶಿ,
"ದಿ ಮೂಲ್ಕಿ ಗ್ರೇಂಡ್ ರೇಫ್‌ಲ್"
ಮೂಲ್ಕಿ, ದ. ಕನ್ನಡ.



ಬರುವುದು. ಜಾಗ್ರತೆಪಡಿಸಿ. ಬರುವುದಕ್ಕೆ ಸಿದ್ಧವಾಗಿರುವುದು.

ಚಲನಚಿತ್ರಕಲಾಪ್ರೇಮಿಗಳಿಗೆ ಶುಭವಾರ್ತೆ!

ಮೈಸೂರಿನವರಿಂದ ಅತಿಶ್ರಮವನ್ನು ಪಹಿಸಿ ಕನ್ನಡನಾಡಿನ ಕಳೆಯೇರಿಸುವುದಕ್ಕಾಗಿ ತಯಾರಿಸಿ
ಅಭ್ಯುದಯದಲ್ಲಿ ಹೊರಬೀಳುವುದಕ್ಕೆ ಸಿದ್ಧವಾಗಿರುವ ರಸಭರಿತವಾದ

ರಾಜಸೂಯ

(ಕನ್ನಡ ಭಾಷೆಯಲ್ಲಿ)

ಇದರಲ್ಲಿ ಕಾಣಬರುವ ಕಲಾಕೋವಿದರ ಚತುರತೆಯೂ, ದೃಶ್ಯಗಳ ಚಮತ್ಕಾರವೂ,
ಸಮಯೋಚಿತವಾದ ಗಾನರಸವೂ, ಅಲ್ಲಲ್ಲಿ ಕಾಣಬರುವ ಹಾಸ್ಯ, ಕಲಾಪಗಳೂ,
ಮಹನೀಯರ ಮನಸ್ಸನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ.

Ready for Release! ಪ್ರದರ್ಶನಕ್ಕೆ ಸಿದ್ಧವಾಗಿರುವುದು!!

Apply to:–

M/s. Mysore Sound Studio, Limited,

Dwaraka Villa, Malleswaram, BANGALORE.

ಮೈಸೂರು ಸೌಂಡು ಸ್ಟೂಡಿಯೋ, ಲಿಮಿಟೆಡ್,

'ದ್ವಾರಕವಿಲ್ಲೆ' ಮಲ್ಲೇಶ್ವರಂ, ಬೆಂಗಳೂರು.

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಆಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸ್ಟೋಕಿಸ್ಟರಲ್ಲಿ ದೊರೆಯುತ್ತದೆ.

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲುಜ್ಜುವುದಕ್ಕೆ ಉಪಯೋಗಿಸು
"ನೀಮ್" ಬೇವಿನ ಕಡ್ಡಿಯು ವಿಷಹಾರಿಯಾದ ಮತ್ತು ಸ್ತಂಭಕವಾದ ಗುಣಗ
ಅವರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯಾ
ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರು
ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಂತಮಂಜನವನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ
ಮಾರ್ಗೊಫ್ರಿಸ್ "ನೀಮ್ ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

ಐತಿಹ್ಯ.

ಯಶಸ್ವಿಯಾದ ಪ್ರತಿಯೊ
ಐತಿಹ್ಯವು, ಅಲ್ಲಿಲ್ಲದಿದ್ದರೆ
ಯಶಸ್ಸಿನ ಅಡಳಿತದ ಕ
ದೆಯೋ, ಆ ಸ್ಥಾ

ಾದ್ಯಮದ ಬೆನ್ನೆಲುಬು ಐತಿಹ್ಯವೇ. ಮುಖ್ಯ ಶಕ್ತಿಯಾದ—
ಪ್ಯವರ್ಗದಂತೆ, ನತಿಸಿಹೋಗುತ್ತವೆ. ಮೂವತ್ತು ವರ್ಷಗಳ
ನ" ಐತಿಹ್ಯವು ಬೆಳೆಯುತ್ತ ಬಂದಿದೆ. "ನ್ಯಾಶನಲ್" ಇಂದೇನಾಗಿ
ದೇ.

ಾರೆನ್ಸ್ ಕೊ., ಲಿಮಿಟೆಡ್,

ಹೆಡ್ ಆಫೀಸ್: ಕಲ್ಕತ್ತಾ.

ಏಜೆನ್ಸಿ ಪರತ್ತು ಮೊದಲಾದುವುಗಳಿಗೆ ಬರೆದುಕೊಳ್ಳಿ:—

ಗ್ ಸೆಕ್ರಟರಿ,
ಆಫೀಸ್,
ಸ್ಟ್ರೀಟ್, ಮಧುರೆ.

ಬ್ರಾಂಚ್ ಸೆಕ್ರಟರಿ,
ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
362, ಚೈನಾ ಬಜಾರ್ ರೋಡ್,
ಎಸ್ಪ್ಲನೇಡ್, ಮದ್ರಾಸ್.

ದಿ ಸಬ್ ಬ್ರಾಂಚ್ ಸೆಕ್ರಟರಿ,
ದೇನಾಂಗ ಬ್ಯಾಂಕ್ ಬಿಲ್ಡಿಂಗ್ಸ್,
ಕೆಂಪೇ ಗೌಡ ರೋಡ್,
ಬೆಂಗಳೂರು ಸಿಟಿ.

ಬೆಂಕಿ, ಮೋಟರು ಮತ್ತೂ ಕೆಲಸಗಾರರ
ಪರಿಹಾರಗಳ ವಿಮೆಯ ಸಂಬಂಧ
ಎಸೋಶಿಯೇಟೆಡ್
ನ್ಯಾಶನಲ್ ಫಯರ್ ಎಂಡ್ ಜನರಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್‌ನ್ನು ಕೇಳಿ.

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಪೂರ್ವಕವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ಬೆಲೆ ರೂಪಾಯಿ ೧—೮—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮ ಕೃಷ್ಣಯ್ಯನವರಿಂದ ಭಾಷಾಂತರಿಸಲ್ಪಟ್ಟಿತು. ಸುಲಭ ಶೈಲಿ, ಪರ್ವರಿಗೂ ಅನುನಿತ್ಯಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1 – 8 – 0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು,

THE BANK OF MANGALORE, LTD.

Head Office:– **Mangalore.**

MANGALORE.

ESTD. 1931.

Branches:– **Mudabidri, Padubidri & Panemangalore.**

Chairman:– **Philip J. Chandran Esq.,** B. A.,

Retd. Dt. Registrar & Asst. Registrar of Joint Stock Companies, S. K.

On & from 1st of January 1937, Fixed Deposits will be received at following rates of interest.

For 3 months	3½%	For 12 months	5 %
,, 6 ,,	4 %	,, 24 ,, & upwards	5½%

INTEREST PAYABLE QUARTERLY.

SAVINGS BANK DEPOSITS: 3½% on daily balance.

ALL KINDS OF BANKING BUSINESS UNDERTAKEN.

U. R. Pai,
N. Upendra Pai,
Managing Directors.